ಸಂಪುಟ: 05 ಸಂಚಿಕೆ: 62 ಪುಟಗಳು: 08 ಶುಕ್ರವಾರ 16 ಮೇ 2025
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

**ಮುಂಜಾನೆ ಮಾತು**

ಧರ್ಮವು ಜೀವನವನ್ನು ಮತ್ತು ಎಲ್ಲಾ ಆದರ್ಶಗಳನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯುತ್ತದೆ. ಈ ಕಾರಣಕ್ಕಾಗಿ ನಾವು ನಮ್ಮ ಧರ್ಮವನ್ನು ಮೊದಲು ಪಾಲಿಸಬೇಕು.


# ಉದಯ ವಾಹಿನಿ

UV ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ


## ಅಕ್ರಮ ಕಡಿತಲೆ ತಡೆಗೆ ಈಶ್ವರ್ ಖಂಡ್ರೆ ಸೂಚನೆ

• ಉದಯವಾಹಿನಿ, ದಾವಣಗೆರೆ


ಸರಕಾರಿ ಮತ್ತು ಅರಣ್ಯ ಭೂಮಿಯಲ್ಲಿರುವ ಬೆಲೆ ಬಾಳುವ ಶ್ರೀಗಂಧದ ಮರಗಳಿಗೆ ಜಿಯೋ ಟ್ಯಾಗ್ ಮಾಡಿ, ಒಂದೇ ಒಂದು ಶ್ರೀಗಂಧ ಮರವೂ ಅಕ್ರಮ ಕಡಿತಲೆ ಆಗದಂತೆ ಎಚ್ಚರ ವಹಿಸಲು ಅರಣ್ಯ ಸಚಿವ ಈಶ್ವರ ಖಂಡ್ರೆ ಸೂಚನೆ ನೀಡಿದರು.

ಅರಣ್ಯ ಮತ್ತು ಪರಿಸರ ಇಲಾಖೆಯ ಅಧಿಕಾರಿಗಳೊಂದಿಗೆ ಇಲ್ಲಿನ ಅರಣ್ಯ ಭವನದಲ್ಲಿ ಗುರುವಾರ ಪ್ರಗತಿ ಪರಿಶೀಲನೆ ನಡೆಸಿ, ಶ್ರೀಗಂಧದ ಕಳವು ನಿಯಂತ್ರಿಸಲು ಜಿಯೋ ಟ್ಯಾಗ್ ಮಾಡಲು ಮತ್ತು ಕಳುವಾದರೆ ಸಂಬಂಧಿತ ಗಸ್ತು ಸಿಬ್ಬಂದಿಯನ್ನು ಹೊಣೆ ಮಾಡಲು ಸೂಚಿಸಿದರು.

ಜಿಲ್ಲೆಯಲ್ಲಿ ಸೆಕ್ಷನ್ 4 ಆಗಿರುವ ಕಂದಾಯ ಭೂಮಿಯನ್ನು ಸೆಕ್ಷನ್ 17 ಮಾಡಿ, ಅರಣ್ಯ ಎಂದು ಘೋಷಿಸಲು ತ್ವರಿತ ಕ್ರಮ ಕೈಗೊಳ್ಳಬೇಕು. ಹವಾಮಾನ ಬದಲಾವಣೆಯ ಪ್ರಸಕ್ತ ಕಾಲಘಟ್ಟದಲ್ಲಿ ಹಸಿರು ಹೊದಿಕೆಯ ಹೆಚ್ಚಳವೇ ಪರಿಹಾರವಾಗಿದ್ದು, ಮುಂಬರುವ ವನಮಹೋತ್ಸವದ ಸಂದರ್ಭದಲ್ಲಿ ರಸ್ತೆಯ ಎರಡೂ ಬದಿಗಳಲ್ಲಿ ಎತ್ತರದ ಸಸಿಗಳನ್ನು ನೆಟ್ಟು ಪೋಷಿಸುವಂತೆ ತಿಳಿಸಿದರು.

**ಮಾಲಿನ್ಯ ನಿಯಂತ್ರಣಕ್ಕೆ ಸೂಚನೆ**

ದಾವಣಗೆರೆಯಲ್ಲಿ ವಾಯು ಮಾಲಿನ್ಯ



ಹೆಚ್ಚಾಗುತ್ತಿದೆ ಎಂಬ ದೂರುಗಳು ಬಂದಿದ್ದು, ಇದರ ನಿಯಂತ್ರಣಕ್ಕೆ ಅಗತ್ಯ ಕ್ರಮ ಕೈಗೊಳ್ಳಬೇಕು. ದೈನಂದಿನ ಆಧಾರದಲ್ಲಿ ವಾಯು ಮಾಲಿನ್ಯದ ಪರಿಶೀಲನೆ ನಡೆಸಿ ಹೆಚ್ಚು ಮಾಲಿನ್ಯ ಇರುವ ಪ್ರದೇಶದಲ್ಲಿ ಅದನ್ನು ತಗ್ಗಿಸಲು, ಅಗತ್ಯ ಕ್ರಮ ಕೈಗೊಳ್ಳಲು ಸಂಬಂಧಿತ ಸ್ಥಳೀಯ ಸಂಸ್ಥೆಗೆ ಸೂಚನೆ ನೀಡಲು ತಿಳಿಸಿದರು.

**ಅರಣ್ಯದಲ್ಲಿನ ಶ್ರೀಗಂಧದ ಮರಕ್ಕೆ ಜಿಯೋ ಟ್ಯಾಗ್**

ಜಿಲ್ಲೆಯ ಕೆಲವು ಕೈಗಾರಿಕೆಗಳಿಂದ ನದಿಗೆ ಮಾಲಿನ್ಯ ಹರಿಯುತ್ತಿದೆ ಎಂಬ ದೂರುಗಳಿದ್ದು, ಜಲ ಮೂಲಗಳು ಕಲುಷಿತವಾಗದಂತೆ ಆ ಕೈಗಾರಿಕೆಗಳಿಗೆ ನೋಟಿಸ್ ನೀಡಿ ಕ್ರಮ ಕೈಗೊಳ್ಳಲು ಪರಿಸರ ಅಧಿಕಾರಿಗಳಿಗೆ ಸ್ಪಷ್ಟ ಸೂಚನೆ ನೀಡಿದರು. ಇದಕ್ಕೂ ಮುನ್ನ ಪರಿಸರ ಇಲಾಖೆಯ ವಾಯು ಮಾಲಿನ್ಯ ನಿಗಾ ಮತ್ತು ಪರೀಕ್ಷಾ ಪ್ರಯೋಗಾಲಯ, ತ್ಯಾಜ್ಯ ಜಲ ಸಂಸ್ಕರಣಾ ಘಟಕ ಹಾಗೂ ನರ್ಸರಿಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

**ನೋಟಿಸ್ ನೀಡಿ:** ಕುಡಿಯುವ ನೀರು ಪರಿಶುದ್ಧವಾಗಿರಬೇಕು. ಯಾರೂ ಕಲುಷಿತ ನೀರು ಸೇವಿಸಿ ಅಸ್ವಸ್ಥರಾಗಬಾರದು, ಮರಣ ಹೊಂದಬಾರದು. ಈ ನಿಟ್ಟಿನಲ್ಲಿ ನಿಯಮಿತವಾಗಿ ನೀರು ಪೂರೈಕೆ ಮಾಡುವ ಜಲ ಮೂಲಗಳ ಜಲ ಪರೀಕ್ಷಿಸಿ, ಕಲುಷಿತವಾಗಿದ್ದರೆ ಪಂಚಾಯ್ತಿಗಳಿಗೆ, ಸ್ಥಳೀಯ ಸಂಸ್ಥೆಗಳಿಗೆ ನೋಟಿಸ್ ನೀಡುವಂತೆ ಅರಣ್ಯ ಸಚಿವ ಈಶ್ವರ ಖಂಡ್ರೆ ನಿರ್ದೇಶನ ನೀಡಿದರು.

ಇದೇ ಸಂದರ್ಭದಲ್ಲಿ ದಾವಣಗೆರೆ ಅರಣ್ಯ ಇಲಾಖೆ ಬಳಿಯಿರುವ ನರ್ಸರಿಗೆ ಸಚಿವ ಈಶ್ವರ ಖಂಡ್ರೆ, ಭೇಟಿ ನೀಡಿ ಪರಿಶೀಲನೆ ನಡೆಸಿದರು.

## ಸರ್ಕಾರ 2 ವರ್ಷ ಪೂರ್ಯೈಸುತ್ತಿರುವ ಹಿನ್ನೆಲೆಯಲ್ಲಿ ಕಾರ್ಯಕ್ರಮ

• ಉದಯವಾಹಿನಿ, ಬಳ್ಳಾರಿ

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮೇ 16 ರಂದು ಬಳ್ಳಾರಿ ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳುವರು. ಮೇ 16 ರಂದು ಬೆಳಿಗೆ 09.30 ಗಂಟೆಗೆ ಮೈಸೂರಿನಿಂದ ವಿಶೇಷ ವಿಮಾನದ ಮೂಲಕ ಹೊರಟು ಬೆಳಿಗ್ಗ 10.30 ಕ್ಕೆ ತೋರಣಗಲ್ಲ ಜಿಂದಾಲ್ ಏರ್ಸ್ಟ್ರಿಪ್‌ಗೆ ಆಗಮಿಸುವರು. ನಂತರ ಬೆಳಿಗ್ಗ 10.35 ಗಂಟೆಗೆ ತೋರಣ ಗಲ್ಲ ಜಿಂದಾಲ್ ಹೊಸಪೇಟೆಗೆ ಆಗಮಿಸಿ, ಮೇ 20 ರಂದು ರಾಜ್ಯ ಸರ್ಕಾರವು ಎರಡು ವರ್ಷ ಪೂರ್ಯೈಸುತ್ತಿರುವ ಹಿನ್ನೆಲೆಯಲ್ಲಿ ಕಾರ್ಯಕ್ರಮ ಆಯೋಜಿಸುತ್ತಿರುವ ಸ್ಥಳ ಪರಿಶೀಲನೆ ನಡೆಸುವರು. ಬಳಿಕ ಮಧ್ಯಾಹ್ನ 02.30 ಗಂಟೆಗೆ ಅಲ್ಲಿಂದ ಹೊರಟು, 02.55 ಗಂಟೆಗೆ ತೋರಣಗಲ್ಲ ಜಿಂದಾಲ್ ರ್‍ಯಾಂಪ್ ಆಗಮಿಸಿ, 03 ಗಂಟೆಗೆ ವಿಶೇಷ ವಿಮಾನದ ಮೂಲಕ ಬೆಂಗಳೂರಿಗೆ ಪ್ರಯಾಣಿಸುವರು ಎಂದು ಉಪ ಮುಖ್ಯಮಂತ್ರಿಯವರ ಹೆಚ್ಚುವರಿ ಆಪ್ತ ಕಾರ್ಯದರ್ಶಿ ಬಿ.ಎಸ್.ಶ್ರೀಧರ್ ಅವರು ತಿಳಿಸಿದ್ದಾರೆ.

## ಬೆಂಗಳೂರಿನಲ್ಲಿ 60.48 ಕೋಟಿ ಮೌಲ್ಯದ ಅಕ್ರಮ ಒತ್ತುವರಿ ತೆರವು

• ಉದಯವಾಹಿನಿ, ಬೆಂಗಳೂರು

ಜಿಲ್ಲಾ ವ್ಯಾಪ್ತಿಯಲ್ಲಿ ಒತ್ತುವರಿಯಾಗಿರುವ ರೂ. 60.48 ಕೋಟಿ ಅಂದಾಜು ಮೌಲ್ಯದ ಒಟ್ಟು 9 ಎಕರೆ 0.16 ಗುಂಟೆ ಸರ್ಕಾರಿ ಜಮೀನನ್ನು ಬೆಂಗಳೂರು ನಗರ ಜಿಲ್ಲಾಧಿಕಾರಿಗಳಾದ ಜಿ.ಜಗದೀಶ ಅವರ ನೇತೃತ್ವದಲ್ಲಿ ತೆರವುಗೊಳಿಸಿ ವಶಕ್ಕೆ ಪಡೆಯಲಾಯಿತು. ಬೆಂಗಳೂರು ನಗರ ಜಿಲ್ಲೆ ಯಾದ್ಯಂತ ವಿವಿಧ ತಾಲ್ಲೂಕುಗಳ ತಹಶೀಲ್ದಾರ್ ಗಳು ತಮ್ಮ ವ್ಯಾಪ್ತಿಯಲ್ಲಿ ಅಕ್ರಮವಾಗಿ ಒತ್ತುವರಿಯಾಗಿದ್ದ ಗೋಮಾಳ, ಸರ್ಕಾರಿ ಕುಂಟೆ, ಕುಂಡು ಕೆರೆ, ಸರ್ಕಾರಿ ಕರೆ, ಕುಂಟೆ, ರಾಜಕಾಲುವೆ, ಸ್ಮಶಾನ, ಬಂಡಿದಾರಿ, ಗುಂಡು ತೋಪು, ಸರ್ಕಾರಿ ಖರಾಬು, ಸರ್ಕಾರಿ ಸೇಂದಿವನ ಜಾಗಗಳಿಗೆ ಭೇಟಿ ನೀಡಿ ತೆರವು ಕಾರ್ಯಾಚರಣೆ ಕೈಗೊಂಡರು. ಬೆಂಗಳೂರು ಪೂರ್ವ ತಾಲ್ಲೂಕಿನ ಬಿದರಹಳ್ಳಿ ಹೋಬಳಿಯ ಬಿದರಹಳ್ಳಿ ಗ್ರಾಮದ ಸ.ನಂ 193ರ ಗೋಮಾಳ ಒಟ್ಟು ಒತ್ತುವರಿ ತೆರವುಗೊಳಿಸಿರುವ .50 ಲಕ್ಷಗಳಾಗಿರುತ್ತದೆ. ಬಿದರಹಳ್ಳಿ ಹೋಬಳಿಯ ಕೊಡಿಗೆಹಳ್ಳಿ ಗ್ರಾಮದ ಸ.ನಂ 40 ರ ಸರ್ಕಾರಿ ಕುಂಟೆ ಒಟ್ಟು ಒತ್ತುವರಿ ತೆರವುಗೊಳಿಸಿರುವ 2.00ಕೋಟಿಗಳಾಗಿರುತ್ತದೆ. ವರ್ತೂರು ಹೋಬಳಿಯ ವಾಲೇಪುರ ಗ್ರಾಮದ ಸ.ನಂ. 29 ರ ಗೋಮಾಳ ಒಟ್ಟು ಒತ್ತುವರಿ ತೆರವುಗೊಳಿಸಿದ್ದಾರೆ.

## ಬೆಂಗಳೂರು ಬೇಸಿಗೆ ರೇಸ್‌ಗಳು ಶನಿವಾರದಿಂದ ಆರಂಭ

• ಉದಯವಾಹಿನಿ, ಬೆಂಗಳೂರು

ಉದ್ಯಾನನಗರಿಯಲ್ಲಿ ಈ ವರ್ಷದ 'ಬೆಂಗಳೂರು ಬೇಸಿಗೆ ರೇಸ್'ಗಳು ಶನಿವಾರದಿಂದ ಆರಂಭವಾಗಲಿವೆ. ಈ ಬಾರಿ ಒಟ್ಟು 24 ರೇಸ್ ದಿನಗಳನ್ನು ನಿಗದಿಪಡಿಸಲಾಗಿದೆ. ಈ ಋತುವು ಆಗಸ್ಟ್ 1ರಂದು ಮುಕ್ತಾಯಗೊಳ್ಳಲಿದೆ. ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಬೆಂಗಳೂರು ಟರ್ಫ್ ಕ್ಲಬ್ ಅಧ್ಯಕ್ಷ ಹಾಗೂ ಹಿರಿಯ ಸ್ಟೀವರ್ಡ್ ಆರ್.ಮಂಜುನಾಥ್ ರಮೇಶ್, 'ಟ್ರೋಫಿಗಳು ಸೇರಿದಂತೆ ಒಟ್ಟು ಬಹುಮಾನದ ಮೊತ್ತಕ್ಕೆ ಸುಮಾರು 18 ಕೋಟಿ ವಿನಿಯೋಗವಾಗಲಿದೆ' ಎಂದರು. 'ಪ್ರತಿಷ್ಠಿತ ಎಚ್.ಪಿ.ಎಸ್.ಎಲ್ ಬೆಂಗಳೂರು ಬೇಸಿಗೆ ಡರ್ಬಿ ರೇಸ್ ಜುಲೈ 13ರಂದು ನಡೆಯಲಿದೆ. ಎಚ್.ಪಿ.ಎಸ್.ಎಲ್ ಸಂಸ್ಥೆಯ ಸುರೇಶ್ ಪಾಲಡುಗು ಅವರು ಡರ್ಬಿಯನ್ನು ಪ್ರಾಯೋಜಿಸುತ್ತಿದ್ದಾರೆ. ಡರ್ಬಿಯ ಒಟ್ಟು ಬಹುಮಾನದ ಮೊತ್ತ ಸುಮಾರು 2 ಕೋಟಿ ಇದ್ದು, ಬಿಟಿಸಿ ಮತ್ತು ಎಚ್.ಪಿ.ಎಸ್.ಎಲ್ ಸಂಸ್ಥೆಯು ತಲಾ 1 ಕೋಟಿ ನೀಡಲಿವೆ' ಎಂದು ಅವರು ತಿಳಿಸಿದರು. 'ಇತರೆ ಪ್ರಮುಖ ರೇಸ್ ಗಳನ್ನು ಪ್ರಾಯೋಜಿಸಲು ಕೆಲವು ಸಂಸ್ಥೆಗಳು ಹಾಗೂ ವ್ಯಕ್ತಿಗಳು ಆಸಕ್ತಿ ತೋರಿವೆ. ಅವುಗಳಲ್ಲಿ ಡಾರಿಯಸ್ ಬೈರಾಮ್ಜಿ, ಹೂವ್ ಓ ಸ್ಟೀಲ್ ಮಿಲಿಯನ್, ಕೊರೊಮಂಡಲ್ ಗ್ರೊಮೊರ್ ಮತ್ತು ಫೈವ್ ಸ್ಟಾರ್ ಶಿಪ್ಪಿಂಗ್ ಕಂಪನಿ ಪ್ರಮುಖರಾಗಿದ್ದಾರೆ' ಎಂದರು.



1 ನಮ್ಮ ದೇಶ ನಡೆಸುತ್ತಿರುವುದು ಟ್ರಂಪ್ ಅವರಾ.?

2 ರಾಜಕೀಯಕ್ಕೆ ಮಾಡಿದ ಯುದ್ಧವೇ..?

3 ಯಾವ ಸಂದೇಶ ಮೋದಿ ಕೊಡಲು ಹೊರಟಿದ್ದಾರೆ ಎಂದು ಪ್ರಶ್ನಿಸಿ ಸಂತೋಷ್ ಲಾಡ್

**• ಬಿಜೆಪಿಯಿಂದ ಬೃಹತ್ ತಿರಂಗಾ ಯಾತ್ರೆ • ಬಿಜೆಪಿ ತಿರಂಗಾ ಯಾತ್ರೆ ಬೇಡ • ಟ್ರಂಪ್ ಯಾತ್ರೆ ಮಾಡಲಿ...! • ಕದನ ವಿರಾಮಕ್ಕೆ ಸಂತೋಷ್ ಲಾಡ್ ತಿರುಗೇಟು**

### ಆಪರೇಷನ್ ಸಿಂಧೂರ ಸಕ್ಸಸ್

# ಬಿಜೆಪಿ ತಿರಂಗಾ ಯಾತ್ರೆ

ಪಹಲ್ಗಾಮ್ ದಾಳಿಗೆ ಪ್ರತೀಕಾರವಾಗಿ ಭಾರತೀಯ ಸೇನೆ ಪಾಕಿಸ್ತಾನದ ಮೇಲೆ ಆಪರೇಷನ್ ಸಿಂಧೂರ್ ಹೆಸರಿನ ಮೂಲಕ ದಾಳಿ ನಡೆಸಿ ಅಲ್ಲಿನ ಭಯೋತ್ಪಾದಕರಿಗೆ ತಕ್ಕ ಪಾಠ ಕಲಿಸಿತು. ಉಗ್ರರ ಅಡುಗುತಾಣಗಳನ್ನು ಧ್ವಂಸ ಮಾಡಿತು. ಇದಕ್ಕೆ ಪ್ರತಿಯಾಗಿ ಮತ್ತೆ ಭಾರತದ ಮೇಲೆ ದಾಳಿ ನಡೆಸಿದ ಪಾಕಿಸ್ತಾನ ಭಾರತದ ಮುಂದೆ ಮಂಡಿಯೂರಿತು. ಈ ಬೆನ್ನಲ್ಲೇ ಆಪರೇಷನ್ ಸಿಂಧೂರ್ ಯಶಸ್ವಿಯಾಗಿದ್ದಕ್ಕೆ ಬಿಜೆಪಿ ಭಾರತೀಯ ಸೇನೆ ಬೆಂಬಲಿಸಿ ತಿರಂಗ ಯಾತ್ರೆ ಹಮ್ಮಿಕೊಂಡಿದ್ದಾರೆ. ಆದರೆ ಈ ಯಾತ್ರೆ ಮೂಲಕ ಬಿಜೆಪಿ ಕ್ರೆಡಿಟ್ ತೆಗೆದುಕೊಳ್ಳುವುದಕ್ಕೆ ಮುಂದಾಯ್ತಾ... ಎಂಬ ಪ್ರಶ್ನೆ ಉದ್ಭವಿಸಿದೆ. ಸೇನೆ ಬೆಂಬಲಿಸಿ ಎಂದು ಮೋದಿ ಕಟೌಟ್ ಹಾಕಿ ಬಿಜೆಪಿ ಪ್ರಚಾರಕ್ಕೆ ಮುಂದಾಗಿದೆ. ಭಾರತೀಯ ಸೇನೆಗೆ ಬೆಂಬಲ ಎಂದು ಮೋದಿಯ ಭಾವಚಿತ್ರ ಪ್ರದರ್ಶನ ಮಾಡಿದ್ದಾರೆ. ಮೊದಲಿಗೆ ಈ ಆಪರೇಷನ್ ಸಿಂಧೂರ್ ನಲ್ಲಿ ಯಾವುದೇ ರಾಜಕೀಯ ಇಲ್ಲ, ಯಾವುದೇ ವ್ಯಕ್ತಿಯ ಪರ ಇಲ್ಲ ಎಂದು ಹೇಳಿತ್ತು. ಇದೀಗ ಮೋದಿ ಚಿತ್ರ ಯೋಧರಂತೆ ಕಟೌಟ್ ರೆಡಿ ಮಾಡಿಸಿದ್ದು, ಕಾಂಗ್ರೆಸ್ಸಿಗರ ಟೀಕೆಗೆ ಗುರಿಯಾಗಿದೆ.

**ಯೋಧರಂತೆ ಕಾಣಿಸಿಕೊಂಡ ಮೋದಿ!**

**ವ್ಯಾಪಾರಕ್ಕಾಗಿ ಕದನ ವಿರಾಮವಾಯ್ತೇ?**

ಪಾಕಿಸ್ತಾನ ಯುದ್ಧ ಬೇಡ ಎಂದು ಹೇಳಿದ್ದರೂ ನಾವು ಏಕೆ ಒಪ್ಪಬೇಕಿತ್ತು...? ಇದು ದೇಶದ ವಿಚಾರವಾಗಿದೆ. ಜನರ ಅಭಿಪ್ರಾಯ ಕೇಳಬೇಕಿತ್ತು. ಪಹಲ್ಗಾಮ್ ಭದ್ರತಾ ವೈಫಲ್ಯದ ಬಗ್ಗೆ ಪ್ರಶ್ನೆಗೆ ಉತ್ತರ ಕೊಡಬೇಕಲ್ವಾ...? ರಾಜಕೀಯಕ್ಕೆ ಮಾಡಿದ ಯುದ್ಧವೇ...? ನಮ್ಮ ದೇಶ ನಡೆಸುತ್ತಿರುವುದು ಟ್ರಂಪ್ ಅವರಾ...? ಎಂದು ಪ್ರಶ್ನಿಸಿದರು. ರಷ್ಯಾ ಉಕ್ರೇನ್ ಯುದ್ಧವನ್ನು ಪ್ರಧಾನಿ ಮೋದಿ ನಿಲ್ಲಿಸಿದ್ದರು ಎಂದು ಹೇಳಲಾಗ್ತಿದೆ. ಭಾರತ ಮತ್ತು ಪಾಕಿಸ್ತಾನದ ನಡುವಿನ ಯುದ್ಧವನ್ನು ಟ್ರಂಪ್ ನಿಲ್ಲಿಸಿದ್ದಲ್ವಾ...? ಪಹಲ್ಗಾಮ್ ಭಯೋತ್ಪಾದಕರು ಸಿಕ್ಕಿದ್ರಾ..? ವ್ಯಾಪಾರಕ್ಕಾಗಿ ಕದನ ವಿರಾಮ ಮಾಡಲಾಯ್ತೇ..? ಪಾಕಿಸ್ತಾನ ಮತ್ತು ಭಾರತವನ್ನು ಟ್ರಂಪ್ ಸಮಾನವಾಗಿ ನೋಡಿಕೊಳ್ಳಲು ಅವಕಾಶ ಸಿಕ್ಕಂತಾಯಿತು.

**ಅನೇಕ ಮುಖಂಡರು ಭಾಗಿ**

ವಿಧಾನ ಪರಿಷತ್ ಸದಸ್ಯರು, ಮುಖಂಡರು ಮತ್ತು ಕಾರ್ಯಕರ್ತರು ನಗರದಲ್ಲಿಂದು ಮಾಜಿ ಯೋಧರೊಂದಿಗೆ ಜೊತೆಗೂಡಿ ತಿರಂಗಾ ಯಾತ್ರೆ ನಡೆಸಿದರು. ಅಪರೇಷನ್ ಸಿಂಧೂರ ವಿಜಯೋತ್ಸವದಲ್ಲಿ ಸಾವಿರಾರು ಕಾರ್ಯಕರ್ತರು ಭಾಗಿಯಾಗಿದ್ದರು ಮತ್ತು ಎಲ್ಲಾರ ಕೈಯಲ್ಲಿ ತಿರಂಗ ರಾರಾಜಿಸುತಿತ್ತು. ಭಾರತ್ ಮಾತಾ ಕೀ ಜೈ ಘೋಷಣೆ ರಸ್ತೆಯುದ್ದಕ್ಕೂ ಪ್ರತಿಧ್ವನಿಸುತಿತ್ತು. ಮಾಜಿ ಸೈನಿಕರ ಮುಖದಲ್ಲಿ ಮಂದಹಾಸ ಮತ್ತು ನಡಿಗೆಯಲ್ಲಿ ಎಂದಿನ ಆತ್ಮವಿಶ್ವಾಸ ಎದ್ದು ಕಾಣುತಿತ್ತು.

• ಉದಯವಾಹಿನಿ, ಬೆಂಗಳೂರು

ಆಪರೇಷನ್ ಸಿಂಧೂರ ಸಕ್ಸಸ್ ಹಿನ್ನೆಲೆ ಬೆಂಗಳೂರಿನಲ್ಲಿ ರಾಜ್ಯ ಬಿಜೆಪಿಯಿಂದ ಬೃಹತ್ ತಿರಂಗಾ ಯಾತ್ರೆ ನಡೆಯಿತು. ಮಲ್ಲೇಶ್ವರದ ಗುಂಡೂರಾವ್ ಆಟದ ಮೈದಾನದಿಂದ 18ನೇ ಕ್ರಾಸ್ ಆಟದ ಮೈದಾನದವರೆಗೆ 1.5 ಕಿ.ಮೀ ಬಿಜೆಪಿ ತಿರಂಗಾ ಯಾತ್ರೆ ನಡೆಸಲಾಯಿತು. ಭಾರತೀಯ ಸೈನಿಕರ ಪರವಾಗಿ ಪಕ್ಷಾತೀತವಾಗಿ ನಡೆಸಿದ ಈ ತಿರಂಗಾ ಯಾತ್ರೆಯಲ್ಲಿ ಸಾವಿರಾರು ಜನ ರಾಷ್ಟ್ರಧ್ವಜ ಹಿಡಿದು ಭಾಗವಹಿಸುವ ಮೂಲಕ ದೇಶಾಭಿಮಾನ ಮೆರೆದರು. ತಿರಂಗಾ ಯಾತ್ರೆ ವೇಳೆ 9 ಅಡಿ ಅಗಲ, 1,500 ಅಡಿ ಉದ್ದದ ರಾಷ್ಟ್ರಧ್ವಜದ ಮೆರವಣಿಗೆ ನಡೆಸಲಾಯಿತು. ಮಲ್ಲೇಶ್ವರದ 18 ನೇ ಕ್ರಾಸ್ ಆಟದ ಮೈದಾನ ಮುಟ್ಟಿದ ಬಳಿಕ 205 ಅಡಿ ಅಗಲ, 630 ಅಡಿ ಉದ್ದದ ಮತ್ತೊಂದು ಬೃಹತ್ ರಾಷ್ಟ್ರಧ್ವಜದ ಪ್ರದರ್ಶನ ನಡೆಯಿತು. ಈ ಧ್ವಜದ ಸುತ್ತಲೂ ಮೆರವಣಿಗೆ ನಡೆಸಿದ ಅತೀ ಉದ್ದದ ರಾಷ್ಟ್ರಧ್ವಜ ಹಿಡಿದು ನಿಂತ ವಿದ್ಯಾರ್ಥಿಗಳ ಪರೇಡ್ ಬಹಳ ಆಕರ್ಷಣೀಯವಾಗಿತ್ತು. ಪ್ರಚಾರ ವಾಹನಕ್ಕೆ ಅಳವಡಿಸಿದ್ದ ಸೈನಿಕ ವೇಷಧಾರಿ ಯಾಗಿ ಕೈಯಲ್ಲಿ ಬಂದೂಕು ಹಿಡಿದು ನಿಂತಿರುವ ಮೋದಿ ಕಟೌಟ್ ಎಲ್ಲರ ಗಮನ ಸೆಳೆಯಿತು.

ಬಿಜೆಪಿ ನಾಯಕರಾದ ಬಿಜೆಪಿ ರಾಜ್ಯ ಉಸ್ತುವಾರಿ ರಾಧಾ ಮೋಹನ ದಾಸ್ ಅಗರವಾಲ್, ಅಶೋಕ್, ಅಶ್ವಥ್ ನಾರಾಯಣ್, ಸಿಟಿ ರವಿ, ಮುನಿರತ್ನ, ಬೈರತಿ ಬಸವರಾಜು, ಗೋಪಾಲಯ್ಯ, ಮುನಿಸ್ವಾಮಿ ಮತ್ತಿತರರು ಹೆಜ್ಜೆ ಹಾಕಿದರು. ಮಾಜಿ ಸೈನಿಕರು, ಪ್ರಮುಖ ಗಣ್ಯರು, ವಿದ್ಯಾರ್ಥಿಗಳು, ವಿವಿಧ ಸಂಘಟನೆಗಳ ಸದಸ್ಯರು, ನಾಗರಿಕ ಸಮಿತಿ ಸದಸ್ಯರು, ಸಾರ್ವಜನಿಕರು ಪಾಲ್ಗೊಂಡಿದ್ದರು.

**ರಾಷ್ಟ್ರ ಧ್ವಜದ ಮೆರವಣಿಗೆ**



### ತಿರಂಗಾ ಯಾತ್ರೆ ಮೇ.17ಕ್ಕೆ

ಆಪರೇಷನ್ ಸಿಂಧೂರ್‌ನಲ್ಲಿ ಪ್ರಾಣದ ಹಂಗು ತೊರೆದು ಹೋರಾಟ ನಡೆಸಿದ ಯೋಧರಿಗೆ ಆತ್ಮಸ್ಥೈರ್ಯ ತುಂಬುವ ನಿಟ್ಟಿನಲ್ಲಿ ರಾಯಚೂರಿನಲ್ಲಿ ರಾಷ್ಟ್ರ ರಕ್ಷಣಾ ಸಮಿತಿಯಿಂದ ಮೇ.17 ರಂದು ಬೆಳಿಗ್ಗೆ 9 ಗಂಟೆಗೆ ತಿರಂಗಾ ಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದು ರಾಷ್ಟ್ರ ರಕ್ಷಣಾ ಸಮಿತಿಯ ಸಂಚಾಲಕ ಶಿವಬಸಪ್ಪ ಪಾಟೀಲ ತಿಳಿಸಿದರು. ಅಂಬೇಡ್ಕರ್ ವೃತ್ತದಿಂದ ಆರಂಭ ಗೊಂಡು ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಸಿಟಿ ಟ್ಯಾಕಿನ್ನು ತಿರಂಗಾ ಯಾತ್ರೆ ತಲುಪಲಿದೆ ಎಂದು ಹೇಳಿದರು. ದೇಶದ ಅಖಂಡತೆ ಮತ್ತು ಭದ್ರತೆಗೆ ಧಕ್ಕೆ ಉಂಟಾದಾಗ ನಮ್ಮ ದೇಶ ಕಾಪಾಡುವ ಹೊಣೆ ಸೈನಿಕರದ್ದಾಗಿದೆ. ಅವರಿಗೆ ಗೌರವ ಸಲ್ಲಿಸಲಿಕ್ಕೆ ಯಾತ್ರೆ ಆಯೋಜಿಸಲಾಗಿದೆ ಎಂದು ತಿಳಿಸಿದರು. ಜಿಲ್ಲೆಯ ಮಾಜಿ ಸೈನಿಕರು, ಶಾಲಾ, ಕಾಲೇಜು ವಿದ್ಯಾರ್ಥಿಗಳು, ಯುವಕರು, ಚಿಂತಕರು, ಶಿಕ್ಷಕರು, ಸಂಘ ಸಂಸ್ಥೆಗಳ ಪದಾಧಿಕಾರಿಗಳು ಎಲ್ಲಾ ನಾಗರಿಕರು ಪಾಲ್ಗೊಳ್ಳಲಿದ್ದಾರೆ ಎಂದರು.

### ಸೋಫಿಯಾ ಖುರೇಷಿ ವಿರುದ್ಧದ ಹೇಳಿಕೆ ನಾಚಿಕೆಗೇಡು..!

ಸೋಫಿಯಾ ಖುರೇಷಿ ವಿರುದ್ಧ ಬಿಜೆಪಿ ಮಧ್ಯ ಪ್ರದೇಶದ ನಾಯಕ ವಿವಾದಾತ್ಮಕ ಹೇಳಿಕೆ ವಿಚಾರವಾಗಿ ಮಾತನಾಡಿ, ಇದು ನಾಚಿಕೆಗೇಡುತನ ಇದರ ಬಗ್ಗೆ ಯಾರೂ ಟ್ವೀಟ್ ಮಾಡುವುದಿಲ್ಲ. ಮಧ್ಯ ಪ್ರದೇಶ ಹೈಕೋರ್ಟ್ ಇದೀಗ ಎಫ್ ಐ ಆರ್ ಮಾಡಲು ಸೂಚಿಸಿದೆ. ಸೋಫಿಯಾ ಖುರೇಷಿ ಈ ದೇಶವನ್ನು ಪ್ರತಿನಿಧಿಸುತ್ತಾರೆ. ಏನು ಬೇಕಾದರೂ ಮಾತನಾಡಬಹುದು ಈ ದೇಶದಲ್ಲಿ ಎಂಬಂತಾಗಿದೆ ಎಂದರು.



# ಕಾಂಗ್ರೆಸ್ಸಿಗರಿಗೆ ಯುದ್ಧ ಬೇಕೋ, ಶಾಂತಿ ಬೇಕೋ?

**■ ಜಮ್ಮು ಕಾಶ್ಮೀರ ಪ್ರಧಾನಿ ಮೋದಿಯವರ ಪರವಾಗಿ ನಿಂತಿದೆ ■ ಅಲ್ಲಿನ ಮುಖ್ಯಮಂತ್ರಿ ಕೂಡ ಕೇಂದ್ರ ಸರ್ಕಾರಕ್ಕೆ ಬೆಂಬಲ**

• ಉದಯವಾಹಿನಿ, ಬೆಂಗಳೂರು

ಕಾಂಗ್ರೆಸ್‌ನಲ್ಲಿ ಒಬ್ಬರು ಯುದ್ಧ ಬೇಕು ಎಂದರೆ, ಮತ್ತೊಬ್ಬರು ಶಾಂತಿ ಬೇಕು ಎನ್ನುತ್ತಾರೆ. ಅವರವರು ಮಾತನಾಡಿಕೊಂಡು, ಎಐಸಿಸಿಯಲ್ಲಿ ಈ ಬಗ್ಗೆ ಸರಿಯಾದ ನಿಲುವು ಪ್ರಕಟಿಸಲಿ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಆಡಳಿತದಲ್ಲಿದ್ದಾಗ ಅಮೆರಿಕದ ಬಳಿ ಹೋಗಿ ಭಿಕ್ಷೆ ಬೇಡಿದ್ದನ್ನು ನೋಡಿದ್ದೇವೆ. ಮುಂಬೈಯಲ್ಲಿನ ಉಗ್ರ ದಾಳಿಯಲ್ಲಿ 175 ಜನರು ಸತ್ತಿದ್ದರು.

ಆಗ ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ಸರ್ಕಾರ ಪ್ರತಿಕ್ರಿಯೆ ನೀಡಲೇ ಇಲ್ಲ. ಆದರೆ ಈಗ ಪ್ರಧಾನಿ ಮೋದಿ ತಕ್ಕ ಪ್ರತ್ಯುತ್ತರ ನೀಡಿದ್ದಾರೆ ಎಂದು ಅಶೋಕ್ ಅಭಿಪ್ರಾಯ ಪಟ್ಟರು. ಸಿಂಧೂ ನದಿ ಒಪ್ಪಂದಕ್ಕೆ ನಾವು ಸಹಿ ಹಾಕಿಲ್ಲ. ಅದನ್ನು ಪ್ರಧಾನಿ ಮೋದಿ ರದ್ದು ಮಾಡಿದ್ದಾರೆ. ಭಯೋತ್ಪಾದಕ ದಾಳಿಗಳಾದಾಗಲೇ ಕಾಂಗ್ರೆಸ್ ಅದನ್ನು ಮಾಡಬೇಕಿತ್ತು. ಇದನ್ನು ಸಚಿವ ಸಂತೋಷ್ ಲಾಡ್ ಅರಿಯಬೇಕು ಎಂದು, ಕಾಂಗ್ರೆಸ್ ಸಚಿವರಿಗೆ, ಅಶೋಕ್ ಕಿವಿಮಾತನ್ನು ಹೇಳಿದರು.

ಇಡೀ ಜಮ್ಮು ಕಾಶ್ಮೀರ ಪ್ರಧಾನಿ ಮೋದಿಯವರ ಪರವಾಗಿ ನಿಂತಿದೆ. ಅಲ್ಲಿನ ಮುಖ್ಯಮಂತ್ರಿ ಕೂಡ ಕೇಂದ್ರ ಸರ್ಕಾರಕ್ಕೆ ಬೆಂಬಲ ನೀಡಿದ್ದಾರೆ. ಅಲ್ಲಿನ ಅಭಿವೃದ್ಧಿಯನ್ನು ಜನರು ನೋಡಿದ್ದಾರೆ. ಪಾಕ್ ಆಕ್ರಮಿತ ಕಾಶ್ಮೀರ ನಮ್ಮದು, ಅದನ್ನು ಮರಳಿ ಪಡೆಯುತ್ತೇವೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ. ಕಾಂಗ್ರೆಸ್‌ನ ಒಬ್ಬೇ ಒಬ್ಬ ನಾಯಕರು ಈ ಮಾತನ್ನು ಧೈರ್ಯವಾಗಿ ಹೇಳಿಲ್ಲ ಎಂದು ಆರ್. ಅಶೋಕ್ ಹೇಳಿದರು. ಯಾವುದೇ ಮಧ್ಯಸ್ಥಿಕೆಯನ್ನು ಒಪ್ಪಲ್ಲ ಎಂದು ವಿದೇಶಾಂಗ ಸಚಿವರು ಈಗಾಗಲೇ ಹೇಳಿದ್ದಾರೆ. ಆದರೂ ಕಾಂಗ್ರೆಸ್‌ನವರು ಮೊಸರಲ್ಲಿ ಕಲ್ಲು ಹುಡುಕುತ್ತಿದ್ದಾರೆ. ಮೊದಲು ಯುದ್ಧ ಬೇಡ, ಶಾಂತಿ ಬೇಕು ಎಂದವರು ನಂತರ ಯುದ್ಧ ಮಾಡಿ ಎಂದರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ಮಲ್ಲಿಕಾರ್ಜುನ ಖರ್ಗೆ ಕದನ ವಿರಾಮವನ್ನು ಸ್ವಾಗತಿಸಿದ್ದಾರೆ.

ಆದರೆ ಅದೇ ಕಾಂಗ್ರೆಸ್ ನಲ್ಲಿ ಹಲವರು ಯುದ್ಧ ಮುಂದುವರಿಸ ಬೇಕಿತ್ತು ಎಂದಿದ್ದಾರೆ. ಕಾಂಗ್ರೆಸ್‌ನಲ್ಲೇ ಅನೇಕ ಗುಂಪುಗಳಿದ್ದು, ಒಬ್ಬೊಬ್ಬರು ಒಂದೊಂದು ಅಭಿಪ್ರಾಯ ಹೇಳುತ್ತಾರೆ. ಜೈರಾಮ್ ರಮೇಶ್ ಅವರು ಎಚ್ಚರಿಕೆ ನೀಡಿದ ನಂತರವೂ ಎಲ್ಲರೂ ವಿರುದ್ಧ ಹೇಳಿಕೆ ನೀಡುತ್ತಾರೆ ಎಂದು ಅಶೋಕ್ ದೂರಿದರು.



**ಆಮೇಲೆ ನಿಲುವು ಪ್ರಕಟಿಸಲಿ**



> ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ತಮ್ಮ ಲಾಭಕ್ಕೆ ಎಲ್ಲಾವನ್ನೂ ಮಾಡುತ್ತಿದ್ದಾರೆ. ಬಿಡಿಎ ಲೇಔಟ್ ಗಳು ಇನ್ನೂ ಖಾಲಿ ಇದ್ದು, ಅಲ್ಲಿಗೆ ನೀರು, ವಿದ್ಯುತ್ ಕೊಡಲು ಆಗುತ್ತಿಲ್ಲ. ಬಿಬಿಎಂಪಿ ಚುನಾವಣೆಯನ್ನು ಮುಂದೂಡಲು ಈ ಯೋಜನೆ ಮಾಡಿದ್ದಾರೆ. ನಗರದಲ್ಲಿ ಎಲ್ಲಾ ಕಡೆ ಕಸದ ರಾಶಿ ಇದೆ, ಮೇಕೆದಾಟು ಯೋಜನೆ ಜಾರಿ ಮಾಡಿಲ್ಲ, ನಗರದ ಆಡಳಿತ ನಡೆಸಲು ಆಗುತ್ತಿಲ್ಲ. ಇಂತಹ ವಿಫಲತೆಯನ್ನು ಒಪ್ಪಿಕೊಳ್ಳದೆ ಇಂತಹ ಯೋಜನೆ ತಂದಿದ್ದಾರೆ
>
> -ಆರ್.ಅಶೋಕ್, ವಿಪಕ್ಷ ನಾಯಕ

**ಬೆಂಗಳೂರು ಭಾಗ ಆಗಬಾರದು**

ಕೆಂಪೇಗೌಡರ ಚಿಂತನೆಗೆ ದ್ರೋಹ ಬಗೆದಂತಾಗಿದೆ. ಬೆಂಗಳೂರು ಭಾಗವಾದರೆ ಆದಾಯ ಬರುವುದಿಲ್ಲ. ಐಟಿ ಬಿಟಿ ಕೇಂದ್ರಗಳು ಒಂದು ಕಡೆ ಇರುವಾಗ, ಮತ್ತೊಂದು ಕಡೆಗೆ ಆದಾಯವೇ ಬರುವುದಿಲ್ಲ. ಮೂರು ಪಾಲಿಕೆಗಳು ನಿರ್ಮಾಣವಾದರೆ ಅಲ್ಲಿ ಕನ್ನಡಿಗರೇ ಮೇಯರ್ ಆಗುತ್ತಾರೆ ಎಂಬ ಖಚಿತತೆ ಇಲ್ಲ. ಮುಖ್ಯಮಂತ್ರಿಗಳು ಪಾಲಿಕೆಯಿಂದ ಆಯ್ಕೆಯಾಗುವುದಿಲ್ಲ ಎಂದಾದ ಮೇಲೆ ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ಅವರನ್ನು ಹೇಗೆ ಅಧ್ಯಕ್ಷರನ್ನಾಗಿ ಮಾಡುತ್ತಾರೆ? ಮುಖ್ಯಮಂತ್ರಿ ಸಿದ್ದರಾಮಯ್ಯ ಪಾಲಿಕೆ ಸಭೆಯಲ್ಲಿ ಬಂದು ಕೂರಲು ಸಾಧ್ಯವಿಲ್ಲ. ಬೆಂಗಳೂರು ಭಾಗ ಆಗಬಾರದು ಎಂಬುದು ಬಿಜೆಪಿಯ ಅಭಿಪ್ರಾಯ. ಮುಂದೆ ನಮ್ಮ ಸರ್ಕಾರ ಬಂದರೆ ಬೆಂಗಳೂರನ್ನು ಒಂದು ಮಾಡುವ ಕೆಲಸ ಮಾಡುತ್ತೇವೆ. ಗ್ರೇಟರ್ ಬೆಂಗಳೂರಿಗೆ ವಿರುದ್ಧವಾಗಿ ಕಾನೂನು ಹೋರಾಟ ಮಾಡಲಿದ್ದೇವೆ ಎಂದು ಅಶೋಕ್ ಹೇಳಿದರು.

ಎಐಸಿಸಿಯಲ್ಲಿ ಯುದ್ಧದ ಕುರಿತು ಸರಿಯಾದ ನಿಲುವು ಪ್ರಕಟ ಮಾಡಲಿ. ಯುದ್ಧ ಬೇಕೆ, ಶಾಂತಿ ಬೇಕೆ, ಸಂಧಾನ ಬೇಕೆ ಎಂಬುದನ್ನು ಸರಿಯಾಗಿ ತಿಳಿಸಲಿ. ಆ ನಂತರ ಅಧಿವೇಶನದ ಬಗ್ಗೆ ಮಾತಾಡಲಿ. ಯೋಧರು ಈಗಲೂ ಭಯೋತ್ಪಾದಕರನ್ನು ಹುಡುಕಿ ಕೊಲ್ಲುತ್ತಿದ್ದಾರೆ. ಅಂತಹ ಯೋಧರ ಬಗ್ಗೆ ಎಲ್ಲಾರೂ ನಂಬಿಕೆ ಇರಿಸಬೇಕು. ಕಾಶ್ಮೀರದಲ್ಲಿ ಕಾಂಗ್ರೆಸ್ ಮಿತ್ರಪಕ್ಷಗಳ ಆಡಳಿತವಿದೆ. ಆ ಸರ್ಕಾರವನ್ನು ಇವರು ಎಂದಿಗೂ ಪ್ರಶ್ನಿಸುವುದಿಲ್ಲ. ಇಂತಹ ಸಮಯದಲ್ಲಿ ರಾಜಕೀಯ ಮಾಡಬಾರದು ಎಂದು ಅಶೋಕ್ ಬುದ್ಧಿಮಾತನ್ನು ಹೇಳಿದರು.

**ಗ್ರೇಟರ್ ಅಲ್ಲ, ಕ್ವಾರ್ಟರ್ ಬೆಂಗಳೂರು :** ಬೆಂಗಳೂರನ್ನು ಗ್ರೇಟರ್ ಅಲ್ಲ, ಕ್ವಾರ್ಟರ್ ಬೆಂಗಳೂರು ಮಾಡಿದ್ದಾರೆ. ನಾಡಪ್ರಭು ಕೆಂಪೇಗೌಡರು ಒಂದು ಬೆಂಗಳೂರು ಕಟ್ಟಿದರೆ, ಕಾಂಗ್ರೆಸ್ ಸರ್ಕಾರ ಬೆಂಗಳೂರನ್ನು ಮೂರು ಭಾಗ ಮಾಡಿದೆ.

ಇದರಿಂದಾಗಿ ಅಭಿವೃದ್ಧಿ ಸಾಧ್ಯವಾಗುವುದಿಲ್ಲ. 110 ಹಳ್ಳಿಗಳಲ್ಲಿ ಜನರಿಗೆ ಹೆಚ್ಚು ತೆರಿಗೆ ವಿಧಿಸಲಾಗಿದೆ. ಯಾರದ್ದೋ ಜಮೀನಿಗೆ ಬೆಲೆ ಹೆಚ್ಚುವಂತೆ ಮಾಡಲು ಇಂತಹ ಯೋಜನೆ ರೂಪಿಸಲಾಗಿದೆ ಎಂದು ಅಶೋಕ್ ಅಭಿಪ್ರಾಯ ಪಟ್ಟರು.

**ಈ ದಿನದ ದರ** ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹9,393/Gram24ct ₹8,610/Gram22ct | ಬೆಳ್ಳಿ: ₹97.00/Gram

## ಊಂಜಲ್ ಸಂಗೀತೋತ್ಸವ



• ಉದಯವಾಹಿನಿ ಬೆಂಗಳೂರು

ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್ ವತಿಯಿಂದ ವಯ್ಯಾಲಿಕಾವಲ್ ನ 16ನೇ ಅಡ್ಡರಸ್ತೆಯಲ್ಲಿರುವ ಶ್ರೀ ವೆಂಕಟೇಶ್ವರಸ್ವಾಮಿ ದೇವಸ್ಥಾನ (ಟಿಟಿಡಿ)ದಲ್ಲಿ ಮೇ 17, ಶನಿವಾರ ಸಂಜೆ 6-00ಕ್ಕೆ ಊಂಜಲ್ ಸಂಗೀತೋತ್ಸವ ದಲ್ಲಿ ಕು.ರಚನಾ ಶರ್ಮಾ (ಗಾಯನ) ಶ್ರೀ ಎಸ್. ಶ್ರೀಹರಿ (ಪಿಟೀಲು), ಶ್ರೀ ಜಿ. ಲೋಕಪ್ರಿಯ (ಮೃದಂಗ) ಏರ್ಪಡಿಸಿದೆ ಎಂದು ಟಿಟಿಡಿ ಹೆಚ್.ಡಿ.ಪಿ.ಪಿ. ಸಂಚಾಲಕರಾದ ಡಾ|| ಪಿ. ಭುಜಂಗರಾವ್ ತಿಳಿಸಿದ್ದಾರೆ.

## ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆಗೆ ರಾಜ್ಯಪಾಲರ ಅಂಕಿತ, ಇಂದಿನಿಂದ ಜಾರಿ

• ಉದಯವಾಹಿನಿ ಬೆಂಗಳೂರು

ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆಗೆ ರಾಜ್ಯಪಾಲರ ಅಂಕಿತ ದೊರೆತಿದ್ದು, ಇಂದಿನಿಂದ ಜಾರಿಯಾಗಲಿದೆ. ಬಿಬಿಎಂಪಿ ಬದಲು ಗ್ರೇಟರ್ ಬೆಂಗಳೂರು ಪ್ರಾಧಿಕಾರ ರಚನೆಯಾಗಲಿದೆ ಎಂದು ಸಿದ್ದರಾಮಯ್ಯ ತಿಳಿಸಿದರು. ಇನ್ನು ಮುಂದೆ ಬೆಂಗಳೂರು ಗ್ರೇಟರ್ ಬೆಂಗಳೂರು ಆಗಲಿದೆ. ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿ ಕನಿಷ್ಠ ಮೂರು ಪಾಲಿಕೆ ರಚನೆಯಾಗುವ ಸಾಧ್ಯತೆಯಿದೆ. ರಾಜ್ಯದ ಮುಖ್ಯಮಂತ್ರಿಗಳು ಪ್ರಾಧಿಕಾರದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಲಿದ್ದು, ಮುಂದಿನ ದಿನಗಳಲ್ಲಿ ಈ ಬಗ್ಗೆ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು ಎಂದರು. ರಾಜ್ಯದಲ್ಲಿ ಮಳೆಯಿಂದಾಗಿ ಅನಾಹುತಗಳು ನಡೆಯುತ್ತಿದ್ದು, ಈ ಬಗ್ಗೆ ಸರ್ಕಾರದ ಕ್ರಮದ ಬಗ್ಗೆ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿ, ಮಳೆಯಿಂದಾಗಿ ಸಂಭವಿಸುವ ಅನಾಹುತಗಳಿಗೆ ಪರಿಹಾರ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು

## ಕೆಲಸ ಕೊಡಿಸುವುದಾಗಿ ನಂಬಿಸಿ ವಂಚನೆ; 12 ಜನರ ಗ್ಯಾಂಗ್ ಬಂಧನ

• ಉದಯವಾಹಿನಿ ಬೆಂಗಳೂರು

ಮನೆಯಿಂದ ಕೆಲಸ ಮಾಡುವ ಅವಕಾಶಗಳ ಆಮಿಷವೊಡ್ಡಿ ಜನರನ್ನು ವಂಚಿಸುತ್ತಿದ್ದ ಹನ್ನೆರಡು ಜನರನ್ನು ಬಂಧಿಸಲಾಗಿದೆ. ಆರೋಪಿಗಳು ಬಿಹಾರ, ಉತ್ತರ ಪ್ರದೇಶದಿಂದ ಬಂದ ಗ್ಯಾಂಗ್‌ನ ಭಾಗವಾಗಿದ್ದಾರೆ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ. ಜನವರಿಯಲ್ಲಿ ಆಡುಗೋಡಿ ಪೊಲೀಸ್ ಠಾಣೆಯಲ್ಲಿ ಗೃಹಿಣಿಯೊಬ್ಬರು ನೀಡಿದ ದೂರಿನ ಮೇರೆಗೆ ತನಿಖೆ ನಡೆಸಿದ ಬಳಿಕ ಈ ಆರೋಪಿಗಳನ್ನು ಬಂಧಿಸಲಾಗಿದೆ. ಮನೆಯಿಂದ ಕೆಲಸ ಮಾಡುವ ಅವಕಾಶದ ನೆಪ ಹೇಳಿ ಐದು ಲಕ್ಷ ರೂಪಾಯಿ ವಂಚಿಸಲಾಗಿದೆ ಎಂದು ಆರೋಪಿಸಿ ದೂರು ನೀಡಲಾಗಿದೆ. ಪೊಲೀಸರ ಪ್ರಕಾರ, ಸಂತ್ರಸ್ತೆ ತನ್ನ ದೂರಿನಲ್ಲಿ, ಮನೆಯಿಂದ ಕೆಲಸ ಮಾಡುವ ಅವಕಾಶದ ಆಮಿಷ ಒಡ್ಡಿ ತನ್ನ ಕಡಿಮೆ ಕ್ರೆಡಿಟ್ ಸ್ಕೋರ್ ಸರಿಪಡಿಸಲು ಹಣವನ್ನು ವರ್ಗಾಯಿಸಲು ಕೇಳಲಾಗಿದೆ. ಅವರನ್ನು ನಂಬಿ, ಹಣವನ್ನು ಹಲವು ಬಾರಿ ಖಾತೆಯೊಂದಕ್ಕೆ ವರ್ಗಾಯಿಸಿರುವುದಾಗಿ ಆರೋಪಿಸಿದ್ದಾರೆ. ತನಿಖೆಯ ಸಮಯದಲ್ಲಿ, ಹಣವನ್ನು ವರ್ಗಾಯಿಸಿದ ಬ್ಯಾಂಕ್ ಖಾತೆ ಮಹಾರಾಷ್ಟ್ರದ ನವಿ ಮುಂಬೈನ 27 ವರ್ಷದ ಸೋನು ಎಂಬುವವರದಾಗಿದ್ದು, ಪೊಲೀಸರು ನೋಟಿಸ್ ನೀಡಿದ್ದಾರೆ. ತನಿಖೆಯ ನಂತರ, ಪ್ರಕರಣದ ಇಬ್ಬರು ಪ್ರಮುಖ ಶಂಕಿತರು ಎಂದು ಗುರುತಿಸಲಾದ ಉತ್ತರ ಪ್ರದೇಶದ ಸೋನು, ಹರ್ಷವರ್ಧನ್ ಓಜಾ (25) ಎಂಬುವವರನ್ನು ಬಂಧಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

## ರೂ.5.50 ಕೋಟಿ ವೆಚ್ಚದ ಕಾಮಗಾರಿಗೆ ಚಾಲನೆ

• ಉದಯವಾಹಿನಿ ಯಲಹಂಕ

ಬ್ಯಾಟರಾಯನಪುರ ಕ್ಷೇತ್ರದ ಕೊಡಿಗೇಹಳ್ಳಿಯ ಸರ್.ಎಂ.ವಿಶ್ವೇಶ್ವರಯ್ಯ ಬಡಾವಣೆ ಹಾಗೂ ಥಣಿಸಂದ್ರ ವಾರ್ಡ್ ವ್ಯಾಪ್ತಿಯ ನಾಗವಾರದ ಮಂಜುನಾಥ ಬಡಾವಣೆಯಲ್ಲಿ ರೂ.5.50 ಕೋಟಿ ವೆಚ್ಚದಲ್ಲಿ ಚರಂಡಿ ಮತ್ತು ರಸ್ತೆ ಅಭಿವೃದ್ಧಿ ಕಾಮಗಾರಿಗೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ನಾಗವಾರದ ಮಂಜುನಾಥ ಬಡಾವಣೆಯಲ್ಲಿ ಪ್ರತಿ ಬಾರಿ ಮಳೆ ಬಂದ ಸಂದರ್ಭದಲ್ಲಿ ಇಲ್ಲಿನ ರಸ್ತೆಗಳು ಜಲಾವೃತವಾಗಿ ಮನೆಗಳಿಗೆ ನೀರು ನುಗ್ಗಿ, ಜನರು ತೊಂದರೆ ಅನುಭವಿಸುತ್ತಿದ್ದರು. ಸಮಸ್ಯೆ ಬಗೆಹರಿಸಬೇಕೆಂಬ ಸ್ಥಳೀಯರ ಮನವಿಯ ಮೇರೆಗೆ ರಸ್ತೆಗಳನ್ನು ಎತ್ತರಿಸಿ, ನೂತನವಾಗಿ ಚರಂಡಿ ನಿರ್ಮಿಸಿ, ಒಟ್ಟು 10 ರಸ್ತೆಗಳಿಗೆ ಕಾಂಕ್ರೀಟ್ ಹಾಕಿ ಅಭಿವೃದ್ಧಿಪಡಿಸುವ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದು ತಿಳಿಸಿದರು.

## ಬುದ್ಧಿ ಹೇಳಿದ್ದಕ್ಕೆ ಹತ್ಯೆಗೆ ಯತ್ನ, ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರು

• ಉದಯವಾಹಿನಿ ಬೆಂಗಳೂರು

ಸಂಚಾರ ನಿಯಮ ಉಲ್ಲಂಘಿಸಿ ದುರ್ವರ್ತನೆ ತೋರಿದ ಆಟೋ ಚಾಲಕನಿಗೆ ಬುದ್ಧಿ ಹೇಳಿದ್ದಕ್ಕೆ, ಇಬ್ಬರು ವ್ಯಕ್ತಿಗಳ ಮೇಲೆ ಮಾರಣಾಂತಿಕ ಹಲ್ಲೆ ನಡೆದಿರುವ ಘಟನೆಯೊಂದು ನಗರದ ಚಂದ್ರ ಲೇಔಟ್‌ನಲ್ಲಿ ನಡೆದಿದ್ದು, ತಡವಾಗಿ ಬೆಳಕಿಗೆ ಬಂದಿದೆ. ಸಂತ್ರಸ್ತ ವ್ಯಕ್ತಿ ರವಿ ಹೆಸರು ಬದಲಾಯಿಸಲಾಗಿದೆ, ಆತನ ಸ್ನೇಹಿತ ತಮ್ಮ ದ್ವಿಚಕ್ರ ವಾಹನದಲ್ಲಿ ತೆರಳುತ್ತಿದ್ದರು. ಈ ವೇಳೆ ಆರೋಪಿಗಳು ಏಕಮುಖವಾಗಿ ಆಟೋ ಚಲಾಯಿಸಿಕೊಂಡು ಬಂದು ಪ್ರಿಯದರ್ಶಿನಿ ಲೇಔಟ್‌ನ ಜಸ್ಟ್ ಬೇಕ್ ಬಳಿ ಡಿಕ್ಕಿ ಹೊಡೆದಿದ್ದಾರೆ. ಈ ವೇಳೆ ರವಿ ಅವರು ಸಂಚಾರ ನಿಯಮ ಪಾಲಿಸುವಂತೆ ಬುದ್ಧಿ ಹೇಳಿ, ಮುಂದೆ ಸಾಗಿದ್ದಾರೆ. ಬಳಿಕ ಆರೋಪಿಗಳು ರವಿ ಅವರ ವಾಹನವನ್ನು ಹಿಂಬಾಲಿಸಿ ಕೊಂಡು ಹೋಗಿದ್ದು, ಹತ್ಯೆಗೆ ಯತ್ನಿಸಿದ್ದಾರೆ. ವಿಜಯನಗರದಿಂದ ನಾಗರಭಾವಿಯಲ್ಲಿರುವ ನನ್ನ ಮನೆಗೆ ಹೋಗುತ್ತಿದ್ದಾಗ ಜಸ್ಟ್ ಬೇಕ್ ಬಳಿ ನನ್ನ ಸ್ನೇಹಿತನನ್ನು ಭೇಟಿಯಾದೆ. ನಾವು ದಾರಿಯಲ್ಲಿ ಹೋಗುತ್ತಿದ್ದಾಗ ಏಕಮುಖವಾಗಿ ಆಟೋ ಬಂದಿತು.

# ಬೆಸ್ಕಾಂ ವ್ಯಾಪ್ತಿಯಲ್ಲಿ 2,11,456 ಡಿಲಿಂಕ್‌ಗೆ ಅರ್ಜಿ ಸಲ್ಲಿಕೆ

### ಮನೆ ಬದಲಿಸಿ ಬೇರೆ ಮನೆಗೆ ಬಂದಾಗ ಗೃಹಜ್ಯೋತಿ ಸೌಲಭ್ಯ ಹೇಗಪ್ಪಾ ಪಡೆಯೋದು ಅಂತ ಚಿಂತೆ ಆಗಿದ್ರೆ, ಇನ್ನು ಯೋಚನೆ ಬಿಡಿ.. ಹೀಗೆ ಮಾಡಿ

• ಉದಯವಾಹಿನಿ ಬೆಂಗಳೂರು

ಗ್ರಾಮೀಣ ಇರಬಹುದು, ಬೆಂಗಳೂರಿ ನಂತಹ ನಗರ ಪ್ರದೇಶ ಇರಬಹುದು, ಬಹುತೇಕ ಮಂದಿ ಗೃಹ ಜ್ಯೋತಿ ಯೋಜನೆಯಡಿ ಉಚಿತ ಕರೆಂಟ್ ಪಡೆಯುತ್ತಿದ್ದಾರೆ. ಆದರೆ ನಗರ ಪ್ರದೇಶದಲ್ಲಿ ಅನಿವಾರ್ಯವಾಗಿ ಮನೆ ಬದಲಾಯಿಸಬೇಕಾದರೆ, ಮತ್ತೆ ಗೃಹಜ್ಯೋತಿ ಸೌಲಭ್ಯ ಹೇಗಪ್ಪಾ ಪಡೆಯೋದು ಅಂತ ಚಿಂತೆ ಆಗಿದ್ರೆ, ಇನ್ನು ಯೋಚನೆ ಬಿಡಿ...ಹೀಗೆ ಮಾಡಿ..

ಯೋಜನೆ ಜಾರಿಯಾಗಿ ಒಂದು ವರ್ಷದ ನಂತರ, ಹಳೆ ಮನೆಯ ಆರ್.ಆರ್. ಸಂಖ್ಯೆಯನ್ನು ಡಿ-ಲಿಂಕ್ ಮಾಡುವ ಸೌಲಭ್ಯವನ್ನು ಜಾರಿಮಾಡಿತ್ತು.



**ಬೆಸ್ಕಾಂಗೆ ದೂರಿನ ಸುರಿಮಳೆ**

ಹಳೆ ಮನೆಯ ಆರ್.ಆರ್. ಸಂಖ್ಯೆಯನ್ನು ಡಿ-ಲಿಂಕ್ ಮಾಡುವ ಸೌಲಭ್ಯವನ್ನು ನೀಡಿದೆ. ಇದರಿಂದ ಬಾಡಿಗೆ ಮನೆ ಬದಲಾಯಿಸುವವರು ಅಥವಾ ಬೇರೆ ಕಾರಣಕ್ಕೆ ಮನೆ ಶಿಫ್ಟ್ ಮಾಡುವವರು, ಹಳೆಯ ಖಾತೆ ಸಂಖ್ಯೆಯನ್ನು ತೆಗೆದು ಹಾಕಿ ಹೊಸ ಮನೆಗೆ ಗೃಹ ಜ್ಯೋತಿ ಸೌಲಭ್ಯ ಪಡೆಯಬಹುದು ಎಂದು ಬೆಸ್ಕಾಂ ಪ್ರಕಟಣೆ ಹೊರಡಿಸಿದೆ. ಮನೆ ಬದಲಾಯಿಸಿದ ಮೇಲೂ ಗೃಹ ಜ್ಯೋತಿ ಸೌಲಭ್ಯ ಪಡೆಯಲು ಡಿ-ಲಿಂಕ್ ವ್ಯವಸ್ಥೆಯನ್ನು ಸರ್ಕಾರ ಜಾರಿ ಮಾಡಿದೆ. ಮಾಡಬೇಕಿರುವುದು ಇಷ್ಟೆ.. ಕೆಳಗೆ ನೀಡಿರುವ ಲಿಂಕ್‌ಗಳ ಮೂಲಕ ನೋಂದಾಯಿಸಿಕೊಳ್ಳುವ ಮೂಲಕ ಈ ಸೌಲಭ್ಯ ಪಡೆಯಬಹುದು.

ಸೇವಾಸಿಂಧು ಗ್ಯಾರಂಟಿ ಸ್ಕೀಮ್ ಪೋರ್ಟಲ್ ಆದ https://sevasindhugs.karnataka.gov.in ಅಥವಾ https://sevasindhu.karnataka.gov.in/GruhaJyothi_Delink/GetAadhaarData.aspx ಈ ಲಿಂಕ್‌ನಲ್ಲಿ ನೋಂದಾಯಿಸಿಕೊಂಡ ಬಳಿಕ, ಹಳೆ ಮನೆಯ ಆರ್ ಆರ್ ಸಂಖ್ಯೆಯನ್ನು ಡಿಲಿಂಕ್ ಮಾಡಿ, ಹೊಸ ಮನೆಯ ಆರ್ ಆರ್ ಸಂಖ್ಯೆಯನ್ನು ಲಿಂಕ್ ಮಾಡಬೇಕಿದೆ. ಇದರಿಂದ ಮತ್ತೆ ಮನೆಯ ಕರೆಂಟ್ ಬಿಲ್ ಉಚಿತವಾಗಲಿದೆ.

### ಗೃಹಜ್ಯೋತಿ ಸೌಲಭ್ಯ ಪಡೆಯಲು ಡಿಲಿಂಕ್ ವ್ಯವಸ್ಥೆ

**ಸಾಮಾಜಿಕ ಜಾಲತಾಣದಲ್ಲಿ ಈ ಬಗ್ಗೆ ಬೆಸ್ಕಾಂ ಪ್ರಕಟಣೆ ಹಾಕಿದ್ದು, ಹೊಸ ಮನೆ ಅಥವಾ ಮನೆ ಬದಲಾಯಿಸಿದಾಗ ಡಿ ಲಿಂಕ್ ಮಾಡುವ ಮೂಲಕ ಗೃಹಜ್ಯೋತಿ ಸೌಲಭ್ಯ ಮತ್ತೆ ಪಡೆಯಲು ಸಾಧ್ಯ ಎಂದು ಪೋಸ್ಟ್ ಹಾಕಿದ್ದಾರೆ. ಅಲ್ಲದೆ ಲಿಂಕ್ ಕೂಡಾ ಜೊತೆಗೆ ಹಾಕಿದ್ದಾರೆ. ಆದರೆ ಹಲವರು ಈ ಲಿಂಕ್ ಓಪನ್ ಆಗುತ್ತಿಲ್ಲ ಎಂದು ದೂರು ನೀಡಿದ್ದು, ಬೆಸ್ಕಾಂ ಸ್ಪಂದಿಸಿದೆ. ಅಲ್ಲದೆ ಡಿಲಿಂಕ್ ಮಾಡಿದ ಕೂಡಲೇ ಉಚಿತ ಅರ್ಜಿ ಸಲ್ಲಿಕೆಯಾಗುತ್ತದೆ ಎಂದೂ ಬೆಸ್ಕಾಂ ಹಲರ ಪ್ರಶ್ನೆಗೆ ಉತ್ತರಿಸಿದೆ. ಒಂದುವೇಳೆ ಹಳೆಯ ಬಾಡಿಗೆದಾರರು ಹೆಚ್ಚು ವಿದ್ಯುತ್ ಬಳಸುತ್ತಿದ್ದರೆ, ಯೋಜನೆಗೆ ಆ ಆರ್ ಆರ್ ನಂಬರ್ ಗಣನೆಗೆ ತೆಗೆದುಕೊಳ್ಳುತ್ತಿಲ್ಲ ಎಂದು ನೆಟ್ಟಿಗರೊಬ್ಬರು ಪ್ರಶ್ನೆ ಕೇಳಿದ್ದಾರೆ. ಎರಡು ವರ್ಷವಾದರೂ ಆರ್ ಆರ್ ಸಂಖ್ಯೆಯ ವಿದ್ಯುತ್ ಬಳಕೆಯನ್ನು ರಿವೈಸ್ ಮಾಡಿಲ್ಲ, ಹೀಗಾಗಿ ಭಾಡಿಗೆದಾರರು ಬದಲಾಗಿ ಕಡಿಮೆ ವಿದ್ಯುತ್ ಬಳಸಿದರೂ ಅವರಿಗೆ ಯೋಜನೆ ಲಾಭ ಸಿಗುತ್ತಿಲ್ಲ ಎಂದು ಹೇಳಿದ್ದಾರೆ.**

ಗೃಹಜ್ಯೋತಿ ಪೋರ್ಟಲ್ ಓಪನ್ ಆಗದೇ ಇದ್ದರೆ cache memory clear ಮಾಡಿ ನಂತರ ಪೋರ್ಟಲ್ ಲಿಂಕ್ ಕ್ಲಿಕ್ ಮಾಡಿ ಸೇವೆ ಪಡೆಯಬಹುದು. ಆಧಾರ್ ನಂಬರ್ ಜೊತೆ ಲಿಂಕ್ ಆಗಿರುವ ಆರ್ ಆರ್ ನಂಬರ್ ವಿವರ ಪರಿಶೀಲಿಸಿ ಡಿ ಲಿಂಕ್ ಮಾಡಬೇಕು. ಹೊಸ ಮನೆಗೆ ಹೋದಾಗ ಯಾವುದೇ ಆಧಾರ್ ಜತೆ ಲಿಂಕ್ ಆಗಿರದ ಆಧಾರ್ ಆರ್ ಆರ್ ನಂಬರ್‌ಗೆ ಲಿಂಕ್ ಮಾಡಬಹುದು. ಅಂದರೆ ಈ ಹಿಂದೆ ಮನೆಯಲ್ಲಿ ಯಾರೇ ವಾಸವಿದ್ದರೂ ಅವರು ಆ ನಂಬರನ್ನು ಡಿ ಲಿಂಕ್ ಮಾಡಿರುವುದನ್ನು ಖಚಿತ ಮಾಡಿಕೊಳ್ಳಬೇಕು.

**ಈ ವರೆಗೆ ಲಕ್ಷಾಂತರ ಜನರಿಂದ ಡಿಲಿಂಕ್‌ಗೆ ಅರ್ಜಿ ಸಲ್ಲಿಕೆ.**

ಬೆಸ್ಕಾಂ ವ್ಯಾಪ್ತಿಯಲ್ಲಿ ಡಿ ಲಿಂಕ್ ಮಾಡಲು ಅತಿ ಹೆಚ್ಚು ಮನವಿ ಬಂದಿದೆ. ಬೆಸ್ಕಾಂ ವ್ಯಾಪ್ತಿಗೆ ಬರುವ ಜಿಲ್ಲೆಗಳಲ್ಲಿ ಒಟ್ಟು 2,11,456 ಮಂದಿ ಡಿಲಿಂಕ್‌ಗೆ ಅರ್ಜಿ ಸಲ್ಲಿಕೆ ಮಾಡಿದ್ದಾರೆ. ಇನ್ನು ಇಡೀ ರಾಜ್ಯದಲ್ಲಿ 2,83,291 ಮಂದಿ ಸಲ್ಲಿಕೆ ಮಾಡಿದ್ದಾರೆ.

## ಆನಂದ ಗುರೂಜಿ ಕಾರು ಅಡ್ಡಗಟ್ಟಿ ಹಣಕ್ಕಾಗಿ ಬ್ಲ್ಯಾಕ್ ಮೇಲ್

• ಉದಯವಾಹಿನಿ ಬೆಂಗಳೂರು

ಖಾಸಗಿ ವಾಹಿನಿ ನಿರೂಪಕಿಯಾಗಿದ್ದ ದಿವ್ಯಾ ವಸಂತ ವಿರುದ್ಧ ಖ್ಯಾತ ಜ್ಯೋತಿಷಿ ಮಹರ್ಷಿ ಡಾ. ಆನಂದ ಗುರೂಜಿ ಪೊಲೀಸ್ ಠಾಣೆಗೆ ದೂರು ನೀಡಿದ್ದು, ದಿವ್ಯಾ ಗ್ಯಾಂಗ್ ಮೇಲೆ ಪೊಲೀಸರು ಎಫ್ಐಆರ್ ದಾಖಲಿಸಿದ್ದಾರೆ.

ಈಗಾಗಲೇ ದಿವ್ಯಾ ವಸಂತ, ತಂಡದ ಮೇಲೆ ವಂಚನೆ, ಬೆದರಿಕೆ ಕೇಸ್ ದಾಖಲಾಗಿವೆ. ಸದ್ಯ ಆನಂದ ಗುರೂಜಿ ಅವರು ತನ್ನ ಕುರಿತು ಅಶ್ಲೀಲ ವಿಚಾರ ಇದೆ ಎಂಬ ರೀತಿಯ ವಿಡಿಯೋವನ್ನು ಯುಟ್ಯೂಬ್ ಚಾನೆಲ್‌ನಲ್ಲಿ ಪ್ರಸಾರ ಮಾಡಿದ್ದಾರೆ. ಹಣಕ್ಕಾಗಿ ಬ್ಲ್ಯಾಕ್ ಮೇಲ್ ಮಾಡಿ ಜೀವ ಬೆದರಿಕೆ ಹಾಕಿದ್ದಾರೆ ಎಂದು ಪೊಲೀಸ್ ದೂರು ನೀಡಿದ್ದಾರೆ. ಬೆಂಗಳೂರಿನ ಚಿಕ್ಕಜಾಲ ಪೊಲೀಸ್ ಠಾಣೆಯಲ್ಲಿ ಸ್ವತಃ ಈ ಬಗ್ಗೆ ಪ್ರಕರಣ ದಾಖಲಿದ್ದು, ಪೊಲೀಸರು ಕೃಷ್ಣಮೂರ್ತಿ ಎಂಬುವವರನ್ನು ಆರೋಪಿ 1 ಹಾಗೂ ದಿವ್ಯಾ ವಸಂತ ಅವರನ್ನು ಆರೋಪಿ 2 ಮಾಡಿದ್ದಾರೆ.



ಉದಯವಾಹಿನಿ ಚಿತ್ರ

**ಈ ಹಿಂದೆ ಜೈಲು ಸೇರಿದ್ದ ದಿವ್ಯಾ ವಸಂತ:** ಕಳೆದ ವರ್ಷ ಹನಿಟ್ರ್ಯಾಪ್ ಪ್ರಕರಣದಲ್ಲಿ ದಿವ್ಯಾ ವಸಂತ ಬಂಧನವಾಗಿತ್ತು. ಇಂದಿರಾನಗರದ ಬ್ಯೂಟಿ ಪಾರ್ಲರ್‌ನಲ್ಲಿ ವಿಡಿಯೋ ಮಾಡಿ ಹಲವರಿಗೆ ಬ್ಲ್ಯಾಕ್ ಮೇಲ್ ಮಾಡಿದ್ದರು.

ಈ ಸಂಬಂಧ ಪಾರ್ಲರ್ ಮಾಲೀಕರು ನೀಡಿದ್ದ ದೂರಿನ ಮೇರೆಗೆ ದಿವ್ಯಾ ವಸಂತರನ್ನ ಬೆಂಗಳೂರು ಪೊಲೀಸರು ಕೇರಳದಲ್ಲಿ ಬಂಧಿಸಿದ್ದರು. ಆ ಬಳಿಕ ಜಾಮೀನಿನ ಮೇಲೆ ಬಿಡುಗಡೆಯಾಗಿತ್ತು.


**ತಡೆಯಾಜ್ಞೆ ತಂದರೂ ವಿಡಿಯೋ ಪ್ರಸಾರ:** ಒಂದಲ್ಲ ಎರಡು ಬಾರಿ ತಮ್ಮ ವಿರುದ್ಧ ಸುದ್ದಿ, ವಿಡಿಯೋ ಪ್ರಸಾರ ಮಾಡದಂತೆ ಆನಂದ್ ಗುರೂಜಿ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದಾರೆ. ತಡೆಯಾಜ್ಞೆ ನಂತರ ಕೆಲ ಯುಟ್ಯೂಬ್ ಚಾನೆಲ್‌ಗಳಲ್ಲಿ ಸುದ್ದಿ ಪ್ರಸಾರ ಮಾಡಲಾಗಿದೆ. ಜತೆಗೆ 3ನೇ ವ್ಯಕ್ತಿಯಿಂದ ಹಣಕ್ಕೆ ಬೇಡಿಕೆ ಇಟ್ಟಿದ್ದಾರೆ ಎನ್ನಲಾಗಿದೆ.

**ಕೋರ್ಟ್‌ನಲ್ಲಿ ನಡೆಯುತ್ತಿದೆ ವ್ಯಾಜ್ಯ**

**ಈಗಾಗಲೇ ಆನಂದ ಗುರೂಜಿ ಅವರು ವಿಡಿಯೋ ಹಾಗೂ ಜಮೀನು ವ್ಯಾಜ್ಯಕ್ಕೆ ಸಂಬಂಧಿಸಿದಂತೆ ಕೋರ್ಟ್‌ನಿಂದ ತಡೆಯಾಜ್ಞೆ ತಂದಿದ್ದಾರೆ. ಆದರೂ, ಹಣಕ್ಕಾಗಿ ಬೆದರಿಸಿ ಬ್ಲ್ಯಾಕ್ ಮೇಲ್, ಜೀವಬೆದರಿಕೆ ಹಾಕಿದ್ದಾರೆ. ಅಲ್ಲದೇ ಕಾರು ಅಡ್ಡಗಟ್ಟಿ ಅಶ್ಲೀಲ ಪದಗಳಿಂದ ನಿಂದಿಸಿದ್ದಾರೆ ಎಂದು ಆನಂದ ಗುರೂಜಿ ದೂರಿನಲ್ಲಿ ಆರೋಪಿಸಿದ್ದಾರೆ.**

## ತಿರಂಗಾ ಯಾತ್ರೆ ಬದಲು ಬಿಜೆಪಿ ಟ್ರಂಪ್ ಯಾತ್ರೆ ಮಾಡಲಿ; ಸಂತೋಷ್ ಲಾಡ್

• ಉದಯವಾಹಿನಿ ಬೆಂಗಳೂರು



ಪಾಕಿಸ್ತಾನ ಗೋಗರೆದ ಕಾರಣ ಕದನ ವಿರಾಮಕ್ಕೆ ಒಪ್ಪಿಗೆ ನೀಡಲಾಗಿದೆ ಎಂದು ತಮ್ಮ ಭಾಷಣದಲ್ಲಿ ಮೋದಿ ಹೇಳಿದ್ದಾರೆ. ಆದರೆ, ಅದಕ್ಕೂ ಮೊದಲು ಅಮೆರಿಕದ ಅಧ್ಯಕ್ಷ ಟ್ರಂಪ್ ಕದನ ವಿರಾಮ ಪ್ರಸ್ತಾಪಿಸಿದ್ದರು. ಅಮೆರಿಕ ಅಧ್ಯಕ್ಷರ ಮೂಲಕ ಕದನ ವಿರಾಮ ತಿಳಿದುಕೊಳ್ಳಬೇಕಾಯಿತು ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಹೇಳಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಟ್ರಂಪ್ ಹೇಳಿದ ಮಾದರಿಯಲ್ಲಿ ವ್ಯಾಪಾರಕ್ಕಾಗಿ ಯುದ್ಧ ನಿಲ್ಲಿಸಲಾಯಿತೇ ಎಂದು ಪ್ರಶ್ನಿಸಿದರು.

ಬಿಜೆಪಿಯವರು ತಿರಂಗಾ ಯಾತ್ರೆ ಮಾಡುತ್ತಿದ್ದಾರೆ. ಅವರು ತಿರಂಗಾ ಯಾತ್ರೆ ಬದಲು ಟ್ರಂಪ್ ಯಾತ್ರೆ ಮಾಡಲಿ ಎಂದರು. ಭಾರತ ಮತ್ತು ಪಾಕಿಸ್ತಾನದ ನಡುವೆ ಯಾವ ಆಧಾರದಲ್ಲಿ ಕದನ ವಿರಾಮ ಘೋಷಿಸಲಾಗಿದೆ. ಪ್ರಧಾನಿ ನರೇಂದ್ರ ಮೋದಿ ತಾವೇ ಸುಪ್ರೀಂ ಎಂಬಂತೆ ವರ್ತಿಸುತ್ತಿದ್ದಾರೆ. ಕದನ ವಿರಾಮದ ಬಳಿಕವೂ ಪಾಕಿಸ್ತಾನ ದಾಳಿ ನಡೆಸಿದೆ. ಸರ್ಕಾರಕ್ಕೆ ದೇಶದ ಜನತೆಯ ಬೆಂಬಲ ಇತ್ತು.

ಪಾಕಿಸ್ತಾನಕ್ಕೆ ನುಗ್ಗಿ ಹೊಡೆಯಬೇಕು ಎಂಬ ನಿರೀಕ್ಷೆ ಇತ್ತು. ಆದರೆ, ಯಾವ ಆಧಾರದಲ್ಲಿ ಕದನ ವಿರಾಮ ಘೋಷಿಸಿದ್ದಾರೆ. ಎಲ್ಲವೂ ನಿಮ್ಮದೇ ನಿರ್ಧಾರವೇ ಎಂದು ಪ್ರಧಾನಿಯನ್ನು ಪ್ರಶ್ನಿಸಿದರು. ದೇಶದಲ್ಲಿ ಯಾರೂ ಅಂತಿಮ ಅಲ್ಲ. ಬರುತ್ತಾರೆ, ಹೋಗುತ್ತಾರೆ. ಆದರೆ, ಅಂತಿಮವಲ್ಲ. ದೇಶವೇ ಅಂತಿಮ ಹೊರತು ವ್ಯಕ್ತಿಯಲ್ಲ ಎಂದರು. ಕಳೆದ 20 ದಿನಗಳಿಂದ ದೇಶದಲ್ಲಿ ಏನಾಗಿದೆ ಎಂದು ಜನರಿಗೆ ಗೊತ್ತಿದೆ. ದೇಶವನ್ನು ಎಲ್ಲಾ ಸೇನಾ ಪಡೆಗಳು ಕಾಪಾಡಿವೆ. ಪಾಕಿಸ್ತಾನದ ಮೇಲೆ ದಾಳಿ ನಡೆಸುವಲ್ಲಿ ಯಶಸ್ವಿ ಆಗಿದ್ದೇವೆ. ಆದರೂ ಕೆಲವೊಂದು ಪ್ರಶ್ನೆಗಳು ಮೂಡುತ್ತಿವೆ. ಪ್ರತಿಯೊಂದು ವಿಚಾರಕ್ಕೂ ಪ್ರಧಾನಿ ಅವರನ್ನೇ ಸುಪ್ರೀಂ ಎಂಬಂತೆ ಬಿಂಬಿಸಲಾಗುತ್ತಿದೆ ಎಂದರು.

## ಬಿಎಂಟಿಸಿಯಿಂದ ಬೆಂಗಳೂರು ಏರ್ಪೋರ್ಟ್‌ಗೆ ಹೊಸ ಬಸ್ ಮಾರ್ಗ ಆರಂಭ

• ಉದಯವಾಹಿನಿ ಬೆಂಗಳೂರು

ರಾಜಧಾನಿ ಬೆಂಗಳೂರಿನಿಂದ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹೊಸ ಬಸ್ ಮಾರ್ಗವನ್ನು ಆರಂಭಿಸಲಾಗಿದೆ. ಬೆಂಗಳೂರಿನ ಹೊರ ವಲಯವಾದ ಅತ್ತಿಬೆಲೆಯಿಂದ ಏರ್‌ಪೋರ್ಟ್ ನಡುವೆ ಬಸ್‌ಗಳು ಸಂಚಾರ ನಡೆಸಲಿವೆ. ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಮೇ 19 ರಿಂದ ಜಾರಿಗೆ ಬರುವಂತೆ ಈ ಮಾರ್ಗ ಆರಂಭಿಸಲಾಗಿದೆ. ಅತ್ತಿಬೆಲೆ ಬಸ್ ನಿಲ್ದಾಣದಿಂದ ಬಿದರಗುಪ್ಪೆ, ಮೇಡಹಳ್ಳಿ, ಸರ್ಜಾಪುರ ಬಸ್ ನಿಲ್ದಾಣ, ದೊಮ್ಮಸಂದ್ರ, ಕೊಡತಿಗೇಟ್, ಕೈಕೊಂಡರಹಳ್ಳಿ, ಬೆಳ್ಳಂದೂರು, ಕೆ.ಆರ್ ಪುರ ರೈಲ್ವೆ ನಿಲ್ದಾಣ, ಬಾಬುಸಾಬಪಾಳ್ಯ, ವೀರಣ್ಣನಪಾಳ್ಯ, ಹೆಬ್ಬಾಳ, ಕೋಗಿಲು ಕ್ರಾಸ್ ಮಾರ್ಗವಾಗಿ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತಲುಪಲಿದೆ.



ಉದಯವಾಹಿನಿ ಚಿತ್ರ

ನೂತನವಾಗಿ ಮಾರ್ಗ ಸಂಖ್ಯೆ ಕೆಐಎ 8 ಎಚ್ ಎಂದಾಗಿದ್ದು, ಒಟ್ಟು 06 ಹವಾನಿಯಂತ್ರಿತ ಬಸ್‌ಗಳು ಸಂಚಾರ ನಡೆಸಲಿವೆ. ಪ್ರಯಾಣಿಕರ ಪ್ರತಿಕ್ರಿಯೆ ನೋಡಿಕೊಂಡು ಬಸ್ ಸಂಖ್ಯೆ ಹೆಚ್ಚಿಸಲು ಬಿಎಂಟಿಸಿ ಮುಂದಾಗಿದೆ.

**ಅತ್ತಿಬೆಲೆ ಬಸ್ ನಿಲ್ದಾಣದಿಂದ ಬಸ್ ಹೊರಡುವ ಸಮಯ :** ಬೆಳಿಗ್ಗೆ 05:30, 06:30, 07:30, 08:30, 09:30, 10:30, ಸಂಜೆ 5:20, 6:15, 7:15, 8:15, 9:15, 10:20.

**ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಬಸ್ ಹೊರಡುವ ಸಮಯ :** ಮಧ್ಯರಾತ್ರಿ 2:00, 3:00, ಬೆಳಿಗ್ಗೆ 4:00, 05:00, 06:00, 07:00, ಮಧ್ಯಾಹ್ನ 2:00, 3:00, ಸಂಜೆ 4:00, 5:00, 6:00, 7:00.

### ವಿಜಯನಗರ ರಸ್ತೆ ಕಾಮಗಾರಿ ಬಸ್ ಸಂಚಾರಕ್ಕೆ ಕಿರಿಕಿರಿ

**ವಿಜಯನಗರದ ವೆಸ್ಟ್ ಆಫ್ ಕಾರ್ಡ್ ರಸ್ತೆಯಲ್ಲಿ ವೈಟ್ ಟಾಪಿಂಗ್ ಕಾಮಗಾರಿ ನಡೆಯುತ್ತಿದ್ದು, ಟ್ರಾಫಿಕ್ ಕಿರಿಕಿರಿಯಿಂದ ವಾಹನ ಸವಾರರು ಹೈರಾಣಾಗುವಂತಾಗಿದೆ. ಪಾಲಿಕೆ ಬಜಾರ್‌ನಿಂದ ಹೊಸಹಳ್ಳಿ ಮೆಟ್ರೊ ಸ್ಟೇಷನ್‌ವರೆಗೆ ಕಾಮಗಾರಿ ಚಾಲ್ತಿಯಲ್ಲಿದೆ. ಹೀಗಾಗಿ ಈ ಮಾರ್ಗವನ್ನು ಸಂಪೂರ್ಣ ಬಂದ್ ಮಾಡಿದ್ದು, ಬಿಎಂಟಿಸಿ ಬಸ್ಸುಗಳು ಸೇರಿದಂತೆ ಇತರ ಎಲ್ಲಾ ವಾಹನಗಳು ಸರ್ವಿಸ್ ರಸ್ತೆಯಲ್ಲಿಸಾಗಲು ಅನುವು ಮಾಡಿಕೊಡಲಾಗಿದೆ. ಸರ್ವಿಸ್ ರಸ್ತೆಯು ಕಿರಿದಾಗಿದ್ದು, ಪೀಕ್ ಅವರ್‌ಗಳಲ್ಲಿ ಟ್ರಾಫಿಕ್ ಜಾಮ್ ಉಂಟಾಗುತ್ತಿದೆ. ಶೀಘ್ರ ಕಾಮಗಾರಿ ಮುಗಿಸಬೇಕು ಎಂಬುದು ಸಾರ್ವಜನಿಕರ ಒತ್ತಾಯವಾಗಿದೆ.**

**ನಿತ್ಯ ಕೆಲಸಕ್ಕೆ ಬಿಎಂಟಿಸಿ ಬಸ್‌ನಲ್ಲೇ ಓಡಾಡುತ್ತೇನೆ.** ಬಸ್ ಅಲ್ಲಲ್ಲಿಸಿಲುಕಿಕೊಂಡು ರಸ್ತೆಯುದ್ದಕ್ಕೂ ಟ್ರಾಫಿಕ್‌ಜಾಮ್ ಆಗುತ್ತಿದೆ. ಹಲವು ಬಾರಿ ಕೆಲಸಕ್ಕೆ ತೆರಳುವುದು ತಡವಾಗಿದೆ. ಕಾಮಗಾರಿ ಶೀಘ್ರ ಮುಗಿಸಿದರೆ ಅನುಕೂಲವಾಗಲಿದೆ, ಎಂದು ವಿಜಯನಗರ ನಿವಾಸಿ ಬಾನು ಪ್ರಕಾಶ್ ಹೇಳಿದರು

## ಏಳು ಸರ್ಕಾರಿ ಅಧಿಕಾರಿಗಳ ಅಕ್ರಮ ಆಸ್ತಿಗಳಿಕೆ ಪ್ರಕರಣ

• ಉದಯವಾಹಿನಿ ಬೆಂಗಳೂರು

ಏಳು ಸರ್ಕಾರಿ ಅಧಿಕಾರಿಗಳ ವಿರುದ್ಧದ ಆದಾಯಕ್ಕಿಂತ ಅಧಿಕ ಆಸ್ತಿ ಗಳಿಕೆ ಹಾಗೂ ಭ್ರಷ್ಟಾಚಾರ ಆರೋಪ ಸಂಬಂಧ ರಾಜ್ಯದ ವಿವಿಧೆಡೆ ಲೋಕಾಯುಕ್ತ ಪೊಲೀಸರು (ಗುರುವಾರ) ಬೆಳಿಗ್ಗೆ ದಾಳಿ ನಡೆಸಿದ್ದಾರೆ.





**ಹಲವು ಮಹತ್ವದ ದಾಖಲೆ**

ಆರೋಪಿ ಅಧಿಕಾರಿಗಳಿಗೆ ಸಂಬಂಧಿಸಿದ 40 ಸ್ಥಳಗಳಲ್ಲಿ ಸಂಘಟಿತ ದಾಳಿ ನಡೆಸಲಾಗಿದೆ.

ಲೋಕಾಯುಕ್ತ ಅಧಿಕಾರಿಗಳ ಪ್ರಕಾರ, ತುಮಕೂರಿನ ನಿರ್ಮಿತಿ ಕೇಂದ್ರದ ಯೋಜನಾ ನಿರ್ದೇಶಕ ರಾಜಶೇಖರ್, ದಕ್ಷಿಣ ಕನ್ನಡ ಜಿಲ್ಲೆಯ ಸರ್ವೆ ಮೇಲ್ವಿಚಾರಕ ಮಂಜುನಾಥ್, ವಿಜಯಪುರದ ಡಾ. ಬಿ ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮದ ರೇಣುಕಾ ಸಾತರ್ಲೆ, ಬೆಂಗಳೂರಿನ ನಗರ ಮತ್ತು ಗ್ರಾಮೀಣ ಯೋಜನಾ ನಿರ್ದೇಶನಾಲಯದ ಹೆಚ್ಚುವರಿ ನಿರ್ದೇಶಕ ಮುರಳಿ ಟಿವಿ, ಬೆಂಗಳೂರು ಕಾನೂನು ಮಾಪನಶಾಸ್ತ್ರದ ಇನ್ಸ್‌ಪೆಕ್ಟರ್ ಎಚ್‌ಆರ್ ನಟರಾಜ್, ಹೊಸಕೋಟೆ ತಾಲ್ಲೂಕು ಕಚೇರಿಯ ಎರಡನೇ ದರ್ಜೆಯ ಸಹಾಯ ಅನಂತ್ ಕುಮಾರ್ ಮತ್ತು ಶಹಾಪುರ ತಾಲ್ಲೂಕು ಕಚೇರಿಯ ಉಮಾಕಾಂತ ಎಂಬುವವರಿಗೆ ಸಂಬಂಧಿಸಿದ ಸ್ಥಳಗಳ ಮೇಲೆ ದಾಳಿ ನಡೆಸಲಾಗಿದೆ.

ಸ್ಥಿರಾಸ್ತಿಗಳು ಮತ್ತು ಲೆಕ್ಕಕ್ಕೆ ಸಿಗದ ನಗದು, ಆಭರಣಗಳು, ದುಬಾರಿ ಬೆಲೆಯ ವಾಹನಗಳು ಮತ್ತು ನಗದು ಸೇರಿದಂತೆ ಹಲವು ಮಹತ್ವದ ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಲೋಕಾ ಯುಕ್ತ ಮೂಲಗಳು ತಿಳಿಸಿವೆ.

## ರಾಜ್ಯ ಸರ್ಕಾರ ದೆಹಲಿಯಲ್ಲಿ ಪ್ರತಿಭಟನೆ

• ಉದಯವಾಹಿನಿ ಬೆಂಗಳೂರು

ಕೇಂದ್ರ ಪ್ರಾಯೋಜಿತ ಯೋಜನೆಗಳು ಮತ್ತು ಅನುದಾನಗಳಿಗೆ ಕರ್ನಾಟಕಕ್ಕೆ ಹಣ ಬಿಡುಗಡೆ ಮಾಡುವಲ್ಲಿ ಕೇಂದ್ರ ಸರ್ಕಾರ ವಿಳಂಬ ಮಾಡುತ್ತಿದೆ ಎಂದು ಆರೋಪಿಸಿರುವ ಗೃಹ ಸಚಿವ ಜಿ ಪರಮೇಶ್ವರ, ರಾಜ್ಯ ಸರ್ಕಾರ ಮತ್ತೊಮ್ಮೆ ಇದಕ್ಕಾಗಿ ದೆಹಲಿಯಲ್ಲಿ ಪ್ರತಿಭಟನೆ ನಡೆಸುವ ಪರಿಸ್ಥಿತಿ ಬರಬಾರದು ಎಂದು ಗುರುವಾರ ಹೇಳಿದ್ದಾರೆ. ಕೇಂದ್ರವು ಅನುದಾನವನ್ನು ಸಕಾಲದಲ್ಲಿ ಬಿಡುಗಡೆ ಮಾಡುವುದರಿಂದ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಲು ಸಹಾಯವಾಗುತ್ತದೆ ಎಂದು ಅವರು ಹೇಳಿದರು. ಕಳೆದ ಎರಡು ವರ್ಷಗಳಿಂದ, ರಾಜ್ಯ ಸರ್ಕಾರಕ್ಕೆ ಬರಬೇಕಾದ ಅನುದಾನವನ್ನು ನೀಡುವಂತೆ ನಾವು ಕೇಂದ್ರವನ್ನು ಕೇಳುತ್ತಿದ್ದೇವೆ. ವಿವಿಧ ಕಾರಣಗಳಿಂದ, ಅದು ವಿಳಂಬವಾಗುತ್ತಿದೆ.

ಕೆಲವೊಮ್ಮೆ ಅನುದಾನ ಬರುವುದೇ ಇಲ್ಲ. ಆದ್ದರಿಂದ ಮುಖ್ಯಮಂತ್ರಿಗಳು ನಿನ್ನೆ ಪರಿಶೀಲನೆ ನಡೆಸಿದರು ಎಂದು ಪರಮೇಶ್ವರ ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯಕ್ಕೆ ಹಣವನ್ನು ಬಿಡುಗಡೆ ಮಾಡುವಂತೆ ಕೇಂದ್ರದ ಮೇಲೆ ಒತ್ತಡ ಹೇರುವಂತೆ ಮುಖ್ಯಮಂತ್ರಿಗಳು ರಾಜ್ಯದ ಸಂಸದರನ್ನು ವಿನಂತಿಸಿದ್ದಾರೆ ಎಂದು ಹೇಳಿದರು.

ಕೇಂದ್ರ, ರಾಜ್ಯ ಸರ್ಕಾರದ ನಡುವಿನ ಸ್ಥಾಪಿತ ಸಂಬಂಧದ ಆಧಾರದ ಮೇಲೆ ಈ ಹಣಕಾಸಿನ ನೆರವು ನ್ಯಾಯಯುತ ಬೇಡಿಕೆಯಾಗಿದೆ. ರಾಜ್ಯಕ್ಕೆ 5,500 ಕೋಟಿ ರೂ.ಗಳನ್ನು ತಕ್ಷಣವೇ ಬಿಡುಗಡೆ ಮಾಡಬೇಕು. ಕಳೆದ ಬಾರಿ ಕೇಂದ್ರದ ಮೇಲೆ ಒತ್ತಡ ಹೇರುವ ಮೂಲಕ ಹಣವನ್ನು ಪಡೆಯಲು ಪದೇ ಪದೇ ಮಾಡಿದ ಪ್ರಯತ್ನಗಳು ವಿಫಲವಾದ ಕಾರಣ ರಾಜ್ಯ ಸರ್ಕಾರ ದೆಹಲಿಗೆ ಹೋಗಿ ಪ್ರತಿಭಟನೆ ನಡೆಸಬೇಕಾದ ಪರಿಸ್ಥಿತಿ ಬಂದಿತ್ತು.

# ಕನ್ನಡಿಗರ ಬೆಂಗಳೂರು ನಾಮಕರಣ ವಾಗಲಿ

**ಚನ್ನೇಗೌಡ ಉಜ್ಜನಿ ಚಲುವಯ್ಯ**
**ಲೇಖಕರು, ಕನ್ನಡಪರ ಚಿಂತಕರು**



ಕರ್ನಾಟಕ ರಾಜ್ಯದ ಉಪ ಮುಖ್ಯ ಮಂತ್ರಿಗಳಾದ ಸನ್ಮಾನ್ಯ ಡಿ ಕೆ ಶಿವಕುಮಾರ್ ರವರಿಗೆ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು ಜಗನ್ಮಾತೆ ಶ್ರೀ ಚಾಮುಂಡೇಶ್ವರಿ ದೇವಿ ನಿಮ್ಮೆಲ್ಲ ಇಷ್ಟಾರ್ಥಗಳನ್ನು ನೆರವೇರಿಸಲಿ.

ಮಾನ್ಯ ಉಪ ಮುಖ್ಯಮಂತ್ರಿಗಳೇ ನೀವು ಇಂದಿನಿಂದ ಮಾಡಲು ಹೊರಟಿರುವ ಗ್ರೇಟರ್ ಬೆಂಗಳೂರು ಹೆಸರಿನ ಬದಲು ಕನ್ನಡಿಗರ ನೆಲವಾದ ಈ ಸುಂದರ ಬೆಂಗಳೂರು ಮುಂದೆಯೂ ಕನ್ನಡಿಗರ ನೆಲವಾಗಿಯೇ ಉಳಿಯಲು ಕನ್ನಡಿಗರ ಬೆಂಗಳೂರು ಎಂಬುದಾಗಿ ಹೆಸರಿಡಲು ನಿಮ್ಮಲ್ಲಿ ವಿನಮ್ರ ಮನವಿ. ಮುಂದೊಂದು ದಿನ ನಿಮ್ಮ ಈ ನಿರ್ಧಾರದಿಂದ ಇಡೀ ಕನ್ನಡ ಕುಲವೇ ನಿಮ್ಮನ್ನು ಗೌರವಿಸುತ್ತದೆ. ದಯಮಾಡಿ ನಿಮ್ಮ ಹುಟ್ಟುಹಬ್ಬದ ಸಂಭ್ರಮದಲ್ಲಿ ಕನ್ನಡಿಗರ ಬೆಂಗಳೂರು ಎಂಬ ಈ ಮಾತು ಜಾರಿಗೆ ಬರಲಿ.

ದಯವಿಟ್ಟು ಈ ಮೇಲ್ಕಂಡ ಮನವಿಗೆ ಬೆಂಗಳೂರು ಅಭಿವೃದ್ಧಿ ಸಚಿವರು, ಶಾಸಕರುಗಳು, ಸಚಿವರು, ನಗರಾಭಿವೃದ್ಧಿ ಸಚಿವರು, ಪಾಲಿಕೆಗಳ ಮೇಯರ್‌ಗಳು, ಬಿಡಿಎ ಆಯುಕ್ತ, ಬೆಂಗಳೂರು ಜಲಮಂಡಳಿ ಅಧ್ಯಕ್ಷರು, ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕರು, ಬಿಎಂಆರ್ ಸಿಎಲ್ ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರು, ಕಂದಾಯ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಪೊಲೀಸ್ ಕಮಿಷನರ್ ರವರು, ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು, ರಾಜ್ಯ ಅಗ್ನಿಶಾಮಕ ಮತ್ತು ತುರ್ತುಸೇವೆಗಳ ನಿರ್ದೇಶಕರು, ನಗರ ಭೂಸಾರಿಗೆ ನಿರ್ದೇಶನಾಲಯದ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ

ಮಹಾನಗರ ಆಯುಕ್ತರು, ಕನ್ನಡ ಪತ್ರಿಕಾ ಬಳಗ, ಸುದ್ದಿವಾಹಿನಿ ಯವರು, ಸಾಹಿತಿಗಳು, ಬುದ್ಧಿಜೀವಿಗಳು, ಗೌರವಾನ್ವಿತರು ನೀವೆಲ್ಲರೂ ಈ ಮೇಲ್ಕಂಡ ಹೆಸರನ್ನು ಬೇಕೇ ಬೇಕು ಎಂಬುದಾಗಿ ತಿಳಿಸಿ ಸಹಕಾರ ಹಾಗೂ ಬೆಂಬಲ ನೀಡುವ ಮೂಲಕ ಈ ನೆಲದ ಘನತೆಯನ್ನು ನಾವೆಲ್ಲರೂ ಉಳಿಸೋಣ ಈ ನೆಲದ ಸಂಸ್ಕೃತಿ, ಭಾಷೆ, ನೆಲ -ಜಲ, ಉಳಿಸುವ ಕಾರ್ಯದಲ್ಲಿ ನಾವೆಲ್ಲರೂ ಮುಂದೆ ನಿಲ್ಲೋಣ.



## ಹಳದಿ ಮಾರ್ಗದಲ್ಲಿ ವಾಣಿಜ್ಯ ಸಂಚಾರ ಆರಂಭ ಯಾವಾಗ?

### ಎಚ್‌ಎಸ್‌ಆರ್ ಲೇಔಟ್, ಎಲೆಕ್ಟ್ರಾನಿಕ್ ಸಿಟಿ ಕಡೆಗೆ ತೆರಳುವ ಐಟಿ ಉದ್ಯೋಗಿಗಳಿಗೆ ಅನುಕೂಲ

• ಉದಯವಾಹಿನಿ ಬೆಂಗಳೂರು

ನಮ್ಮ ಮೆಟ್ರೋ ಹಳದಿ ಮಾರ್ಗಕ್ಕೆ (ಆರ್.ವಿ.ರಸ್ತೆ - ಬೊಮ್ಮಸಂದ್ರ) ಪಶ್ಚಿಮ ಬಂಗಾಳದ ಟಿಟಾಗರ್ ಸಂಸ್ಥೆಯಿಂದ ಹೊಸದಾಗಿ ಮೂರು ಬೋಗಿಗಳು ಹೆಬ್ಬಗೋಡಿ ಡಿಪೋಗೆ ಬಂದು ತಲುಪಿವೆ.

ಟಿಟಾಗರ್ ಸಂಸ್ಥೆ ಹಳದಿ ಮಾರ್ಗಕ್ಕಾಗಿ 15 ರೈಲುಗಳನ್ನು (90 ಬೋಗಿ) ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತಕ್ಕೆ (ಬಿಎಂಆರ್‌ಸಿಎಲ್) ನೀಡಬೇಕು. ಸದ್ಯ ಮೂರು ಸೆಟ್ ರೈಲುಗಳನ್ನು (18 ಬೋಗಿ) ನೀಡಿದೆ. ಉಳಿದ ಬೋಗಿಗಳನ್ನು ಹಂತ - ಹಂತವಾಗಿ ನೀಡಲಾಗುತ್ತದೆ ಎಂದು ಸಂಸ್ಥೆ ತಿಳಿಸಿದೆ.

ಮೂರು ಸೆಟ್ ರೈಲುಗಳು ಬಿಎಂಆರ್‌ಸಿಎಲ್ ಸೇರಿರುವುದರಿಂದ ಹಳದಿ ಮಾರ್ಗದ ವಾಣಿಜ್ಯ ಸಂಚಾರ ಇನ್ನಷ್ಟು ಸಮೀಪಿಸಿದ್ದು, ಆರಂಭದಲ್ಲಿ ಪ್ರತಿ 30 ನಿಮಿಷಕ್ಕೆ ಒಂದು ರೈಲು ಓಡಿಸಲು ತೀರ್ಮಾನಿಸಿದೆ. 19 ಕಿ.ಮೀ.ನ ಈ ಮಾರ್ಗದಲ್ಲಿ 16 ನಿಲ್ದಾಣಗಳಿದ್ದು, ಆರಂಭದಲ್ಲಿ ಐದು ನಿಲ್ದಾಣಗಳಲ್ಲಿ ಮಾತ್ರ ನಿಲುಗಡೆ ಇರಲಿದೆ. ಜೂನ್ ಅಂತ್ಯಕ್ಕೆ ವಾಣಿಜ್ಯ ಸಂಚಾರ ಆರಂಭವಾಗುವ ನಿರೀಕ್ಷೆಯಿದೆ.

ಮುಂದಿನ ಕೆಲ ದಿನಗಳಲ್ಲಿ ಎಲ್ಲಾ ಆರು ಬೋಗಿಗಳನ್ನು ರೈಲು ಸೆಟ್‌ನಲ್ಲಿ ಜೋಡಿಸುವ ನಿರೀಕ್ಷೆ ಇದೆ.



ಉದಯವಾಹಿನಿ ಚಿತ್ರ

- **ನಮ್ಮ ಮೆಟ್ರೋದ ಹಳದಿ ಮಾರ್ಗಕ್ಕೆ ಪಶ್ಚಿಮ ಬಂಗಾಳದ ಟಿಟಾಗರ್ ಸಂಸ್ಥೆಯಿಂದ ಬಂದಿವೆ ಮೂರು ಹೊಸ ಬೋಗಿಗಳು**
- **ವಾಣಿಜ್ಯ ಸಂಚಾರವು ಜೂನ್ ಅಂತ್ಯಕ್ಕೆ ಆರಂಭವಾಗುವ ನಿರೀಕ್ಷೆ, ಆರಂಭದಲ್ಲಿ ಪ್ರತಿ 30 ನಿಮಿಷಕ್ಕೆ ಒಂದು ರೈಲು**

ಆನಂತರ ಮುಂದಿನ ಕೆಲ ದಿನಗಳವರೆಗೆ ಬಿಎಂಆರ್‌ಸಿಎಲ್ ರೈಲುಗಳ ಪ್ರಾಯೋಗಿಕ ಪರೀಕ್ಷೆ ನಡೆಸಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ನಂತರ ವಾಣಿಜ್ಯ ಸಂಚಾರ ಆರಂಭವಾಗಲಿದೆ. ಹಳದಿ ಮಾರ್ಗದಲ್ಲಿ ಈಗಾಗಲೇ ಸುಮಾರು ಒಂದು ವರ್ಷ ಕಾರ್ಯಾಚರಣೆ ವಿಳಂಬವಾಗಿದೆ.


**ಟಿಟಾಗರ್ ಸಂಸ್ಥೆ ಡಿಸೆಂಬರ್ ವೇಳೆಗೇ ಮೂರು ಸೆಟ್ ರೈಲುಗಳನ್ನು (18 ಬೋಗಿ) ಬಿಎಂಆರ್‌ಸಿಎಲ್‌ಗೆ ನೀಡಬೇಕಿತ್ತು. ಅಂದುಕೊಂಡಂತೆ ನಡೆದಿದ್ದರೆ 2025ರ ಮಾರ್ಚ್ ತಿಂಗಳಿಂದ ಪ್ರತಿ ತಿಂಗಳು ಎರಡು ಸೆಟ್ ರೈಲುಗಳಂತೆ ಆಗಸ್ಟ್ ವೇಳೆಗೆ ಈ ಮಾರ್ಗಕ್ಕೆ ಬೇಕಾದ ಎಲ್ಲಾ 15 ರೈಲು ಸೆಟ್‌ಗಳನ್ನು ಸಂಸ್ಥೆ ಪೂರೈಸಬೇಕಿತ್ತು. ಆದರೆ, ಈಗಿನ ಪರಿಸ್ಥಿತಿಯಲ್ಲಿ ಇದು ಕಷ್ಟಸಾಧ್ಯವಾಗಿದ್ದು, ಈ ವರ್ಷದ ಅಂತ್ಯದ ವೇಳೆಗೆ ಎಲ್ಲಾ 15 ರೈಲು ಸೆಟ್ ಬರುವ ನಿರೀಕ್ಷೆ ಇದೆ.**

ಸಂಚಾರ ದಟ್ಟಣೆಯನ್ನು ಕಡಿಮೆ ಮಾಡುವ ಮತ್ತು ಪ್ರಯಾಣದ ಸಮಯವನ್ನು ಕಡಿತಗೊಳಿಸುವ ಮೂಲಕ ಹಳದಿ ಮಾರ್ಗವು ವಿಶೇಷವಾಗಿ ಸಿಲ್ಕ್ ಬೋರ್ಡ್, ಎಚ್‌ಎಸ್‌ಆರ್ ಲೇಔಟ್, ಎಲೆಕ್ಟ್ರಾನಿಕ್ ಸಿಟಿ ಕಡೆ ತೆರಳುವ ಐಟಿ ಉದ್ಯೋಗಿಗಳಿಗೆ ನೆರವಾಗಲಿದೆ. ಕಳೆದ ವರ್ಷ ಅಕ್ಟೋಬರ್‌ನಲ್ಲಿ 2025ರ ಜನವರಿ ತಿಂಗಳಲ್ಲಿ ವಾಣಿಜ್ಯ ಸಂಚಾರ ಆರಂಭಿಸುವುದಾಗಿ ಬಿಎಂಆರ್‌ಸಿಎಲ್ ತಿಳಿಸಿತ್ತು. ಆದರೆ ಆರು ತಿಂಗಳ ನಂತರ ಸಂಚಾರ ಆರಂಭವಾಗುವ ನಿರೀಕ್ಷೆ ಇದೆ.

## ಸಾರ್ವಜನಿಕ ಸ್ಮಶಾನ ಉಳಿಸುವಂತೆ ಗ್ರಾಮಸ್ಥರ ಒತ್ತಾಯ

• ಉದಯವಾಹಿನಿ, ಶಿರಾ

ತಾಲ್ಲೂಕಿನ ಬುಕ್ಕಾಪಟ್ಟಣ ಹೋಬಳಿ ರಾಮಲಿಂಗಾಪುರದಲ್ಲಿ ಸ್ಮಶಾನಕ್ಕಾಗಿ ಗುರುತಿಸಲ್ಪಟ್ಟ ಜಾಗ ಉಳಿಸಿಕೊಡುವಂತೆ ಗ್ರಾಮಸ್ಥರು ಆಗ್ರಹಿಸಿದ್ದಾರೆ. ರಾಮಲಿಂಗಾಪುರ ಗ್ರಾಮದಲ್ಲಿ ಗ್ರಾಮ ಪಂಚಾಯಿತಿಯಿಂದ ಸಾರ್ವಜನಿಕ ಸ್ಮಶಾನ ಎಂದು ಗುರುತು ಮಾಡಿರುವ ಜಾಗದ ಪಕ್ಕದಲ್ಲಿರುವ ಖಾಸಗಿ ಜಮೀನಿನ ಮಾಲೀಕ ತಮ್ಮ ಜಮೀನನ್ನು ಅಚ್ಚುಕಟ್ಟು ಮಾಡಿ ಅಲ್ಲಿ ಸಿಕ್ಕ ಕಲ್ಲು ಬಂಡೆಗಳನ್ನು ಸಾರ್ವಜನಿಕ ಸ್ಮಶಾನದಲ್ಲಿ ತಂದು ಸುರಿಯುತ್ತಿದ್ದಾರೆ. ಭದ್ರಾ ಮೇಲ್ದಂಡೆ ಕಾಮಗಾರಿ ಸಮಯದಲ್ಲಿ ಸಿಕ್ಕ ಕಲ್ಲು ಬಂಡೆಗಳನ್ನು ತೆಗೆದುಕೊಂಡು ಬಂದು ಇಲ್ಲಿಯೇ ಸುರಿಯುತ್ತಿರುವುದರಿಂದ ಸಾರ್ವಜನಿಕ ಸ್ಮಶಾನ ಜಾಗ ಕಲ್ಲು, ಬಂಡೆಗಳಿಂದ ಕೂಡಿದ್ದು ಅಂತ್ಯಕ್ರಿಯೆ ನಡೆಸಲು ತೊಂದರೆಯಾಗುತ್ತಿದೆ ಎಂದು ಆರೋಪಿಸಿದ್ದಾರೆ. ಸ್ಮಶಾನದ ಜಾಗವನ್ನು ಉಳಿಸಬೇಕಾದ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಅಧಿಕಾರಿಗಳು ಇದೇ ರಸ್ತೆಯಲ್ಲಿ ಪ್ರತಿನಿತ್ಯ ಓಡಾಡುತ್ತಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಪರಿಸ್ಥಿತಿ ಇದೇ ರೀತಿ ಮುಂದುವರೆದರೆ ಅಂತ್ಯಕ್ರಿಯೆ ನಡೆಸಲು ಕಷ್ಟವಾಗುವುದು. ಆದ್ದರಿಂದ ಅಧಿಕಾರಿಗಳು ಗಮನಹರಿಸಿ ಶೀಘ್ರ ಸ್ಮಶಾನವನ್ನು ಹದ್ದುಬಸ್ತು ಮಾಡಿ ಉಳಿಸಿಕೊಡಬೇಕು ಎಂದು ಗ್ರಾಮಸ್ಥರು ಮನವಿ ಮಾಡಿದ್ದಾರೆ. ಅಜ್ಜಂದಿರ ಕಾಲದಿಂದಲೂ ಇಲ್ಲಿಯೇ ಅಂತ್ಯಕ್ರಿಯೆಗಳನ್ನು ಮಾಡಿಕೊಂಡು ಬಂದಿದ್ದು, ಇತ್ತೀಚಿನ ದಿನಗಳಲ್ಲಿ ಭದ್ರಾ ಮೇಲ್ದಂಡೆ ಯೋಜನೆ ಕಾಮಗಾರಿಯ ಬಂಡೆಗಳು, ಪಕ್ಕದ ಜಮೀನಿನ ಮಾಲೀಕ ತಮ್ಮ ಜಮೀನಿನಲ್ಲಿ ಸಿಕ್ಕ ಕಲ್ಲು ಬಂಡೆಗಳನ್ನು ಇಲ್ಲಿಗೆ ತಂದು ಸುರಿಯುತ್ತಿರುವುದರಿಂದ ಅಂತ್ಯಕ್ರಿಯೆ ಮಾಡುವ ಸಮಯದಲ್ಲಿ ಹಿಡಿ ಮಣ್ಣು ಸಹ ಸಿಗುತ್ತಿಲ್ಲ. ಈ ಬಗ್ಗೆ ತಕ್ಷಣ ಕ್ರಮ ಕೈಗೊಂಡು ಅಲ್ಲಿರುವ ಕಲ್ಲು, ಬಂಡೆಗಳನ್ನು ತೆರವುಗೊಳಿಸಿ ಸ್ಮಶಾನ ಉಳಿಸಿಕೊಡಬೇಕು' ಎಂದು ರಾಮಲಿಂಗಾಪುರದ ಚಂದ್ರಶೇಖರ್ ಒತ್ತಾಯಿಸಿದರು.


ಉದಯವಾಹಿನಿ ಚಿತ್ರ

## ಕೋಲೂರು ರೈಲ್ವೆ ಅಂಡರ್‌ಪಾಸ್‌ಗೆ ಹೊಸರೂಪ: ಗ್ರಾಮಸ್ಥರ ಮೆಚ್ಚುಗೆ
## ಯಾವುದೇ ತೊಂದರೆ ಇಲ್ಲದೆ ರೈಲ್ವೆ ಗೇಟ್ ಅಂಡರ್‌ಪಾಸ್‌ನಲ್ಲಿ ಪ್ರಯಾಣ

• ಉದಯವಾಹಿನಿ, ಚನ್ನಪಟ್ಟಣ

ತಾಲ್ಲೂಕಿನ ಕೋಲೂರು ಗಾಂಧಿ ಗ್ರಾಮದಿಂದ ಕೋಲೂರು ಗ್ರಾಮಕ್ಕೆ ತೆರಳುವ ಮಾರ್ಗ ಮಧ್ಯೆ ಇರುವ ರೈಲ್ವೆ ಗೇಟ್ ಅಂಡರ್‌ಪಾಸ್‌ನಲ್ಲಿ ವಾಹನ ಸವಾರರಿಗೆ ಆಗುತ್ತಿದ್ದ ತೊಂದರೆಗೆ ಪರಿಹಾರ ಕಲ್ಪಿಸುವಲ್ಲಿ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಸದಸ್ಯ ಡಾ.ಸಿ.ಎನ್.ಮಂಜುನಾಥ್ ಪ್ರಮುಖ ಪಾತ್ರವಹಿಸಿದ್ದು, ಈ ಭಾಗದ ಜನರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಎರಡೂ ಗ್ರಾಮಗಳ ಮಧ್ಯೆ ಇರುವ ರೈಲ್ವೆಗೇಟ್‌ನ ಅಂಡರ್ ಪಾಸ್‌ನಲ್ಲಿ ಮಳೆಗಾಲದಲ್ಲಿ ನೀರು ನಿಂತು ಇಲ್ಲಿನ ವಾಹನ ಸವಾರರಿಗೆ ಬಹಳ ತೊಂದರೆಯಾಗುತ್ತಿತ್ತು. ಈ ಬಗ್ಗೆ ಗ್ರಾಮಸ್ಥರಿಂದ ಬಂದ ಮನವಿ ಮೇರೆಗೆ ಈ ರೈಲ್ವೆ ಗೇಟ್ ಅಂಡರ್ ಪಾಸ್‌ಗೆ ಹೊಸರೂಪ ಕೊಡಿಸುವಲ್ಲಿ ಅವರು ಶ್ರಮಿಸಿದ್ದಾರೆ. ಈಗ ಇಲ್ಲಿನ ಪ್ರಯಾಣಿಕರು, ವಾಹನ ಸವಾರರು ಯಾವುದೇ ತೊಂದರೆ ಇಲ್ಲದೆ ರೈಲ್ವೆ ಗೇಟ್ ಅಂಡರ್‌ಪಾಸ್‌ನಲ್ಲಿ ಪ್ರಯಾಣಿಸುವಂತಾಗಿದೆ.

ಎರಡೂ ಗ್ರಾಮಗಳ ಮಧ್ಯೆ ರೈಲ್ವೆ ಹಳಿ ಹಾದು ಹೋಗುತ್ತದೆ. ಈ ಗ್ರಾಮಗಳ ಮಧ್ಯೆ ಸಂಪರ್ಕ ರಸ್ತೆಗೆ ರೈಲ್ವೆ ಇಲಾಖೆ ಅಂಡರ್ ಪಾಸ್ ನಿರ್ಮಾಣ ಮಾಡಿತ್ತು. ಆದರೆ, ಈ ಅಂಡರ್ ಪಾಸ್‌ನಲ್ಲಿ ಮಳೆಗಾಲದಲ್ಲಿ ನೀರು ನಿಲ್ಲುತ್ತಿತ್ತು. ಈ ಬಗ್ಗೆ ಈ ಭಾಗದ ವಾಹನ ಸವಾರರು, ಗ್ರಾಮಸ್ಥರು ಸಂಸದರಿಗೆ ಮನವಿ ಪತ್ರ ನೀಡಿದ್ದರು. ಇದರ ಬಗ್ಗೆ ಗಮನ ನೀಡಿದ ಮಂಜುನಾಥ್ ಅವರು, ಕೇಂದ್ರ ರೈಲ್ವೆ ಸಚಿವ ವಿ. ಸೋಮಣ್ಣ ಅವರಿಗೆ 2022ರಲ್ಲಿ ಪತ್ರ ಬರೆದು ಇಲ್ಲಿನ ಜನ ರಿಗೆ ಆಗುತ್ತಿದ್ದ ಸಮಸ್ಯೆಯನ್ನು ಅವರ ಗಮನಕ್ಕೆ ತಂದು, ಸಮಸ್ಯೆ ಇತ್ಯರ್ಥಕ್ಕೆ ತಾವೇ ಸ್ವತಃ ಮುತುವರ್ಜಿ ವಹಿಸಿದ್ದರು.ಎರಡೂ ಗ್ರಾಮಗಳ ನಡುವೆ ಈ ಮೊದಲು ರೈಲ್ವೆ ಗೇಟ್ ಅಳವಡಿಸಲಾಗಿತ್ತು. ಬೆಂಗಳೂರು-ಮೈಸೂರು ನಡುವೆ ಪ್ರತಿದಿನ 30ಕ್ಕೂ ಹೆಚ್ಚು ರೈಲುಗಳು ಸಂಚರಿಸುತ್ತಿದ್ದ ಕಾರಣ ರೈಲು ಸಂಚರಿಸುವ ವೇಳೆ ರೈಲ್ವೆ ಗೇಟ್ ಮುಚ್ಚಲಾಗುತ್ತಿತ್ತು. ಆಗ ಇಲ್ಲಿನ ವಾಹನ ಸವಾರರು, ಪ್ರಯಾಣಿಕರು ರೈಲು ಗೇಟ್ ತೆಗೆಯುವವರೆಗೂ ಕಾದು ನಿಲ್ಲುವಂತಾಗಿತ್ತು. ಆ ವೇಳೆ ಸಂಸದರಾಗಿದ್ದ ಡಿ.ಕೆ.ಸುರೇಶ್ ಅವರ ಗಮನಕ್ಕೆ ಗ್ರಾಮಸ್ಥರು ತಂದಿದ್ದರು. ಡಿ.ಕೆ.ಸುರೇಶ್ ಅವರು ಅಂದು ರೈಲ್ವೆ ಇಲಾಖೆವರಿಗೆ ಮನವಿ ಮಾಡಿ ಇಲ್ಲಿ ಅಂಡರ್ ಪಾಸ್ ನಿರ್ಮಾಣ ಮಾಡಿಸಿದ್ದರು.

ಆದರೆ, ಇಲ್ಲಿ ಅಂಡರ್ ಪಾಸ್ ನಿರ್ಮಾಣ ಮಾಡಿ ಉದ್ಘಾಟನೆಯಾಗಿ ಸಮಸ್ಯೆ ಪರಿಹಾರವಾಯಿತು ಎಂದು ಕೊಳ್ಳುತ್ತಿರುವಾಗಲೇ ಮಳೆಗಾಲ ಆರಂಭವಾಗಿ ಇಡೀ ಅಂಡರ್ ಪಾಸ್ ಕೆರೆಯಂತಾಯಿತು. ವಾಹನ ಸವಾರರು ರೈಲ್ವೆ ಹಳಿ ದಾಟಲು ಮತ್ತೊಂದು ಸಮಸ್ಯೆ ಎದುರಿಸುವಂತಾಯಿತು.


ಉದಯವಾಹಿನಿ ಚಿತ್ರ

ನೀರು ನಿಲ್ಲದಂತೆ ಕಾಮಗಾರಿ

### ಕೇಂದ್ರ ಸಚಿವ ಸೋಮಣ್ಣಗೆ ಪತ್ರ

**ಪ್ರತಿ ಬಾರಿ ಮಳೆ ಬಂದಾಗ ಸಮಸ್ಯೆ ಎದುರಿಸುತ್ತಿದ್ದ ಈ ಭಾಗದ ಪ್ರಯಾಣಿಕರು ವಾಹನ ಸವಾರರು ಈಗಿನ ಸಂಸದ ಡಾ.ಮಂಜುನಾಥ್ ಅವರ ಗಮನ ಸೆಳೆದಾಗ ಅವರು 2024 ಆಗಸ್ಟ್‌ನಲ್ಲಿ ಕೇಂದ್ರ ರೈಲ್ವೆ ಸಚಿವ ವಿ.ಸೋಮಣ್ಣ ಅವರಿಗೆ ಸಮಸ್ಯೆ ಬಗ್ಗೆ ಪತ್ರ ಬರೆದು ಗಮನ ಸೆಳೆದಿದ್ದರು. ಈ ಬಗ್ಗೆ ಸೋಮಣ್ಣ ಅವರು ನೀಡಿದ ಸೂಚನೆಯಂತೆ ರೈಲ್ವೆ ಅಧಿಕಾರಿಗಳು ಈ ಸಮಸ್ಯೆಗೆ ಪರಿಹಾರ ನೀಡಿದ್ದಾರೆ. ಎಷ್ಟೇ ಮಳೆ ಬಂದರೂ ನೀರು ಅಂಡರ್ ಪಾಸ್‌ಗೆ ಹೋಗದಂತೆ ಮಾಡಿ ಕೆಳ ಸೇತುವೆಯಲ್ಲಿ ನೀರು ನಿಲ್ಲದಂತೆ ಸರಾಗಿ ಹರಿದು ಹೋಗುವಂತೆ ಚರಂಡಿ ಮಾಡಲಾಗಿದೆ ಅಂಡರ್ ಪಾಸ್‌ಗೆ ಮೇಲ್ಚಾವಣಿ ಮಾಡಿಸಿ ರಸ್ತೆಯಲ್ಲಿ ಹರಿಯುವ ನೀರು ನಿಲ್ಲದಂತೆ ಕಾಮಗಾರಿ ಮಾಡಿಸುವಲ್ಲಿ ಸಂಸದ ಮಂಜುನಾಥ್ ಶ್ರಮಿಸಿದ್ದಾರೆ.**

2022ರಲ್ಲಿ ಆಗಿನ ಶಾಸಕ ಎಚ್.ಡಿ.ಕುಮಾರಸ್ವಾಮಿ, ವಿಧಾನ ಪರಿಷತ್ ಸದಸ್ಯ ಸಿ.ಪಿ.ಯೋಗೇಶ್ವರ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವ ಆರ್.ಅಶೋಕ್, ಸಂಸದ ಡಿ.ಕೆ.ಸುರೇಶ್ ಸೇರಿದಂತೆ ಹಲವು ಮಂದಿ ಪ್ರತ್ಯೇಕವಾಗಿ ಭೇಟಿ ನೀಡಿ ಅಂಡರ್ ಪಾಸ್ ವೀಕ್ಷಣೆ ಮಾಡಿ ಸಮಸ್ಯೆ ಇತ್ಯರ್ಥಕ್ಕೆ ರೈಲ್ವೆ ಅಧಿಕಾರಿಗಳಿಗೆ ಸೂಚಿಸಿದ್ದರು. ಆದರೆ, ಅದು ಕಾರ್ಯಗತವಾಗಿರಲಿಲ್ಲ.

## ಮಿನಿ ನ್ಯೂಸ್

### ರೈತರಿಗೆ ಪಂಪ್, ಮೋಟಾರ್ ವಿತರಣೆ

• ಉದಯವಾಹಿನಿ, ಶಿಡ್ಲಘಟ್ಟ

ಕೆಲ ಆಡಳಿತಾತ್ಮಕ, ತಾಂತ್ರಿಕ ಕಾರಣಗಳಿಂದ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ ಗಂಗಾ ಕಲ್ಯಾಣ ಯೋಜನೆ ಪಂಪ್ ವಿತರಣೆ ವಿಳಂಬವಾಗಿದೆ. ಇದೀಗ ಎಲ್ಲವೂ ಬಗೆಹರಿದಿದ್ದು ರೈತರಿಗೆ ವಿತರಿಸಲಾಗುತ್ತಿದೆ ಎಂದು ಶಾಸಕ ಬಿ.ಎನ್.ರವಿಕುಮಾರ್ ತಿಳಿಸಿದರು. ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ 2021-22, 2022-23ನೇ ಸಾಲಿನ ಗಂಗಾ ಕಲ್ಯಾಣ ಯೋಜನೆಯಡಿ ರೈತ ಫಲಾನುಭವಿಗಳಿಗೆ ಪಂಪ್ ಮೋಟಾರ್, ಕೇಬಲ್ ಇನ್ನಿತರೆ ಪರಿಕರಗಳನ್ನು ಪ್ರವಾಸಿ ಮಂದಿರದಲ್ಲಿ ಬುಧವಾರ ವಿತರಿಸಿ ಮಾತನಾಡಿದರು. 2021-22ನೇ ಸಾಲಿನಲ್ಲಿ ಆರಂಭಗೊಂಡ ಈ ಯೋಜನೆ ಕೆಲ ಸಮಸ್ಯೆಗಳಿಂದಾಗಿ ವಿಳಂಬವಾಗಿತ್ತು. ಸಂಬಂಧಪಟ್ಟ ಇಲಾಖೆ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿ ಇದನ್ನು ಪುನಶ್ಚೇತನಗೊಳಿಸಿ ಗುರುವಾರ ಫಲಾನುಭವಿಗಳಿಗೆ ಲಾಭತಲುಪುವಂತೆ ಮಾಡಲಾಗಿದೆ ಎಂದು ಹೇಳಿದರು. ಬಸವಾಪಟ್ಟಣ ಗ್ರಾಮದ ದೊಡ್ಡ ಮುನಿಯಪ್ಪ, ಕೋಟಗಲ್ ಗ್ರಾಮದ ನಾರಾಯಣಸ್ವಾಮಿ, ಬಚ್ಚಹಳ್ಳಿ ಗ್ರಾಮದ ನರಸಿಂಹಯ್ಯ, ಹಿತ್ತಲಹಳ್ಳಿ ಗ್ರಾಮದ ರವಿಕುಮಾರ್ ಮತ್ತು ನಂದನಹೊಸಳ್ಳಿ ಗ್ರಾಮದ ಶ್ರೀನಿವಾಸ್‌ಗೆ ಪರಿಕರ ವಿತರಿಸಲಾಯಿತು.

### ಆಸ್ಪತ್ರೆ ಕಟ್ಟಡ ಕಾಮಗಾರಿ ಪರಿಶೀಲನೆ

• ಉದಯವಾಹಿನಿ, ಗೌರಿಬಿದನೂರು

ನಗರದಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ ಸಾರ್ವಜನಿಕ ಆಸ್ಪತ್ರೆಯ ಕಾಮಗಾರಿಯನ್ನು ಶಾಸಕ ಕೆ.ಎಚ್.ಪುಟ್ಟಸ್ವಾಮಿಗೌಡ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಮುಕ್ತಾಯ ಹಂತದಲ್ಲಿರುವ ಕಾಮಗಾರಿಯನ್ನು ಪೂರ್ಣಗೊಳಿಸಲು ಗುತ್ತಿಗೆದಾರರಿಗೆ ಐವತ್ತು ದಿನಗಳ ಗಡುವು ನೀಡಿ ಗುಣಮಟ್ಟ ಕಾಪಾಡದಿದ್ದಲ್ಲಿ ದಂಡ ವಿಧಿಸಲು ಮೇಲಧಿಕಾರಿಗಳಿಗೆ ಸೂಚಿಸುವುದಾಗಿ ಎಚ್ಚರಿಕೆ ನೀಡಿದರು.

ರೋಗಿಗಳಿಗೆ ಉತ್ತಮ ಗುಣಮಟ್ಟದ ಚಿಕಿತ್ಸೆ, ಅತ್ಯಾವಶ್ಯಕ ವ್ಯವಸ್ಥೆಗಳನ್ನು ಕಲ್ಪಿಸುವ ಉದ್ದೇಶದಿಂದ ಹೈಟೆಕ್ ಮಾದರಿಯಲ್ಲಿ ಆಸ್ಪತ್ರೆಯನ್ನು ನಿರ್ಮಾಣ ಮಾಡಲಾಗಿದೆ. ಸಚಿವರ ಜತೆ ಚರ್ಚಿಸಿ ಅವಶ್ಯ ಇದ್ದಲ್ಲಿ ಇನ್ನಷ್ಟು ಅನುದಾನದ ಬೇಡಿಕೆ ಇಡಲಾಗುವುದು. ಹಳೆ ಕಾಂಪೌಂಡ್ ಕೆಡವಿ ಹೊಸ ಕಾಂಪೌಂಡ್ ನಿರ್ಮಿಸಲು ಹಾಗೂ ರೋಗಿಗಳ ಸಹಾಯಕರಿಗೆ ಪ್ರತ್ಯೇಕವಾಗಿ ಹೊರಾಂಗಣದ ಶೌಚಾಲಯ ನಿರ್ಮಿಸಲು ತಿಳಿಸಿದರು.

### 11 ಲಕ್ಷ ಮೌಲ್ಯದ 30 ಬೈಕ್ ಜಪ್ತಿ

• ಉದಯವಾಹಿನಿ, ತುಮಕೂರು

ನಗರ, ರಾಜ್ಯದ ವಿವಿಧೆಡೆ ಬೈಕ್ ಕಳವು ಮಾಡುತ್ತಿದ್ದ ಆರೋಪಿಯನ್ನು ಬಂಧಿಸಿರುವ ಪೊಲೀಸರು, ಒಟ್ಟು 11.23 ಲಕ್ಷ ಮೌಲ್ಯದ 30 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಿದ್ದಾರೆ. ಬೆಂಗಳೂರು ವೈಟ್‌ಫೀಲ್ಡ್ ನಿವಾಸಿ ಹಾಗೂ ಆಂಧ್ರಪ್ರದೇಶದ ಅನಂತಪುರ ಜಿಲ್ಲೆ ದಾಸರಪಲ್ಲಿಯ ಕುಖ್ಯಾತ ಕಳ್ಳ ಚಿತ್ತಪ್ಪಗಾರಿ ಆನಂದ್ ಎಂಬಾತನನ್ನು ಬಂಧಿಸಲಾಗಿದೆ.

ನಗರದ ರೈಲು ನಿಲ್ದಾಣ ರಸ್ತೆಯಲ್ಲಿ ಸುಮುಖ ಭಾರದ್ವಾಜ್ ಎಂಬುವರು ನಿಲ್ಲಿಸಿದ್ದ ಹೊಂಡ ಡಿಯೋ ದ್ವಿಚಕ್ರ ವಾಹನವನ್ನು ಏಪ್ರಿಲ್ 17ರಂದು ಕಳವು ಮಾಡಲಾಗಿತ್ತು. ಈ ಸಂಬಂಧ ಹೊಸ ಬಡಾವಣೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ತಿಲಕ್ ಪಾರ್ಕ್ ಠಾಣೆ ಇನ್‌ಸ್ಪೆಕ್ಟರ್ ಪುರುಷೋತ್ತಮ್, ಹೊಸ ಬಡಾವಣೆ ಠಾಣೆ ಸಬ್‌ಇನ್‌ಸ್ಪೆಕ್ಟರ್‌ಗಳಾದ ಜಿ.ಚೇತನ್ ಕುಮಾರ್, ಮಂಗಳಮ್ಮ, ಎಎಸ್‌ಐ ಸೈಯದ್ ಮುಕ್ತಿಯಾರ್, ಸಿಬ್ಬಂದಿಗಳಾದ ಕೆ.ಟಿ.ನಾರಾಯಣ, ನೀಲಕಂಠಯ್ಯ, ಕುಮಾರಸ್ವಾಮಿ, ಟಿ.ಎಚ್.ಮಂಜುನಾಥ, ಸುಚಿತ್ರಾ, ಪಾಲೇಕರ್, ಕೆ.ಸಿ.ಚೇತನ, ಮಂಜಪ್ಪ ಮಸಾಲವಾಡ, ಸುನಿಲ್ ಕುಮಾರ್, ಈಶ್ವರ ನೇತೃತ್ವದಲ್ಲಿ ತನಿಖಾ ತಂಡ ರಚಿಸಲಾಗಿತ್ತು. ತನಿಖಾ ತಂಡ ಪ್ರಕರಣವನ್ನು ಭೇದಿಸುವಲ್ಲಿ ಯಶಸ್ವಿಯಾಗಿದ್ದು, ಕಳ್ಳನನ್ನು ಬಂಧಿಸಿದೆ. ರಾಜ್ಯದ ವಿವಿಧೆಡೆಗಳಲ್ಲಿ ಕಳವು ಮಾಡಿದ್ದ 30 ದ್ವಿಚಕ್ರ ವಾಹನ ಜಪ್ತಿ ಮಾಡಿದೆ.

### ಗಾಂಜಾ ಮಾರಾಟ: ಆರೋಪಿಗಳ ಬಂಧನ

• ಉದಯವಾಹಿನಿ, ಬಂಗಾರಪೇಟೆ

ಗಾಂಜಾ ಮಾರಾಟ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಆರೋಪಿಗಳನ್ನು ಬಂಧಿಸಿರುವ ಬಂಗಾರಪೇಟೆ ಪೊಲೀಸರು ಆರೋಪಿಗಳಿಂದ 80 ಸಾಗಿರ ಮೌಲ್ಯದ 1ಕೇಜಿ 10 ಗ್ರಾಂ ಗಾಂಜಾವನ್ನು ವಶಪಡಿಸಿಕೊಂಡಿದ್ದಾರೆ. ಬಂಗಾರಪೇಟೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಹುಣಸನಹಳ್ಳಿ ಬ್ರಿಡ್ಜ್ ಬಳಿ ಗಾಂಜಾ ಮಾರಾಟ ಮಾಡುತ್ತಿರುವ ಬಗ್ಗೆ ಖಚಿತ ಮಾಹಿತಿ ಆಧರಿಸಿ, ಇನ್‌ಸ್ಪೆಕ್ಟರ್ ಆರ್.ದಯಾನಂದ್, ಸಬ್‌ಇನ್‌ಸ್ಪೆಕ್ಟರ್ ಪ್ರಕಾಶ್ ನರಸಿಂಗ್, ಸಿಬ್ಬಂದಿ ದಾಳಿ ನಡೆಸಿ, ಭುವನಹಳ್ಳಿ ಗ್ರಾಮದ ವಾಸಿ ನಾಗರಾಜ್, ವೆಂಕಟಾಪುರ ಗ್ರಾಮದ ನಿವಾಸಿ ರಾಮಪ್ಪ ಎಂಬುವರನ್ನು ಬಂಧಿಸಿ, ಗಾಂಜಾ, ಯಂತ್ರವನ್ನು ವಶಪಡಿಸಿಕೊಂಡಿದ್ದಾರೆ. ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಿಕೊಂಡು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ.

### ದಲಿತ ವಿರೋಧಿ ನೀತಿ ವಿರುದ್ಧ ಧರಣಿ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಮಾಲೂರು

ತಾಲೂಕು ಆಡಳಿತ ದಲಿತರಿಗೆ ಹಕ್ಕು ಪತ್ರ ನೀಡದೇ, ಚಿನ್ನ ದಾಸರಿ ಸಮುದಾಯಕ್ಕೆ ಜಾತಿ ಪ್ರಮಾಣ ಪತ್ರ ನೀಡದೇ ದಲಿತ ವಿರೋಧಿ ನೀತಿ ಅನುಸರಿಸುತ್ತಿದೆ ಎಂದು ಆರೋಪಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ತಾಲ್ಲೂಕು ಕಾರ್ಯಕರ್ತರು ಪಟ್ಟಣದ ತಾಲ್ಲೂಕು ಕಚೇರಿ ಮುಂಭಾಗದಲ್ಲಿ ಧರಣಿ ನಡೆಸಿದರು. ಸಂಘಟನೆಯ ಸಂಚಾಲಕ ಎಸ್.ಎಂ.ವೆಂಕಟೇಶ್ ಮಾತನಾಡಿ, ಪಟ್ಟಣದ ಅರಳೇರಿ ರಸ್ತೆಯ ರಾಜ ಕಾಲುವೆ, ಸರ್ಕಾರಿ ಓಣಿ ಮತ್ತು ಗೋಮಾಳ ಜಮೀನನ್ನು ಸರ್ವೆ ಮಾಡಿಸಿ, ಅಕ್ರಮ ದಾಖಲೆಗಳನ್ನು ರದ್ದು ಮಾಡಿ, ಒತ್ತುವರಿ ತೆರುವುಗೊಳಿಸಿ ಸರ್ಕಾರದ ವಶಕ್ಕೆ ಪಡೆಯಬೇಕು ಎಂದು ಒತ್ತಾಯಿಸಿದರು.

ತಾಲ್ಲೂಕಿನ ಕಸಬ ಹೋಬಳಿ ನೀಲಕಂಠ ಆಗ್ರಹಾರ ಗ್ರಾಮದ ಗುಡಿಸಲು ವಾಸಿಗಳಿಗೆ ಹಕ್ಕು ಪತ್ರಗಳನ್ನು ನೀಡುವ ಮೂಲಕ ಮೂಲ ಸೌಕರ್ಯಗಳನ್ನು ಒದಗಿಸಬೇಕು. ತಾಲ್ಲೂಕಿನ ಕಸಬಾ ಹೋಬಳಿ ಲಿಂಗಾಪುರ ಗ್ರಾಮದ ಗೊಮಾಳ ಜಮೀನು ಮತ್ತು ಕೆರೆಯನ್ನು ಸರ್ವೆ ಮಾಡಿಸಿ ಒತ್ತುವರಿ ತೆರವುಗೊಳಿಸಬೇಕು ಎಂದು ಒತ್ತಾಯಿಸಿದರು.

## ವೇಮಗಲ್-ಕುರುಗಲ್: ವಾರ್ಡ್‌ವಾರು ಮೀಸಲಾತಿ

• ಉದಯವಾಹಿನಿ, ಕೋಲಾರ

ವೇಮಗಲ್-ಕುರುಗಲ್ ಪಟ್ಟಣ ಪಂಚಾಯಿತಿಯ ವಾರ್ಡುವಾರು ಮೀಸಲಾತಿ ನಿಗದಿಪಡಿಸಿ ಸರ್ಕಾರ ಪ್ರಾಥಮಿಕ ಅಧಿಸೂಚನೆ ಹೊರಡಿಸಿದೆ. ಪುರಸಭೆ ಕಾಯಿದೆ 1964 ಕಲಂ 1ರ ಅನ್ವಯ ಕರ್ನಾಟಕ ರಾಜ್ಯಪತ್ರದಲ್ಲಿ ವಾರ್ಡುವಾರು ಮೀಸಲಾತಿ ನಿಗದಿಪಡಿಸಲಾಗಿದೆ.

ಅಧಿಸೂಚನೆ ಪ್ರಕಟಗೊಂಡ 7 ದಿನಗಳೊಳಗೆ ಆಕ್ಷೇಪಣೆ ಸಲ್ಲಿಸಲು ಸೂಚಿಸಲಾಗಿತ್ತು. ಈ ಅವಧಿಯಲ್ಲಿ ಸ್ವೀಕೃತವಾದ ಸಲಹೆ, ಆಕ್ಷೇಪಣೆಗಳನ್ನು ಪರಿ ಗಣಿಸಿ ಅಧಿಕೃತವಾಗಿ ವಾರ್ಡುವಾರು ಮೀಸಲಾತಿಯೊಂದಿಗೆ ಪಟ್ಟಣ ಪಂಚಾಯಿತಿ ವ್ಯಾಪ್ತಿಗೆ 17 ವಾರ್ಡು ವಿಂಗಡಿಸಿ ಪ್ರತಿ ವಾರ್ಡಿಗೆ ತಲಾ ಒಂದು ಸ್ಥಾನ ಮೀಸಲಿಡಲಾಗಿದೆ. ಸರ್ಕಾರದ ಮೇಲೆ ಒತ್ತಡ ತಂದು ಮಾಜಿ ಸಭಾಪತಿ ವಿ.ಆರ್. ಸುದರ್ಶನ್ ಅವರು ವೇಮಗಲ್-ಕುರುಗಲ್ ಪಟ್ಟಣ ಪಂಚಾಯಿತಿಯನ್ನು ಸರ್ಕಾರದಿಂದ ಘೋಷಿಸಿ ಆದೇಶ ಮಾಡಿಸಿದ್ದರು, ವೇಮಗಲ್ ಕೈಗಾರಿಕಾ ವಲಯ ಆರಂಭಗೊಂಡ ನಂತರ ಈ ಭಾಗ ಅತಿ ಹೆಚ್ಚು ಅಭಿವೃದ್ಧಿ ಹೊಂದಿದ್ದು, ಪಟ್ಟಣ ಪಂಚಾಯಿತಿಯಾದರೆ ಮತ್ತಷ್ಟು ಅಭಿವೃದ್ಧಿಗೆ ದಾರಿಯಾಗುತ್ತದೆ ಎಂಬುದು ಅವರ ವಾದವಾಗಿತ್ತು.



ಉದಯವಾಹಿನಿ ಚಿತ್ರ


**ವಾರ್ಡುವಾರು ಮೀಸಲಾತಿ ವಿವರ:** 1) ಚನ್ನಪ್ಪನಹಳ್ಳಿ, ಕುರುಬರಹಳ್ಳಿ ವಾರ್ಡು-ಹಿಂದುಳಿದ ವರ್ಗ-ಎ ಮಹಿಳೆಗೆ, 2) ಬೆಟ್ಟಹೊಸಪುರ ಹಾಗೂ ಮಂಜಲಿ ವಾರ್ಡು ಪರಿಶಿಷ್ಟ ಜಾತಿಗೆ, 3) ಚಿಕ್ಕವಲ್ಲಬ್ಬಿ ಸಾಮಾನ್ಯ ವರ್ಗಕ್ಕೆ, 4) ಮಲಿಯಪ್ಪನಹಳ್ಳಿ ಪರಿಶಿಷ್ಟಜಾತಿ ಮಹಿಳೆಗೆ, 5) ಕೆ.ಮಲ್ಲಂಡಹಳ್ಳಿ, ಚಂದ್ರಶೇಖರಪುರ, ಮಂಚಂಡಹಳ್ಳಿ ವಾರ್ಡು ಸಾಮಾನ್ಯ ವರ್ಗಕ್ಕೆ, 6) ಸೂಳದೇನಹಳ್ಳಿ ವಿಶ್ವನಗರ ವಾರ್ಡು-ಹಿಂದುಳಿದ ವರ್ಗ ಎ 7) ಮಡಿವಾಳ ಸಾಮಾನ್ಯವರ್ಗದ ಮಹಿಳೆಗೆ, 8) ಕುರುಗಲ್-1 ಹಿಂದುಳಿದ ವರ್ಗ ಬಿ, 9) ಕುರುಗಲ್-2 ಸಾಮಾನ್ಯ ವರ್ಗಕ್ಕೆ, 10) ಹಾರ್ಜೇನಹಳ್ಳಿ-ಸಾಮಾನ್ಯ, 11) ಪೆಜೇನಹಳ್ಳಿ, ಪುರಹಳ್ಳಿ ಪರಿಶಿಷ್ಟ ಜಾತಿಗೆ, 12) ಶಿಂಗಿಹಳ್ಳಿ, ಐಬಿ ಪ್ರದೇಶ ಪರಿಶಿಷ್ಟ ಪಂಗಡಕ್ಕೆ, 13) ವೇಮಗಲ್ ಪಟ್ಟಣದ ಎ ಬ್ಲಾಕ್-1 ಸಾಮಾನ್ಯ ಮಹಿಳೆಗೆ, 14) ಎ ಬ್ಲಾಕ್ 2 ಸಾಮಾನ್ಯ ವರ್ಗಕ್ಕೆ, 15) ಬಿ ಬ್ಲಾಕ್-1 ಸಾಮಾನ್ಯ ಮಹಿಳೆಗೆ, 16) ಬಿ ಬ್ಲಾಕ್-2 ವಾರ್ಡಿಗೆ ಸಾಮಾನ್ಯ ಮಹಿಳೆ, 17) ವೇಮಗಲ್ ಸಿ ಬ್ಲಾಕ್ ವಾರ್ಡಿಗೆ ಪರಿಶಿಷ್ಟ ಮಹಿಳೆಗೆ.

## ಲೋಕಸರ ನಾಲಾ ಕಾಮಗಾರಿಗಳಿಗೆ 650 ಕೋಟಿ: ಶಾಸಕ

• ಉದಯವಾಹಿನಿ, ಭಾರತೀನಗರ

ರೈತರ ಬೆಳೆಗಳಿಗೆ ನೀರೊದಗಿಸುವ ಯೋಜನೆಯಡಿ ಲೋಕಸರ ನಾಲಾ ಅಭಿವೃದ್ಧಿ ಕಾಮಗಾರಿಗಳಿಗೆ 650 ಕೋಟಿಯನ್ನು ಸರ್ಕಾರ ಬಿಡುಗಡೆಗೊಳಿಸಿದೆ ಎಂದು ಶಾಸಕ ಕೆ.ಎಂ. ಉದಯ್ ತಿಳಿಸಿದರು. ಸಮೀಪದ ಯಡಗನಹಳ್ಳಿ ಗ್ರಾಮದಲ್ಲಿ 22 ಕೋಟಿ ವೆಚ್ಚದಲ್ಲಿ ಕಾವೇರಿ ನೀರಾವರಿ ನಿಗಮ ವ್ಯಾಪ್ತಿಯ ಲೋಕಸರ ಶಾಖಾ ನಾಲೆಯ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ಮಾತನಾಡಿದರು.

ಕೆಮ್ಮಣ್ಣು ನಾಲಾ ಅಭಿವೃದ್ಧಿ, ಯಡಗನಹಳ್ಳಿ ಲೋಕಸರ ನಾಲಾಭಿವೃದ್ಧಿ ಕಾಮಗಾರಿಗಳಿಗೆ 112 ಕೋಟಿಯನ್ನು ಸರ್ಕಾರ ಬಿಡುಗಡೆಗೊಳಿಸಿದೆ. ಗ್ರಾಮೀಣ ಭಾಗದ ರಸ್ತೆ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಿದ್ದು. ಕೆ.ಶೆಟ್ಟಹಳ್ಳಿಯಲ್ಲಿ 5 ಕೋಟಿ ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡುಲಾಗುವುದು. ಯಬ್ಬಕವಾಗಡಿ ನಾಲೆಯನ್ನು 40 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾಗುವುದು. ಸೂಳೆಕೆರೆ, ಮದ್ದೂರು ಕೆರೆ ಅಭಿವೃದ್ಧಿಗೆ 82 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಗಿದೆ' ಎಂದು ಹೇಳಿದರು.



ಉದಯವಾಹಿನಿ ಚಿತ್ರ

**ಲೋಕಸರ-ಯಡಗನಹಳ್ಳಿ ನಾಲಾ ಕಾಮಗಾರಿಯಿಂದ ಕಾಡೊಕೊತ್ತನಹಳ್ಳಿ, ಯಡಗನಹಳ್ಳಿ, ಮಾದರಹಳ್ಳಿ, ಕೆ.ಶೆಟ್ಟಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳ ರೈತರ ಬೆಳೆಗಳಿಗೆ ನೀರುಣಿಸಲು ನಾಲೆಗಳಲ್ಲಿ ಸರಾಗವಾಗಿ ನೀರು ಹರಿದು ಬರಲಿದೆ. ಈ ಬಾಗದ ರೈತರಿಗೆ ಮುಂದಿನ ದಿನಗಳಲ್ಲಿ ನೀರಿಗೆ ತೊಂದರೆಯಾಗದು ಎಂದು ಹೇಳಿದರು.**

## 124 ಮಿ.ಮಿ.ಮಳೆ ದಾಖಲು: ಭಾರಿ ಮಳೆ ಗಾಳಿಗೆ ನೆಲಕಚ್ಚಿದ ಬಾಳೆ, ಹಾರಿದ ಛಾವಣಿ

• ಉದಯವಾಹಿನಿ, ಹುಣಸೂರು

ತಾಲ್ಲೂಕಿನಾದ್ಯಂತ ಸಂಜೆ ಮತ್ತು ರಾತ್ರಿ ಸುರಿದ ಭಾರಿ ಮಳೆ ಗಾಳಿಗೆ ಹನಗೋಡು, ಕಸಬ ಹೋಬಳಿಯಲ್ಲಿ ಅನಾಹುತ ಸಂಭವಿಸಿದೆ. ಮಧ್ಯಾಹ್ನ ಸುರಿದ ಭಾರಿ ಮಳೆಯಿಂದಾಗಿ ತಾಲ್ಲೂಕಿನಾದ್ಯಂತ ಅಲ್ಲಲ್ಲಿ ಕೆಲವೊಂದು ಅನಾಹುತ ವರುಣ ಸೃಷ್ಟಿಸಿದ್ದು ಗುರುವಾರ ಬೆಳಕಿಗೆ ಬಂದಿದೆ. ಹನಗೋಡು ಹೋಬಳಿ ಹೊಸೂರು ಗೇಟ್ ಗ್ರಾಮದಲ್ಲಿ ಗೋವಿಂದಯ್ಯ ಅವರಿಗೆ ಸೇರಿದ ಮಂಗಳೂರು ಹಂಚಿನ ಮನೆ ಭಾಗಶಃ ಹಾನಿಯಾಗಿದ್ದು, ಯಶೋಧಪುರ ಗ್ರಾಮದಲ್ಲಿ ನಾಗಮ್ಮ ಅವರಿಗೆ ಸೇರಿದ ಮನೆಯ ಛಾವಣಿ ಭಾರಿ ಗಾಳಿಗೆ ಹಾರಿ ಹೋಗಿದೆ. ನಾಗಮ್ಮ ಮನೆ ಛಾವಣಿ ಹಾರಿ ಹೋಗಲಾಗಿ ಮನೆಯಲ್ಲಿದ್ದ ಪಡಿತರ ಸೇರಿದಂತೆ ಬಹುತೇಕ ಎಲ್ಲಾ ಪದಾರ್ಥಗಳು ಮಳೆಯಿಂದ ನಾಶವಾಗಿದೆ. ನಾಗಮ್ಮ ಪ್ರಜಾವಾಣಿಗೆ ಮಾತನಾಡಿ, ಕೂಲಿ ಕಾರ್ಮಿಕರಾಗಿದ್ದು, ಬುಧವಾರ ಬಿದ್ದ ಭಾರಿ ಮಳೆ ಗಾಳಿಗೆ ಹೆಂಚಿನ ಮನೆ ಛಾವಣಿ ಸಂಪೂರ್ಣ ಗಾಳಿಗೆ ಹಾರಿ ಹೋಗಿದೆ. ಮನೆಯಲ್ಲಿ ಆ ಸಮಯ ಯಾರೂ ಇಲ್ಲದ ಕಾರಣ ಪ್ರಾಣ ಹಾನಿ ಆಗಿಲ್ಲ. ಆದರೆ ಜೀವನೋಪಾಯಕ್ಕೆ ಸಂಗ್ರಹಿಸಿದ್ದ ಪಡಿತರ ಸೇರಿದಂತೆ ಬಹುತೇಕ ಎಲ್ಲಾ ವಸ್ತುಗಳು ಮಳೆಗೆ ಹಾನಿಯಾಗಿದೆ. ಸರ್ಕಾರ ಪ್ರಕೃತಿ ವಿಕೋಪದಲ್ಲಿ ಪರಿಹಾರ ಕಲ್ಪಿಸಬೇಕು ಎಂದು ಮನವಿ ಮಾಡಿದರು.


ಉದಯವಾಹಿನಿ ಚಿತ್ರ

ಸ್ಥಳಕ್ಕೆ ಹನಗೋಡು ಹೋಬಳಿ ರಾಜಸ್ವ ನಿರೀಕ್ಷಣಾಧಿಕಾರಿ ನಂದೀಶ್ ಭೇಟಿ ನೀಡಿ ಪರಿಶೀಲಿಸಿದರು. ಕಸಬಾ ಹೋಬಳಿಯ ಆಸ್ಪತ್ರೆ ಕಾವಲ್ ಗ್ರಾಮದ ಪ್ರಗತಿಪರ ರೈತ ವಿಠಲ್ ರಾವ್ ಕರಾಡೆ ಅವರಿಗೆ ಸೇರಿದ ಒಂದು ಎಕರೆ ಬಾಳೆ ಸಂಪೂರ್ಣ ನೆಲಕಚ್ಚಿದ್ದು, ಈ ಘಟನೆಯಿಂದಾಗಿ ರೈತನಿಗೆ ಅಂದಾಜು 30 ರಿಂದ 40 ಸಾವಿರ ನಷ್ಟವಾಗಿದೆ ಎಂದು ತಿಳಿಸಿದರು.

**ಮಳೆ ವಿವರಣೆ:** ತಾಲ್ಲೂಕಿನ 7 ಮಳೆ ಮತ್ತು ಬಿಸಿಲು ಮಾಪನ ಕೇಂದ್ರಗಳಲ್ಲಿ 3 ಕೇಂದ್ರ ಶಿಥಿಲಗೊಂಡಿದ್ದು ಉಳಿದ 4 ಕೇಂದ್ರದಿಂದ ಒಟ್ಟು 124.4 ಮಿ.ಮೀ. ಮಳೆಯಾಗಿರುವುದು ದಾಖಲಾಗಿದೆ ಎಂದು ಸಾಂಕಿಕ ನಿರೀಕ್ಷಣಾಧಿಕಾರಿ ಚಂದ್ರಶೇಖರ್ ತಿಳಿಸಿದರು.

ಹುಣಸೂರು ನಗರದ ತಂಬಾಕು ಸಂಶೋಧನ ಕೇಂದ್ರದಲ್ಲಿ 36.60 ಮಿ.ಮಿ. ಹಾರಂಗಿ ನೀರಾವರಿ ಕಚೇರಿ 37.04 ಮಿ.ಮಿ. ಚಿಲ್ಕುಂದ 28.20 ಮಿ.ಮಿ. ಮತ್ತು ಬಿಳಿಕೆರೆ 21.20 ಮಿ.ಮಿ. ಮಳೆಯಾಗಿದೆ. ರತ್ನಾಪುರಿ, ಉಂಡುವಾಡಿ ಮತ್ತು ಹೈರಿಗೆ ಕೇಂದ್ರಗಳು ಸ್ಥಗಿತವಾಗಿದೆ ಎಂದರು.

## ತಂತ್ರಜ್ಞಾನದ ಜತೆ ಇಂಗ್ಲಿಷ್ ಭಾಷೆ ಕೌಶಲ್ಯ ಇದ್ದರೆ ವಿಪುಲ ಉದ್ಯೋಗ ಅವಕಾಶ

• ಉದಯವಾಹಿನಿ, ಕೆ.ಆರ್.ನಗರ

ತಂತ್ರಜ್ಞಾನದ ಅರಿವಿನ ಜತೆಗೆ ಇಂಗ್ಲಿಷ್ ಭಾಷೆ ಕೌಶಲ ವೃದ್ಧಿಸಿಕೊಂಡರೆ ಉದ್ಯೋಗ ಅವಕಾಶ ಹೆಚ್ಚು ಲಭಿಸುತ್ತದೆ ಎಂದು ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು ಇಂಗ್ಲಿಷ್ ಸಹ ಪ್ರಾಧ್ಯಾಪಕ ಗೋವಿಂದರಾಜು ಅಭಿಪ್ರಾಯ ವ್ಯಕ್ತಪಡಿಸಿದರು. ಇಲ್ಲಿನ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಆಂತರಿಕ ಗುಣಮಟ್ಟ ಅಭಿವೃದ್ಧಿ ಕೋಶ ಮತ್ತು ಇಂಗ್ಲಿಷ್ ವಿಭಾಗ ಆಯೋಜಿಸಿದ್ದ ಇಂದಿನ ದಿನಮಾನದಲ್ಲಿ ಇಂಗ್ಲಿಷ್ ಸಂವಹನ ಕೌಶಲದ ಪಾತ್ರ, ವಿಷಯದಲ್ಲಿ ವಿಶೇಷ ಉಪನ್ಯಾಸ ನೀಡಿದರು.

ಜಾಗತಿಕ ಮಟ್ಟದಲ್ಲಿ ಸ್ಪರ್ಧೆ ಎದುರಿಸಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ಹಾಗಾಗಿ, ಇಂಗ್ಲಿಷ್ ಭಾಷೆಯಲ್ಲಿ ಸಂವಹನ ಕೌಶಲದ ಪರಿಣತಿ ಅಗತ್ಯವಾಗಿದೆ ಎಂದರು.

ಕೃತಕ ಬುದ್ಧಿಮತ್ತೆ ಆಧಾರಿತ ಚಾಟ್ ಜಿಪಿಟಿಯಂತಹ ಮುಂದುವರಿದ ತಂತ್ರಜ್ಞಾನವು ಉದ್ಯೋಗ ಕ್ಷೇತ್ರದಲ್ಲಿ ಸವಾಲುಗಳನ್ನು ಒಡ್ಡುತ್ತಿವೆ. ಹಾಗಾಗಿ, ಕಲೆ, ವಾಣಿಜ್ಯ ಮತ್ತು ವಿಜ್ಞಾನ ಅಥವಾ ಯಾವುದೇ ವಿಭಾಗದ ವಿದ್ಯಾರ್ಥಿಗಳಿಗೆ ತಂತ್ರಜ್ಞಾನದ ಜತೆಗೆ ಇಂಗ್ಲಿಷ್ ಭಾಷೆಯಲ್ಲಿ ಸಂವಹನ ಕೌಶಲ ಇದ್ದರೆ ಉದ್ಯೋಗ ದೊರೆಯುವುದು. ಉದ್ಯೋಗ ಕ್ಷೇತ್ರದಲ್ಲಿ ಇಂಗ್ಲಿಷ್ ಭಾಷೆ ಸಂವಹನ ಬಹು ಮುಖ್ಯ ಎಂದರು.

## ಪಡಿತರ ವಿತರಣೆಗೆ ಹಣ ಪಡೆದರೆ ಕ್ರಮ

• ಉದಯವಾಹಿನಿ, ಕೆ.ಆರ್.ಪೇಟೆ

ತಾಲ್ಲೂಕಿನಲ್ಲಿ ಕೆಲವು ನ್ಯಾಯಬೆಲೆ ಅಂಗಡಿಗಳು ಪಡಿತರ ವಿತರಣಾ ಕೇಂದ್ರಗಳಲ್ಲಿ ಪಡಿತರ ಕಾರ್ಡ್ ಇಂತಿಷ್ಟು ಹಣ ವಸೂಲಿ ಮಾಡುತ್ತಿರುವ ದೂರುಗಳು ಬಂದಿದ್ದು, ಇದು ಸತ್ಯವಾದರೆ ನೋಟಿಸ್ ಜಾರಿ ಮಾಡಬೇಕಾಗುತ್ತದೆ ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ತಾಲ್ಲೂಕು ಅಧ್ಯಕ್ಷ ಅಗ್ರಹಾರಬಾಚಹಳ್ಳಿ ಎ.ಬಿ. ಕುಮಾರ್ ಎಚ್ಚರಿಸಿದರು. ಪಟ್ಟಣದ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ನಡೆದ ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಮಾಸಿಕ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಬಿಪಿಎಲ್ ಪಡಿತರದಾರರಿಗೆ ಅಕ್ಕಿ ಸೇರಿ ಹಲವು ಪಡಿತರ ವಸ್ತುಗಳನ್ನು ಉಚಿತವಾಗಿ ನೀಡುತ್ತಿದೆ. ಯಾರೂ ಯಾವ ಕಾರಣಕ್ಕೂ ಹಣ ನೀಡುವಂತಿಲ್ಲ ಮತ್ತು ವಸೂಲಿ ಮಾಡುವಂತಿಲ್ಲ. ಹಣ ವಸೂಲಿಯ ಬಗ್ಗೆ ದೂರುಗಳು ಬಂದಿರುವುದರಿಂದ ಆಹಾರ ಇಲಾಖೆಯವರು ತನಿಖೆ ನಡೆಸಿ ಕ್ರಮ ವಹಿಸಬೇಕು. ದೂರು ಸತ್ಯವಾದರೆ ಅಂತಹ ಸೊಸೈಟಿ ಮತ್ತು ನ್ಯಾಯಬೆಲೆ ಅಂಗಡಿ ನಡೆಸುವವರ ಮೇಲೆ ಕಾನೂನಿನ ಕ್ರಮ ಕೈಗೊಳ್ಳಬೇಕು ಎಂದು ಶಿರಸ್ತೇದಾರ್ ಪೂರ್ಣಿಮಾ ಅವರಿಗೆ ಸೂಚಿಸಿದರು.


ಉದಯವಾಹಿನಿ ಚಿತ್ರ

ಶಿರಸ್ತೇದಾರ್ ಪೂರ್ಣಿಮಾ ಮಾತನಾಡಿ, ತಾಲ್ಲೂಕಿನಲ್ಲಿ 99 ನ್ಯಾಯ ಬೆಲೆ ಅಂಗಡಿಗಳಿದ್ದು, ಒಟ್ಟು ಸುಮಾರು 69,910 ಬಿಪಿಎಲ್ ಕಾರ್ಡ್‌ಗಳಿವೆ. ದೂರು ಬಂದಿರುವ ನ್ಯಾಯಬೆಲೆ ಅಂಗಡಿಗಳಿಗೆ ಕಾರಣ ಕೇಳಿ ಈಗಾಗಲೇ ನೋಟಿಸ್ ಜಾರಿ ಮಾಡಲಾಗುತ್ತಿದೆ. ಪಡಿತರ ವಸ್ತುಗಳನ್ನು ತಿಂಗಳಿಡೀ ನೀಡಬೇಕು. ಯಾವುದೇ ಕಾರಣಕ್ಕು ಡಿಜಿಟಲ್ ಸಹಿ ಪಡೆದುಕೊಳ್ಳಲು ಒಂದು ದಿನ, ಪಡಿತರ ವಸ್ತುಗಳನ್ನು ಪಡೆದುಕೊಳ್ಳಲು ಮತ್ತೊಂದು ದಿನ ನಿಗದಿ ಪಡಿಸುವಂತಿಲ್ಲ. ಗ್ರಾಹಕ ಬಂದ ದಿನ ಡಿಜಿಟಲ್ ಸಹಿ ಪಡೆದು ಸ್ಥಳದಲ್ಲಿಯೇ ಪಡಿತರ ವಸ್ತುಗಳನ್ನು ವಿತರಣೆ ಮಾಡಬೇಕು. ತೂಕದಲ್ಲಿ ಯಾವುದೇ ವ್ಯತ್ಯಾಸ ಮಾಡಬಾರದು ಎಂದು ಎಚ್ಚರಿಕೆ ನೀಡಲಾಗಿದೆ ಎಂದರು. ಸೆಸ್ಕ್ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಪುಟ್ಟಸ್ವಾಮಿ, ಕೆ.ಎಸ್.ಆರ್.ಟಿ.ಸಿ ಡಿಪೋ ಮ್ಯಾನೇಜರ್ ವನಿತಾ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಎಸಿಡಿಪಿಒ ಪದ್ಮಾ ತಮ್ಮ ಇಲಾಖೆಗಳ ಪ್ರಗತಿಯ ವರದಿಯನ್ನು ಮಂಡಿಸಿದರು.

## ನಾಪೋಕ್ಲು: ಗ್ರಾಮಕ್ಕೆ ಬರಲಿದೆ ಮೊಬೈಲ್ ಮೆಡಿಕಲ್ ಘಟಕ


ಉದಯವಾಹಿನಿ ಚಿತ್ರ

• ಉದಯವಾಹಿನಿ, ನಾಪೋಕ್ಲು

ಆರೋಗ್ಯದ ಸಮಸ್ಯೆ ಇರುವ ಜಿಲ್ಲೆಯ ಕಾಫಿತೋಟದ ಕಾರ್ಮಿಕರು ಇನ್ನು ಆರೋಗ್ಯ ತಪಾಸಣೆಗಾಗಿ ವೈದ್ಯರ ಬಳಿಗೆ ತೆರಳಬೇಕಿಲ್ಲ. ತಪಾಸಣೆಗಾಗಿ ಗಂಟೆಗಟ್ಟಲೆ ಕಾಯಬೇಕಿಲ್ಲ. ವೈದ್ಯರೇ ನಿಮ್ಮಬಳಿಗೆ ಬರುತ್ತಾರೆ. ತಪಾಸಣೆಗಾಗಿ ಮೊಬೈಲ್ ಮೆಡಿಕಲ್ ಘಟಕವೇ ನೀವಿರುವಲ್ಲಿಗೆ ಬರುತ್ತದೆ. ಇಂತಹ ಒಂದು ವಿನೂತನ ಯೋಜನೆಗೆ ಈಚೆಗೆ ವಿರಾಜಪೇಟೆಯಲ್ಲಿ ಚಾಲನೆ ನೀಡಲಾಯಿತು. ವಿರಾಜಪೇಟೆಯ ಶಾಸಕ ಎ.ಎಸ್.ಪೊನ್ನಣ್ಣ ಅವರ ಕಚೇರಿ ಆವರಣದಲ್ಲಿ ಈಚೆಗೆ ಶಾಸಕರು ಮೊಬೈಲ್ ಮೆಡಿಕಲ್ ಯೂನಿಟ್ ಅನ್ನು ಉದ್ಘಾಟಿಸಿದರು. ಬಳಿಕ ಘಟಕದ ವಾಹನವನ್ನು ಚಾಲನೆ ಮಾಡಿ ಮೆಚ್ಚುಗೆ ವ್ಯಕ್ತಪಡಿಸಿ ಸಾರ್ವಜನಿಕರು ಘಟಕದ ಸದುಪಯೋಗವನ್ನು ಪಡಿಸಿಕೊಳ್ಳಲು ತಿಳಿಸಿದರು.

ಬೆಂಗಳೂರು ಮೂಲದ ಟ್ರಾನ್ಸ್ ಫಾರ್ಮಿಂಗ್ ಟುಮಾರೊ ಫೌಂಡೇಶನ್ (ಟಿಟಿಎಫ್) ಸಂಸ್ಥಾಪಕ ಆನಂದ ರಾವ್ ಆಸ್ಟೆರ್ ವಾಲೆಂಟಿಯರ್ಸ್ ಹಾಗೂ 09 ಸಲೂಷನ್ಸ್ ಅವರ ಸಹಯೋಗದಲ್ಲಿ ಮೊಬೈಲ್ ಮೆಡಿಕಲ್ ಯೂನಿಟನ್ನು ಜಿಲ್ಲೆಗೆ ಕಲ್ಪಿಸಿ ಕೊಟ್ಟಿದ್ದಾರೆ. ಈ ಮೊಬೈಲ್ ಮೆಡಿಕಲ್ ಘಟಕವು ಕೊಡಗಿನ ಪ್ರತಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಹಳ್ಳಿಗಳಲ್ಲಿ ಸಂಚರಿಸಲಿದ್ದು ಜನರಿಗೆ ಉಚಿತ ವೈದ್ಯಕೀಯ ತಪಾಸಣೆ ನಡೆಸುತ್ತದೆ ಎಂದು ಕೊಡಗಿನ ಪ್ರಾಜೆಕ್ಟ್ ಮೆನೇಜರ್ ಬಿ.ಹೆಚ್.ಸಂಪ್ರೀತ್ ಮಾಹಿತಿ ನೀಡಿದರು.

ಅಧಿಕ ರಕ್ತದೊತ್ತಡ, ಮಧುಮೇಹ, ಬಿಎಂಐ, ತೂಕ, ಇಸಿಜಿ ಮುಂತಾದ ಪರೀಕ್ಷೆಗಳನ್ನು ನಡೆಸಲಿದ್ದು ವೈದ್ಯ, ನರ್ಸ್, ಹಾಗೂ ಚಾಲಕರು ಇರಲಿದ್ದಾರೆ. ಒಂದು ದಿನಕ್ಕೆ ಒಂದು ಗ್ರಾಮದಂತೆ ನಿರಂತರ ಹತ್ತು ವರ್ಷಗಳ ಅವಧಿಗೆ ಈ ಘಟಕ ಕಾರ್ಯ ನಿರ್ವಹಿಸಲಿದೆ. ಇದು ಕೊಡಗಿನ ಕಾಫಿ ತೋಟದ ಕಾರ್ಮಿಕರು, ಹಾಗೂ ಹಾಗೂ ಬಡವರ ಆರೋಗ್ಯವನ್ನು ಗುರಿಯಾಗಿಟ್ಟುಕೊಂಡು ಕೆಲಸ ಮಾಡಲಿದೆ ಎಂದು ತಿಳಿಸಿದರು.

## ಪರಿಹಾರ ವಿತರಿಸಿದ ಡಿಸಿಎಂ; ನ್ಯಾಯದ ಭರವಸೆ

### ಬಾಲಕಿ ಶವ ಪತ್ತೆ ಪ್ರಕರಣ: ನ್ಯಾಯಕ್ಕಾಗಿ 2 ದಿನ ಶವದೊಂದಿಗೆ ಕಳೆದ ಕುಟುಂಬ


• ಉದಯವಾಹಿನಿ, ಬಿಡದಿ

ನನ್ನ ಮಗಳ ಮೇಲೆ ಅತ್ಯಾಚಾರ ಎಸಗಿ ಚಿತ್ರಹಿಂಸೆ ನೀಡಿ ಕೊಲೆ ಮಾಡಲಾಗಿದೆ. ಮಗಳ ಸಾವಿಗೆ ನ್ಯಾಯ ಬೇಕು. ಪೊಲೀಸರು ಕೊಲೆಗಡುಕರನ್ನು ಬಂಧಿಸುವವರೆಗೆ ಆಕೆಯ ಶವಸಂಸ್ಕಾರ ಮಾಡುವುದಿಲ್ಲ... ಹೋಬಳಿ ವ್ಯಾಪ್ತಿಯ ರೈಲ್ವೆ ಹಳಿ ಪಕ್ಕ ಮೂರು ದಿನದ ಹಿಂದೆ ಅರೆ ನಗ್ನಾವಸ್ಥೆಯಲ್ಲಿ ಶವವಾಗಿ ಪತ್ತೆಯಾದ, ಮಾತು ಬಾರದ, ಕಿವಿ ಕೇಳಿಸದ 15 ವರ್ಷದ ಬಾಲಕಿ ತಾಯಿ, ಕುಟುಂಬದವರ ನೋವಿನ ನುಡಿಗಳಿವು. ತಮ್ಮ ಶೀಟಿನ ಮನೆ ಮುಂದೆ ಮಗಳ ಶವವನ್ನು ಎರಡು ದಿನಗಳಿಂದ ಇಟ್ಟುಕೊಂಡಿದ್ದ ಕುಟುಂಬ, ಪೊಲೀ ಸರು ಯಾವಾಗ ಹಂತಕರನ್ನು ಬಂಧಿಸಿ ನಮಗೆ ನ್ಯಾಯ ಕೊಡಿಸುತ್ತಾರೊ ಎಂದು ಅನ್ನ, ನೀರು, ನಿದ್ರೆ ಬಿಟ್ಟು ಹಗಲು-ರಾತ್ರಿ ಕಾದರು. ಊದಿಕೊಂಡಿದ್ದ ಶವ ದುರ್ನಾತ ಬೀರುತ್ತಿದ್ದರೂ ಅದ್ಯಾವುದೂ ಲೆಕ್ಕಿಸದೆ, ಮನೆ ಬಳಿ ರಾತ್ರಿಯಿಡೀ ಕಾವಲು ಕುಳಿತ ಊರಿನವರು ಸಹ ತಮ್ಮೂರ ಹುಡುಗಿಯ ಸಾವಿಗೆ ವಿಧಿಯನ್ನು ಶಪಿಸುತ್ತಾ, ಕುಟುಂಬದ ಜೊತೆಗೆ ನಿಂತರು. ಶಾಸಕರು, ಪೊಲೀಸರು, ಅಧಿಕಾರಿಗಳು, ಮುಖಂಡರು, ಸಂಘ-ಸಂಸ್ಥೆ, ಸಂಘಟನೆಗಳ ಪದಾಧಿಕಾರಿಗಳು, ಮಾಧ್ಯಮದವರು ಸೇರಿದಂತೆ ಊರಿಗೆ ಯಾರೇ ಭೇಟಿ ನೀಡಿದರೂ, ಯಾರೊ ದುಷ್ಟರು ನಮ್ಮ ಹುಡುಗಿಯನ್ನು ಹೊಡೆದು ಸಾಯಿಸಿದ್ದಾರೆ. ಅವಳ ಸಾವಿಗೆ ನ್ಯಾಯಕೊಡಿಸಿ ಸ್ವಾಮಿ ಎಂದು ಕುಟುಂಬದವರು, ಊರಿನವರು ಅಂಗಲಾಚಿದರು. ಹಿಡಿದು ಶವದೊಂದಿಗೆ ರಾತ್ರಿ ಕಳೆದರು. ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ಮತ್ತು ಪೊಲೀಸರ ಮನವೊಲಿಕೆಗೂ ಬಗ್ಗದೆ ಧರಣಿ ಮುಂದುವರಿಸಿದರು.

**ಹಂತಕರನ್ನು ಎನ್‌ಕೌಂಟರ್ ಮಾಡಿ: ಪ್ರತಿಭಟನಾ ಮೆರವಣಿಗೆಯಲ್ಲಿ ಆಗ್ರಹ:** ಬಿಡದಿ ಹೋಬಳಿ ವ್ಯಾಪ್ತಿಯಲ್ಲಿ ನಡೆದ 15 ವರ್ಷದ ಬಾಲಕಿಯ ಕೊಲೆ ಖಂಡಿಸಿ, ಕರ್ನಾಟಕ ಅಲೆಮಾರಿ ಹಕ್ಕಿಪಿಕ್ಕಿ ಬುಡಕಟ್ಟು ಸಂರಕ್ಷಣಾ ಸಮಿತಿ ಸದಸ್ಯರು ನಗರದ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಿದರು. ಅದಕ್ಕೂ ಮುಂಚೆ ಸದಸ್ಯರು ಐಜೂರು ವೃತ್ತದಿಂದ ಡಿ.ಸಿ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದರು. ಬೇಕೇ ಬೇಕು, ನ್ಯಾಯ ಬೇಕು ಎಂದು ಘೋಷಣೆಗಳನ್ನು ಕೂಗಿದರು. ಮಾತುಬಾರದ, ಕಿವಿ ಕೇಳಿಸದ ಮುಗ್ಧ ಬಾಲಕಿಯನ್ನು ಕೊಲೆ ಮಾಡಿದ ದುರುಳರನ್ನು ಪೊಲೀಸರು ಆದಷ್ಟು ಬೇಗ ಬಂಧಿಸಿ ಅವರನ್ನು ಎನ್‌ಕೌಂಟರ್ ಮಾಡಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಮಹಿಳೆಯರು ಬಾಲಕಿಯ ಚಿತ್ರವನ್ನು ಪ್ರದರ್ಶಿಸುತ್ತಾ ಕಣ್ಣೀರು ಹಾಕಿದರು. ಈ ವೇಳೆ ಮಾತನಾಡಿದ ಸಮಿತಿ ರಾಜ್ಯಾಧ್ಯಕ್ಷ ಜಗ್ಗು, ಮೃತ ಬಾಲಕಿಯ ಗ್ರಾಮದಲ್ಲಿರುವ ಸಮುದಾಯದವರಿಗೆ ಸೂಕ್ತ ಭದ್ರತೆ ಇಲ್ಲ. ಅಮಾಯಕ ಬಾಲಕಿ ಕೊಲೆಯಾಗಿ ಮೂರು ದಿನಗಳಾದರೂ ಪೊಲೀಸರು ಇದುವರೆಗೆ ಆರೋಪಿಗಳನ್ನು ಬಂಧಿಸಿಲ್ಲ. ಬಡವರಿಗೆ ನ್ಯಾಯ ಮರೀಚಿಕೆಯಾಗಿದೆ. ಪೊಲೀಸರು ಇನ್ನಾದರೂ ತನಿಖೆಯನ್ನು ತೀವ್ರಗೊಳಿಸಿ ಆರೋಪಿಗಳನ್ನು ಬಂಧಿಸಬೇಕು ಎಂದು ಆಗ್ರಹಿಸಿದರು. ಸ್ಥಳಕ್ಕೆ ಭೇಟಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಜಿ. ಪಲ್ಲವಿ ಭೇಟಿ ನೀಡಿ ಅಹವಾಲು ಸ್ವೀಕರಿಸಿದರು. ಈ ವೇಳೆ ಸಮುದಾಯದವರು ಅಳಲು ತೋಡಿಕೊಂಡರು. ಅವುಗಳನ್ನು ಬಗೆಹರಿಸಲು ಪ್ರಯತ್ನಿಸುವುದಾಗಿ ಭರವಸೆ ನೀಡಿದರು. ನಂತರ ಪ್ರತಿಭಟನಾಕಾರರ ನಿಯೋಗ ಜಿಲ್ಲಾಧಿಕಾರಿ ಭೇಟಿ ಮಾಡಿ ಮನವಿ ಸಲ್ಲಿಸಿದರು


ಉದಯವಾಹಿನಿ ಚಿತ್ರ





**ಬಾಲಕಿಯ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾರ ಒತ್ತಡ, ಪ್ರಭಾವಕ್ಕೂ ಒಳಗಾಗದೆ ಎಲ್ಲಾ ಆಯಾಮದಲ್ಲೂ ತನಿಖೆ ನಡೆಸುವಂತೆ ಪೊಲೀಸರಿಗೆ ಸೂಚನೆ ನೀಡಲಾಗಿದೆ ಬಾಲಕಿ ಸಾವಿಗೆ ನ್ಯಾಯ ಒದಗಿಸಲಾಗುವುದು**
**-ಡಿ.ಕೆ. ಶಿವಕುಮಾರ್, ಉಪ ಮುಖ್ಯಮಂತ್ರಿ**



**ಕೆಲವರು ಬಾಲಕಿ ಸಾವಿನ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿಗಳನ್ನು ಹಬ್ಬಿಸುತ್ತಿದ್ದಾರೆ. ಬಾಲಕಿ ಸಾವಿಗೆ ನ್ಯಾಯಕ್ಕೆ ಆಗ್ರಹಿಸುವ ಭರದಲ್ಲಿ ಆಕೆಯ ಚಿತ್ರವನ್ನು ಪೋಸ್ಟ್ ಮಾಡುತ್ತಿದ್ದಾರೆ. ಕಾನೂನಿಗೆ ವಿರುದ್ಧವಾಗಿ ಯಾರೂ ಈ ರೀತಿ ಮಾಡಬಾರದು**
**-ಆರ್. ಶ್ರೀನಿವಾಸ ಗೌಡ**
**ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ**

ಅಂತರಾಳದಿಂದ...
EDITORIAL

# ರೋಹಿತ್, ವಿರಾಟ್ ನಿವೃತ್ತಿ ಕ್ರಿಕೆಟ್‌ನ ಒಂದು ಯುಗಾಂತ್ಯ

ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರು ಟೆಸ್ಟ್ ಮಾದರಿಗೆ ವಿದಾಯ ಹೇಳಿರುವುದರಿಂದ ಭಾರತದ ಕ್ರಿಕೆಟ್‌ನಲ್ಲಿ ಒಂದು ಸುವರ್ಣ ಯುಗದ ಅಂತ್ಯವಾದಂತಾಗಿದೆ. ಈ ಹದಿನೈದು ವರ್ಷಗಳ ಅವಧಿಯಲ್ಲಿ ಈ ಇಬ್ಬರೂ ನವಪೀಳಿಗೆಯನ್ನು ಪ್ರಭಾವಿಸಿದ ರೀತಿ ಅನನ್ಯ.



ಟ್ವೆಂಟಿ-20 ಕ್ರಿಕೆಟ್ ಭರಾಟೆಯ ನಡುವೆಯೂ ಟೆಸ್ಟ್ ಮಾದರಿಗೆ ಹೊಸ ಚೈತನ್ಯ ತುಂಬಿದ ಶ್ರೇಯ ಈ ದಿಗ್ಗಜರಿಗೇ ಸಲ್ಲಬೇಕು. ಕ್ರಿಕೆಟ್‌ನ ಮೂರೂ ಮಾದರಿಗಳಲ್ಲಿ ಈ ಆಟಗಾರರು ಒಂದೇ ರೀತಿ ಮಿಂಚಿದರೂ ಟೆಸ್ಟ್ ಕ್ರಿಕೆಟ್ ಮೇಲೆಯೇ ಅವರ ಒಲವು ಹೆಚ್ಚಾಗಿತ್ತು ಎಂಬುದನ್ನು ಅಭಿಮಾನಿಗಳೆಲ್ಲ ಬಲ್ಲರು. ಸಚಿನ್ ತೆಂಡೂಲ್ಕರ್ ಬಳಿಕ ಭಾರತೀಯ ಕ್ರಿಕೆಟ್‌ನ ಅಸ್ಮಿತೆಯನ್ನು ಉಜ್ವಲವಾಗಿ ಬೆಳಗಿದ ಕ್ರಿಕೆಟಿಗ ಎಂದರೆ ಅದು ಕೊಹ್ಲಿ ಅವರೇ ಎಂಬುದರಲ್ಲಿ ಎರಡು ಮಾತಿಲ್ಲ. ದಶಕಕ್ಕೂ ಮೀರಿದ ತಮ್ಮ ಆಟದಲ್ಲಿ ವಿರಾಟ್ ಬರೀ ರನ್ ಗಳಿಸಲಿಲ್ಲ - ನಿರೀಕ್ಷೆಗಳನ್ನು ಮರು ವ್ಯಾಖ್ಯಾನಿಸಿದರು. ದೊಡ್ಡ ಸವಾಲುಗಳನ್ನು ಮೆಟ್ಟಿ ನಿಂತರು. ಭಾರತೀಯ ಕ್ರೀಡಾಶಕ್ತಿಯ ಮಾನವ ರೂಪವಾಗಿ ಕಂಗೊಳಿಸಿದರು. ವಿದೇಶಿ ನೆಲದಲ್ಲೂ ಗೆಲುವಿನ ರೂವಾರಿಯಾಗಿ ಮೆರೆದರು. ಭಾರತ ಕ್ರಿಕೆಟ್ ಕಂಡ ಅತ್ಯಂತ ಯಶಸ್ವಿ ನಾಯಕರಲ್ಲಿ ವಿರಾಟ್ ಅಗ್ರಗಣ್ಯರು. ಅವರ ನಾಯಕತ್ವದ ಅವಧಿ ಎಂದರೆ ಅದು ಭಾರತ ತಂಡದ ಪಾಲಿಗೊಂದು ಮಹಾನ್ ವಿರಾಟಪರ್ವ, ಪ್ರತಿಯೊಬ್ಬ ಕ್ರೀಡಾಪಟುವಿನ ವೃತ್ತಿ ಜೀವನದಲ್ಲಿ ಏಳುಬೀಳುಗಳು ಸಹಜ. ಆದರೆ, ವೈಫಲ್ಯಗಳನ್ನೆಲ್ಲ ಮೆಟ್ಟಿನಿಂತು ರೋಹಿತ್ ಮತ್ತು ವಿರಾಟ್ ತೋರಿದ ಸಾಧನೆ ಅನನ್ಯವಾದುದು.

**12 ವರ್ಷಗಳ ಹಿಂದೆ ಸಚಿನ್ ತೆಂಡೂಲ್ಕರ್ ಅವರಿಗೆ ವಿದಾಯದ ಟೆಸ್ಟ್ ಸರಣಿ ಆಯೋಜಿಸುವ ಮೂಲಕ ಅರ್ಥಪೂರ್ಣ ಬೀಳ್ಕೊಡುಗೆ ನೀಡಲಾಗಿತ್ತು. ತಮ್ಮ ವಿದಾಯದ ಪಂದ್ಯಗಳ ನಂತರ ಅಭಿಮಾನಿಗಳ ಸಮ್ಮುಖದಲ್ಲಿ ನಿವೃತ್ತಿ ಪಡೆದು ಕ್ರೀಡಾಂಗಣದಿಂದ ನಿರ್ಗಮಿಸುವ ಅವಕಾಶವನ್ನು ರೋಹಿತ್ ಮತ್ತು ವಿರಾಟ್ ಅವರಿಗೂ ಬಿಸಿಸಿಐ ಕಲ್ಪಿಸಬೇಕಿತ್ತು ಎಂಬ ಅಭಿಪ್ರಾಯಗಳು ವ್ಯಕ್ತವಾಗಿವೆ. ಟ್ವೆಂಟಿ-20 ಕ್ರಿಕೆಟ್ ಅಬ್ಬರದಲ್ಲಿಯೂ ಟೆಸ್ಟ್ ಮಾದರಿಯ ಘನತೆ ಉಳಿಸಿ ಬೆಳೆಸಲು ಕಾರಣರಾದ ರೋಹಿತ್ ಮತ್ತು ವಿರಾಟ್ ಅವರಂತೂ ಅರ್ಥಪೂರ್ಣವಾದ ಬೀಳ್ಕೊಡುಗೆಗೆ ಹೆಚ್ಚು ಅರ್ಹರಾಗಿದ್ದರು ಎಂಬುದರಲ್ಲಿ ಅನುಮಾನವೇ ಇಲ್ಲ.**

ವಿಶ್ವದ ಶ್ರೇಷ್ಠ ಬ್ಯಾಟರ್‌ಗಳಾಗುವುದರ ಜೊತೆಗೆ ನಾಯಕತ್ವದಲ್ಲಿಯೂ ಯಶಸ್ವಿಯಾದವರು ಅವರು. ತಮ್ಮ ವ್ಯಕ್ತಿತ್ವ ಮತ್ತು ನಡವಳಿಕೆಯ ಮೂಲಕ ಯುವಪೀಳಿಗೆಗೆ ಮಾದರಿಯಾದವರು ಕೂಡ. ಹೊಸ ಪೀಳಿಗೆಯ ಕ್ರಿಕೆಟಿಗರಿಗೆ ಫಿಟ್‌ನೆಸ್ ಹವ್ಯಾಸ ರೂಢಿಸಿದ ಕೊಹ್ಲಿ ಇನ್ನೂ ಕೆಲವು ವರ್ಷ ಆಡುವ ಸಾಮರ್ಥ್ಯ ಹೊಂದಿದ್ದಾರೆ.

14 ವರ್ಷಗಳ ಅವಧಿಯಲ್ಲಿ 123 ಟೆಸ್ಟ್‌ಗಳಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿದ್ದ ಕೊಹ್ಲಿ ಅವರ ಜನಪ್ರಿಯತೆ ಮತ್ತು ಬ್ರ್ಯಾಂಡ್ ಮೌಲ್ಯ ಉತ್ತುಂಗದಲ್ಲಿದೆ. ಆದರೆ, 36 ವರ್ಷ ವಯಸ್ಸಿನ ಈ ತಾರಾ ವರ್ಚಸ್ಸಿನ ಆಟಗಾರ ಯುವ ಆಟಗಾರರಿಗೆ ದಾರಿ ಬಿಟ್ಟುಕೊಟ್ಟಿದ್ದಾರೆ. ಅವರ ಸ್ಥಾನವನ್ನು ತುಂಬುವಂತಹ ಪ್ರತಿಭೆಗಳನ್ನು ಹುಡುಕುವ ಸವಾಲು ಈಗ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) ಆಯ್ಕೆ ಸಮಿತಿ ಮುಂದಿದೆ. ದಶಕದ ಹಿಂದೆ ರಾಹುಲ್ ದ್ರಾವಿಡ್ ಮತ್ತು ವಿ.ವಿ.ಎಸ್. ಲಕ್ಷ್ಮಣ್ ಅವರು ಅಲ್ಪಸಮಯದ ಅಂತರದಲ್ಲಿ ನಿವೃತ್ತಿ ಹೊಂದಿದಾಗಲೂ ಇಂತಹದೇ ಪರಿಸ್ಥಿತಿ ಇತ್ತು. ಪ್ರಸ್ತುತ ಕಾಲಘಟ್ಟದಲ್ಲಿ ದೇಶದುದ್ದಕ್ಕೂ ನೂರಾರು ಪ್ರತಿಭಾವಂತ ಕ್ರಿಕೆಟಿಗರು ಮಿಂಚುತ್ತಿದ್ದಾರೆ. ಅವರಲ್ಲಿಯೇ ಕೆಲವರು ರೋಹಿತ್-ವಿರಾಟ್ ಪರಂಪರೆ ಮುಂದುವರಿಸುವ ಸಾಮರ್ಥ್ಯ ಹೊಂದಿರಲೂಬಹುದು. ರೋಹಿತ್ ಮತ್ತು ಕೊಹ್ಲಿ ಅವರ ಆಟದ ದಾಖಲೆಗಳನ್ನು ಮುರಿಯುವಂತಹ ಆಟಗಾರರೂ ಸಿಗಬಹುದು. ಆದರೆ, ಅವರ ಬದ್ಧತೆ, ಸ್ನೇಹಪರತೆ ಮತ್ತು ಕ್ರೀಡಾಸ್ಫೂರ್ತಿಯ ವ್ಯಕ್ತಿತ್ವವನ್ನು ಸರಿಗಟ್ಟುವಂತಹವರು ಲಭಿಸುವರೇ ಎಂಬ ಪ್ರಶ್ನೆಯೂ ಮೂಡಿದೆ.




ಅದಕ್ಕೆಲ್ಲ ಮುಂಬರುವ ಕಾಲವೇ ಉತ್ತರ ನೀಡಬೇಕು. ಈ ದಿಗ್ಗಜರ ನಿವೃತ್ತಿಯು ಒಂದು ಮಹತ್ವದ ಚರ್ಚೆಗೂ ಕಾರಣವಾಗಿದೆ.

ಭಾರತದ ಕ್ರಿಕೆಟ್ ಬೆಳವಣಿಗೆಗೆ ಅಮೂಲ್ಯ ಕಾಣಿಕೆ ಕೊಟ್ಟ ಇಂತಹ ಆಟಗಾರರಿಗೆ ಗೌರವಯುತವಾದ ಬೀಳ್ಕೊಡುಗೆ ಲಭಿಸಬೇಕು ಎಂದು ಮಾಜಿ ಕ್ರಿಕೆಟಿಗ ಅನಿಲ್ ಕುಂಬ್ಳೆ ಸೇರಿದಂತೆ ಹಲವು ಆಟಗಾರರು ಪ್ರತಿಪಾದಿಸಿದ್ದಾರೆ.

# ನಿಮ್ಮ ತ್ವಚೆ ಯಾವಾಗಲೂ ಕಾಂತಿಯಿಂದ ಕೂಡಿರುತ್ತದೆ!

**ಈ ಟಿಪ್ಸ್ ಫಾಲೋ ಮಾಡಿದರೆ**

ಹದಿಹರೆಯದ ಯುವಕ ಯುವತಿಯರಿಂದ ಹಿಡಿದು ಪ್ರತಿಯೊಬ್ಬರಿಗೂ ಕೂಡ, ನಾಲ್ಕು ಜನರ ಮುಂದೆ ನಾವು ನೋಡುವುದಕ್ಕೆ ಸುಂದರವಾಗಿ ಕಾಣಬೇಕು ಎನ್ನುವ ಆಸೆ ಇದ್ದೇ ಇರುತ್ತದೆ. ಹೀಗಾಗಿ ತ್ವಚೆಯ ಆರೋಗ್ಯವನ್ನು ದೀರ್ಘಕಾಲದವರೆಗೆ ಕಾಯ್ದುಕೊಳ್ಳಲು ನೈಸರ್ಗಿಕ ವಸ್ತುಗಳ ಮೊರೆ ಹೋಗುತ್ತೇವೆ ಇದರಲ್ಲಿ ತಪ್ಪೇನಿಲ್ಲ ಆದರೆ, ತ್ವಚೆಯ ಕಾಂತಿ ಹೆಚ್ಚಾಗಬೇಕೆಂದರೆ ಕೆಲವೊಂದು ಆರೋಗ್ಯಕಾರಿ ಅಭ್ಯಾಸಗಳನ್ನು ಕೂಡ ದಿನಾ ಅನುಸರಿಸಬೇಕಾಗುತ್ತದೆ ಎನ್ನುತ್ತಾರೆ ಸೌಂದರ್ಯ ತಜ್ಞರು


ಬೆಳಗ್ಗೆ ಎದ್ದ ತಕ್ಷಣ ನಾವು ಕನ್ನಡಿಯಲ್ಲಿ ನಮ್ಮ ಮುಖ ನೋಡಿಕೊಳ್ಳುತ್ತೇವೆ. ಆ ಸಂದರ್ಭದಲ್ಲಿ ನಮ್ಮ ತ್ವಚೆ ಕಾಂತಿಯಿಂದ ಕೂಡಿರದಿದ್ದರೆ ನಮಗೆ ಬಹಳ ಬೇಸರವಾಗುತ್ತದೆ. ಏಕೆ ಹೀಗಾಯ್ತು ಎಂದು ಆಲೋಚನೆ ಮಾಡಿ ನೋಡಿದರೆ ಅದಕ್ಕೆ ಪ್ರಮುಖ ಕಾರಣ ನಮ್ಮ ದೇಹದ ನಿರ್ಜಲೀಕರಣ ಸಮಸ್ಯೆ, ರಾತ್ರಿ ಹೊತ್ತು ಸರಿಯಾಗಿ ನಿದ್ರೆ ಇಲ್ಲದಿರುವುದು, ರಾತ್ರಿ ಮಲಗುವ ಮುಂಚೆ ನಮ್ಮ ಚರ್ಮದ ಆರೈಕೆ ಮಾಡಿಕೊಳ್ಳದಿರುವುದು, ಸುತ್ತಮುತ್ತಲಿನ ವಾತಾವರಣದ ಪ್ರತಿಕೂಲತೆಗಳು ಇತ್ಯಾದಿ ಎಂಬುದು ಗೊತ್ತಾಗುತ್ತದೆ. ಹೀಗಾಗಿ ನಾವು ರಾತ್ರಿ ಮಲಗುವ ಸಂದರ್ಭದಲ್ಲಿ ನಮ್ಮ ತ್ವಚೆಯ ಆರೈಕೆಗಾಗಿ ಕೆಲವೊಂದು ಟಿಪ್ಸ್ ಅನುಸರಿಸುವುದರಿಂದ ಅತ್ಯುತ್ತಮ ಚರ್ಮದ ಕಾಂತಿಯನ್ನು ಕಂಡುಕೊಳ್ಳಬಹುದು ಮತ್ತು ನಿರ್ವಹಿಸಿಕೊಳ್ಳಬಹುದು.



**ಚರ್ಮಕ್ಕೆ ನೀರಿನ ಅಂಶ ಬಹಳ ಅಗತ್ಯ:** ಚರ್ಮರೋಗ ತಜ್ಞರಾದ ಡಾ. ಅಮಿಶಾ ಮಹಾಜನ್ ಹೇಳುವ ಹಾಗೆ ಯಾರ ದೇಹ ನಿರ್ಜಲೀಕರಣ ಸಮಸ್ಯೆಯಿಂದ ಬಳಲುತ್ತದೆ, ಅಂತಹವರ ಚರ್ಮ ಕೂಡ ಕಾಂತಿ ಕಳೆದುಕೊಳ್ಳುತ್ತದೆ. ಹಾಗಾಗಿ ರಾತ್ರಿ ಮಲಗುವ ಸಂದರ್ಭದಲ್ಲಿ ಚರ್ಮರೋಗ ತಜ್ಞರು ಸೂಚಿಸುವ ಮಾಯಿಶ್ಚರೈಸರ್ ಅಥವಾ ಸಿರಮ್ ಬಳಕೆ ಮಾಡುವುದು ತ್ವಚೆಗೆ ಬಹಳ ಅನುಕೂಲಕರ. ಸಾಧ್ಯವಾದಷ್ಟು ಆಲ್ಕೋಹಾಲ್ ಆಧಾರಿತ ಟೋನರ್‌ಗಳನ್ನು ರಾತ್ರಿ ಹೊತ್ತು ಬಳಸುವುದನ್ನು ತಪ್ಪಿಸಿ. ಏಕೆಂದರೆ ಇದು ಚರ್ಮ ಮತ್ತಷ್ಟು ಒಣಗುವಂತೆ ಮಾಡುತ್ತದೆ.

**ರಾತ್ರಿ ಸಮಯದ ಚರ್ಮದ ಆರೈಕೆ:** ರಾತ್ರಿ ನೀವು ಮಲಗಿರುವ ಸಂದರ್ಭದಲ್ಲಿ ನಿಮ್ಮ ತ್ವಚೆಯು ತನ್ನಿಂತಾನೆ ಸರಿಪಡಿಸಿಕೊಳ್ಳುತ್ತದೆ.

ಹಾಗಾಗಿ ರಾತ್ರಿಯ ಸಮಯದಲ್ಲಿ ಮೃದುವಾದ ಇಲ್ಲಿ ಮುಖ ಸ್ವಚ್ಛಪಡಿಸಿಕೊಳ್ಳುವುದರ ಜೊತೆಗೆ ಮುಖದ ಮೇಲಿನ ಧೂಳು, ಕೊಳೆ, ಹಾನಿಕಾರಕ ಅಂಶಗಳನ್ನು ತೆಗೆದುಹಾಕಿ. ವಿಟಮಿನ್‌ಸಿ ಅಥವಾ ನಿಯಾಸಿನಮೈಡ್ ಇರುವಂತಹ ಆಂಟಿ ಆಕ್ಸಿಡೆಂಟ್ ಗಳನ್ನು ಬಳಕೆ ಮಾಡಿ ಸ್ವಲ್ಪ ಮಾಯಿಶ್ಚರೈಸರ್ ಜೊತೆಗೆ ರೆಟಿನಾಲ್ ಕೂಡ ಬಳಸುವುದರಿಂದ ಚರ್ಮದಲ್ಲಿ ಆರೋಗ್ಯಕರ ಜೀವಕೋಶಗಳು ಬೆಳವಣಿಗೆ ಹೊಂದುತ್ತವೆ.



**ಉತ್ತಮ ಫ್ಯಾಬ್ರಿಕ್ ಹೊಂದಿರುವ ತಲೆದಿಂಬು ಬಳಕೆ:** ರಾತ್ರಿ ಮಲಗುವ ಸಂದರ್ಭದಲ್ಲಿ ನೀವು ಯಾವ ಬಟ್ಟೆಯ ತಲೆದಿಂಬನ್ನು ಬಳಸುತ್ತೀರಿ ಎನ್ನುವುದು ಕೂಡ ನಿಮ್ಮ ಚರ್ಮದ ಆರೋಗ್ಯಕ್ಕೆ ಬಹಳ ಮುಖ್ಯವಾಗುತ್ತದೆ.

ನಿಮ್ಮ ತ್ವಚೆಯ ತೇವಾಂಶ ಕಡಿಮೆ ಆಗದಂತೆ ನೋಡಿ ಕೊಳ್ಳಲು ರೇಷ್ಮೆಯ ಅಥವಾ ಸ್ಯಾಟಿನ್ ಬಟ್ಟೆಯ ಪ್ರಕಾರ ಹೊಂದಿರುವ ತಲೆದಿಂಬನ್ನು ಉಪಯೋಗಿಸಿ. ಏಕೆಂದರೆ ಕಾಟನ್ ತಲೆದಿಂಬುಗಳು ನಿಮ್ಮ ಚರ್ಮದಿಂದ ನೀರಿನ ಅಂಶವನ್ನು ತೆಗೆದುಕೊಂಡು ನಿರ್ಜಲೀಕರಣ ಉಂಟುಮಾಡುವುದರ ಜೊತೆಗೆ ಚರ್ಮದ ಕಿರಿಕಿರಿ ಆಗುವಂತೆ ಮಾಡುತ್ತವೆ.

**ಎತ್ತರದಲ್ಲಿ ತಲೆ ಇಟ್ಟು ಮಲಗಿ:** ರಾತ್ರಿ ಮಲಗುವ ಸಂದರ್ಭದಲ್ಲಿ ಸ್ವಲ್ಪ ಎತ್ತರದಲ್ಲಿ ತಲೆ ಇಟ್ಟುಕೊಂಡು ಮಲಗುವುದರಿಂದ ನಿಮ್ಮ ದೇಹದಲ್ಲಿ ರಕ್ತ ಸಂಚಾರ ಚೆನ್ನಾಗಿ ನಡೆಯುತ್ತದೆ ಮತ್ತು ನೀವು ಸದಾ ತಾಜಾ ಆಗಿರುವಂತೆ ನೋಡಿಕೊಳ್ಳುತ್ತದೆ.

**ಸನ್ ಸ್ಕ್ರೀನ್ ಬಳಕೆ ಮಾಡುವುದು:** ನೀವು ಮನೆಯಿಂದ ಹೊರಗೆ ಹೋಗುವ ಸಂದರ್ಭದಲ್ಲಿ ಅತಿಯಾದ ಬಿಸಿಲು ನಿಮ್ಮ ತ್ವಚೆಯನ್ನು ಹಾನಿ ಮಾಡಬಲ್ಲದು. ಹಾಗಾಗಿ ಪ್ರತಿದಿನ ಸನ್ ಸ್ಕ್ರೀನ್ ಬಳಸುವುದು ನಿಮ್ಮ ತ್ವಚೆಯ ಕಾಂತಿಯನ್ನು ಕಾಪಾಡಲು ನೆರವಾಗುತ್ತದೆ.

# ಸಮಯ



ಗಿರಿಜಾ.ಎಸ್. ದೇಶಪಾಂಡೆ
• ಉದಯವಾಹಿನಿ, ವಿಶೇಷ

**ಸಮಯ ಸಾಗುವ ಗತಿಯ**
**ತಡೆಯುವ ಪರಿ ನಾನರಿಯೆ**
**ಕಳೆದ ಕ್ಷಣಗಳನು ಮೌನದಲಿ**
**ನನ್ನ ಹೃದಯದಲಿ ಬಚ್ಚಿಡುವೆನು.**
**ನಾವು ಕಳೆದ ವಿಷಯಗಳ**
**ದುಃಖಿಸುವದನ್ನು ನಿಲ್ಲಿಸಿದರೆ**
**ಭವಿಷ್ಯದಲಿ ಗೆಲ್ಲುವೆ ಗೆಳತಿ**
**ಕಳೆದುಕೊಂಡದನ್ನು ಮರು ಪಡೆಯಲು**
**ಸಾಧ್ಯವಿಲ್ಲ.**
**ಕಳೆದು ಹೋದ ಸಮಯ**
**ಹಿಂತಿರುಲಾರದು**
**ಅದರ ನೆನಪಲ್ಲೇ ನಾವು**
**ನಿಲ್ಲಬಾರದು ಗೆಳತಿ.**
**ಸಮಯಬಂದಾಗ ಮಾತನಾಡುವದಕ್ಕಿಂತ**
**ಸಮಯ ಕೊಟ್ಟು ನುಡಿಯುವವರನೆ**
**ನಂಬು ಗೆಳತಿ.**
**ಜಗದ ನಿಯಮವಿಹುದು**
**ಸಮನಾಗಿ ನೋಡುವದು**
**ಸಮಯ ಮಾತ್ರ**
**ಬಡವನಿಗೆ**
**ಶ್ರೀಮಂತನಿಗೂ**
**ಒಂದೇ ಅಲ್ಲವೇ**
**ಗೆಳತಿ!**



# ಶ್ರೀ ರಾಘವೇಂದ್ರ ಸ್ವಾಮಿಗಳ ಸನ್ನಿಧಿಗೆ ಭಕ್ತ ಜನ ಸಾಗರ

• ಉದಯವಾಹಿನಿ ಬೆಂಗಳೂರು

ಜಯನಗರ ಐದನೇ ಬಡಾವಣೆಯಲ್ಲಿರುವ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪರಮಪೂಜ್ಯ ಶ್ರೀ 1008 ಶ್ರೀ ಸುಬುಧೇಂದ್ರ ತೀರ್ಥ ಶ್ರೀಪಾದಂಗಳವರ ಆದೇಶಾನುಸಾರ ಶ್ರೀ ಮಠದ ಹಿರಿಯ ವ್ಯವಸ್ಥಾಪಕರಾದ ಆರ್ ಕೆ ವಾದೀಂದ್ರಾಚಾರ್ ಅವರ ನೇತೃತ್ವದಲ್ಲಿ ಮೇ 15, ಗುರುವಾರ ಬೆಳಗ್ಗೆ ರಾಯರಿಗೆ ಪಂಚಾಮೃತ ಅಭಿಷೇಕ, ಕನಕಾಭಿಷೇಕ, ವಿಶೇಷ ಅಲಂಕಾರ, ಮಹಾಮಂಗಳಾರತಿ ಹಾಗೂ ಅನ್ನದಾನ ಸೇವೆ ಕಾರ್ಯಕ್ರಮಗಳು ನಡೆದವು.

ಭಕ್ತರು ಸಹಸ್ರಾರು ಸಂಖ್ಯೆಯಲ್ಲಿ ಸನ್ನಿಧಿಗೆ ಆಗಮಿಸಿ ಗುರು ರಾಯರ ದರ್ಶನ ಪಡೆದರು ಎಂದು ಶ್ರೀ ನಂದಕಿಶೋರ್ ಆಚಾರ್ಯರು ತಿಳಿಸಿದರು,


ಉದಯವಾಹಿನಿ ಚಿತ್ರ

ಇದೇ ಸಂದರ್ಭದಲ್ಲಿ ಶ್ರೀಯುತ ಭಾಸ್ಕರ ರಾವ್ (ನಿವೃತ್ತ ಪೊಲೀಸ್ ಆಯುಕ್ತರು) ಮತ್ತು ಡಾ|| ಕಿರಣ್ ಕುಮಾರ್ ನಿರ್ದೇಶಕರು, ಎಫ್. ಕೆ.ಸಿ.ಸಿ.ಐ.) ಶ್ರೀಮಠಕ್ಕೆ ಆಗಮಿಸಿ ದೀಪಗಳನ್ನು ಬೆಳಗಿಸಿ ರಾಯರ ದರ್ಶನ ಪಡೆದು ಶೇಷವಸ್ತ್ರ ಫಲ ಮಂತ್ರಾಕ್ಷತೆ ಪರಿಮಳ ಪ್ರಸಾದವನ್ನು ಸ್ವೀಕರಿಸಿ ಶ್ರೀ ರಾಘವೇಂದ್ರ ಸ್ವಾಮಿಗಳ ಅನುಗ್ರಹಕ್ಕೆ ಪಾತ್ರರಾದರು.

# ಕುಟುಂಬದ ಜೊತೆ ಸಮಯ ಕಳೆಯುವುದರಿಂದಾಗುವ ಆರೋಗ್ಯ ಪ್ರಯೋಜನಗಳು

ಇಂದಿನ ಬಿಡುವಿಲ್ಲದ ಜೀವನ ಶೈಲಿಯಲ್ಲಿ ನಾವು ಕುಟುಂಬ ವ್ಯವಸ್ಥೆಯನ್ನು ಸರಿಯಾಗಿ ನಿರ್ವಹಿಸುತ್ತಿಲ್ಲ. ಕುಟುಂಬ, ಆಪ್ತರ ಜೊತೆ ಮಾತನಾಡುವುದೂ ಕಡಿಮೆಯಾಗುತ್ತಿದೆ, ನಮ್ಮ ಮಕ್ಕಳ ಜೊತೆ ಮಾತನಾಡಲೂ ಸಮಯ ವಿಲ್ಲದಷ್ಟು ಬ್ಯುಸಿ ಜೀವನ ನಡೆಸುತ್ತಿದ್ದೇವೆ. ಮೇ 15ರಂದು ಅಂತರರಾಷ್ಟ್ರೀಯ ಕುಟುಂಬಗಳ ದಿನವನ್ನು ಆಚರಿಸಲಾಗುತ್ತದೆ. ಕುಟುಂಬ ಮತ್ತು ಆಪ್ತರ ಜೊತೆ ಸಮಯ ಕಳೆಯುವುದರಿಂದಾಗುವ ಆರೋಗ್ಯ ಪ್ರಯೋಜನಗಳ ಬಗ್ಗೆ ಇಲ್ಲಿ ತಿಳಿಯೋಣ. ನಿಮ್ಮ ಕುಟುಂಬದೊಂದಿಗೆ ಸಮಯ ಕಳೆಯುವುದು ನಿಮ್ಮ ಆಪ್ತರೊಂದಿಗೆ ಸಂಬಂಧವನ್ನು ಬಲಪಡಿಸುವುದಲ್ಲದೆ, ಆರೋಗ್ಯಕರ, ಸಂತೋಷದ ಜೀವನವನ್ನು ನಡೆಸಲು ಸಹಾಯ ಮಾಡುತ್ತದೆ. ಕುಟುಂಬ ಜೀವನಕ್ಕೆ ಒಗ್ಗಟ್ಟು ಬಹಳ ಮುಖ್ಯ.



ಒಗ್ಗಟ್ಟು ನಿಮ್ಮನ್ನು ಸುರಕ್ಷತಾ ಭಾವನೆ ನೀಡುತ್ತದೆ, ನಿಮಗೆ ಅಸಂಖ್ಯಾತ ನೆನಪುಗಳನ್ನು ನೀಡುತ್ತದೆ ಮತ್ತು ನಿಮ್ಮ ಜೀವನವನ್ನು ಶ್ರೀಮಂತಗೊಳಿಸುತ್ತದೆ. ಆದರೆ ಇಂದು ಸಂಬಂಧದಲ್ಲಿ ಆಪ್ತತೆ, ಮಾತುಕತೆ, ಸಹಾಯ ಮಾಡುವ ಮನೋಭಾವ ಕಡಿಮೆಯಾಗುತ್ತಿದೆ. ಆದ್ದರಿಂದ, ಕುಟುಂಬ ಬಾಂಧವ್ಯದ ಮಹತ್ವವನ್ನು ಒತ್ತಿಹೇಳುವ ಸಲುವಾಗಿ, ವಿಶ್ವಸಂಸ್ಥೆ (ಯುಎನ್) ಪ್ರತಿ ವರ್ಷ ಮೇ 15 ರಂದು ಅಂತರರಾಷ್ಟ್ರೀಯ ಕುಟುಂಬಗಳ ದಿನವನ್ನು ಆಚರಿಸುತ್ತದೆ. ಇಲ್ಲಿ ನಾವು ಕುಟುಂಬದ ಜೊತೆ ಸಮಯ ಕಳೆಯುವುದರಿಂದ ಆಗುವ ಕೆಲವು ವಿಜ್ಞಾನ-ಬೆಂಬಲಿತ ಪ್ರಯೋಜನಗಳನ್ನು ಹಂಚಿಕೊಂಡಿದ್ದೇವೆ.

**ಮಾನಸಿಕ ಯೋಗಕ್ಷೇಮವನ್ನು ಉತ್ತೇಜಿಸುತ್ತದೆ:** ಕುಟುಂಬ ಸಂಬಂಧಗಳು ನಿಮ್ಮ ಸಂತೋಷ, ನೆಮ್ಮದಿಯ ಜೀವನದಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ನಿಮ್ಮ ಕುಟುಂಬವು ನಿಮಗೆ ನೀಡುವ ಭಾವನಾತ್ಮಕ ಬೆಂಬಲವು ನಿಮಗೆ ಶಕ್ತಿ ನೀಡುತ್ತದೆ. ಇನ್ನೋವೇಶನ್ ಇನ್ ಏಜಿಂಗ್ ಜರ್ನಾಲಿಸಂ ಪ್ರಕಟವಾದ ಅಧ್ಯಯನದ ಪ್ರಕಾರ, ದೈನಂದಿನ ಜೀವನದ ಒತ್ತಡ ಮತ್ತು ಸಮಸ್ಯೆಗಳು ನಿಮ್ಮ ಮಾನಸಿಕ ಆರೋಗ್ಯವನ್ನು ಹದಗೆಡಿಸುವಲ್ಲಿ ಪ್ರಮುಖ ಪಾತ್ರ ವಹಿಸುವಾಗ ಸಾಮಾಜಿಕ ಬೆಂಬಲವು ರಕ್ಷಣಾತ್ಮಕವಾಗಿ ಕಾರ್ಯನಿರ್ವಹಿಸುತ್ತದೆ.

**ಒತ್ತಡವನ್ನು ನಿರ್ವಹಿಸಲು ನಿಮಗೆ ಸಹಾಯ ಮಾಡುತ್ತದೆ:** ಕುಟುಂಬ ಸ್ನೇಹಿತರೊಂದಿಗೆ ಸಮಯ ಕಳೆಯುವುದರಿಂದ ನಿಮ್ಮ ಮನಸ್ಸನ್ನು ಶಾಂತಗೊಳಿಸಬಹುದು. ಆಪ್ತರು ಕಠಿಣ ಪರಿಸ್ಥಿತಿಗಳನ್ನು ಎದುರಿಸಲು ನಿಮಗೆ ಆತ್ಮವಿಶ್ವಾಸ ಮತ್ತು ಧೈರ್ಯ ನೀಡುತ್ತಾರೆ. ಹಲವಾರು ರೀತಿಯಲ್ಲಿ ಒತ್ತಡ ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಕಾರ್ನೆಗೀ ಮೆಲನ್ ವಿಶ್ವವಿದ್ಯಾಲಯ ನಡೆಸಿದ ಅಧ್ಯಯನ, ಕುಟುಂಬ ಮತ್ತು ಆತ್ಮೀಯರೊಂದಿಗೆ ಸಮಯ ಕಳೆಯುವುದು ಜನರಿಗೆ ಒತ್ತಡ ನಿವಾರಕದಂತೆ ಎಂದು ಹೇಳಿದೆ.

**ಅರಿವಿನ ಆರೋಗ್ಯವನ್ನು ಹೆಚ್ಚಿಸುತ್ತದೆ:** ಅಮೇರಿಕನ್ ಸೊಸೈಟಿ ಆಫ್ ಏಜಿಂಗ್ನ ಲೇಖನವೊಂದರ ಪ್ರಕಾರ, ದೊಡ್ಡ ಸಾಮಾಜಿಕ ವಲಯವನ್ನು ಹೊಂದಿರುವುದು, ಆಪ್ತರನ್ನು ಹೊಂದಿರುವುದು ಉತ್ತಮ ಸ್ಮರಣಶಕ್ತಿ, ಉತ್ತಮ ಅರಿವಿನ ಕಾರ್ಯಗಳಿಗೆ ಸಹಾಯವಾಗುತ್ತದೆ. ವೃದ್ಧಾಪ್ಯದಲ್ಲಿ ಮರೆವಿನ ಸಮಸ್ಯೆಯ ಸಾಧ್ಯತೆಯನ್ನು ಕಡಿಮೆ ಮಾಡುತ್ತದೆ. ನಿಮ್ಮ ಸ್ನೇಹಿತರು ಮತ್ತು ಕುಟುಂಬದೊಂದಿಗೆ ನೀವು ಸೌಹಾರ್ದಯುತ ಉತ್ತಮ ಸಂಬಂಧ ಹೊಂದಿದ್ದರೆ ನೀವು ಅನೇಕ ಆರೋಗ್ಯ ಪ್ರಯೋಜನಗಳನ್ನು ಪಡೆಯಬಹುದು.


**ನಿಮ್ಮ ಮಗುವಿಗೆ ಸ್ವಾಭಿಮಾನವನ್ನು ಬೆಳೆಸಲು ಸಹಾಯ ಮಾಡುತ್ತದೆ:** ನೀವು ಮಕ್ಕಳ ಜೊತೆ ಸಮಯ ಕಳೆಯುವುದರಿಂದ ನಿಮ್ಮ ಮಕ್ಕಳಲ್ಲಿ ಸ್ವಯಂ ಪ್ರಜ್ಞೆ ಮತ್ತು ಸ್ವಾಭಿಮಾನ ಬೆಳೆಸಬಹುದು. ನಿಮ್ಮ ಮಗುವಿನೊಂದಿಗೆ ಮಾತನಾಡುವುದು, ಗುಣಮಟ್ಟದ ಸಮಯವನ್ನು ಕಳೆಯುವುದು ಅವರ ನಡವಳಿಕೆಯನ್ನು ಸುಧಾರಿಸುತ್ತದೆ.

ನೀವು ಉತ್ತಮ ವಿಚಾರಗಳನ್ನು ಮಾತನಾಡಿದಾಗ ಅವರೂ ನಿಮ್ಮನ್ನು ಅನುಸರಿಸುತ್ತಾರೆ. ಮಕ್ಕಳಲ್ಲಿ ಆತ್ಮವಿಶ್ವಾಸ, ಸ್ವಾಭಿಮಾನ, ಉತ್ತಮ ನಡವಳಿಕೆ ಬೆಳೆಸುವುದು ಕುಟುಂಬದ ಜವಾಬ್ದಾರಿಯಾಗಿರುತ್ತದೆ.

**ನಿಮ್ಮ ಮಗುವಿನ ಸಂವಹನ ಕೌಶಲ್ಯಗಳನ್ನು ಹೆಚ್ಚಿಸುತ್ತದೆ:** ಕುಟುಂಬದ ಜೊತೆ ಸಮಯ ಕಳೆಯುವುದರಿಂದ ಮಗುವಿನ ನಡತೆ ಉತ್ತಮಗೊಳ್ಳುವುದಲ್ಲದೆ ಇತರರ ಜೊತೆ ಹೇಗೆ ಸಂವಹನ ನಡೆಸಬೇಕೆಂದು ಕಲಿಯುತ್ತದೆ. ಕುಟುಂಬದ ಜೊತೆ ಸಮಯ ಕಳೆದಾಗ ಮಗು ಸಹಾನುಭೂತಿ ಮತ್ತು ತಾಳ್ಮೆಯ ಪಾಠವನ್ನೂ ಕಲಿಯುತ್ತದೆ. ಒಟ್ಟಿಗೆ ಕುಳಿತು ಊಟ ಮಾಡುವುದು, ಹಣ್ಣು ಸೇವಿಸುವುದು, ಮಾತುಕತೆ ನಡೆಸುವುದು ಮಗುವಿನ ಸಂವಹನ ಕೌಶಲ್ಯವನ್ನು ಹೆಚ್ಚಿಸುತ್ತದೆ.



# ರಾಮಾಯಣ



ಸುಮಂತ್ರನು ದಶರಥನಿಗೆ ಶ್ರೀರಾಮಾದಿಗಳು ನುಡಿದದ್ದನ್ನು ಹೇಳಿದ್ದು

• ಹಿಂದಿನ ಸಂಚಿಕೆಯಿಂದ

## 78ನೆಯ ಅಧ್ಯಾಯ

ಎಲೈ ಸುಮಂತ್ರನೆ, ಶ್ರೀರಾಮನು ಎಲ್ಲಿದ್ದಾನೆ ಯಾವ ಮರದಡಿಯನ್ನು ಸೇರಿದ್ದಾನೆ ಯಾವಾಗಲೂ ಸುಖವನ್ನು ಅನುಭವಿಸಿಕೊಂಡಿದ್ದ ಶ್ರೀರಾಮನು ದುಃಖದಿಂದ ಕೃಶನಾದನೆ ಶ್ರೇಷ್ಠವಾದ ಸುಪ್ಪತ್ತಿಗೆಯ ಮೇಲೆ ಮಲಗುತ್ತಿದ್ದ ಆ ರಾಜಕುಮಾರನು ನೆಲದ ಮೇಲೆ ಹೇಗೆ ಮಲಗುತ್ತಾನೆ ರಥ ಗಜ ತುರಗ ಕಾಲಾಳುಗಳೆಂಬ ಚತುರಂಗಬಲವು ಎರಡು ಕಡೆಯಲ್ಲಿಯೂ ಇಟ್ಟಣಿಸಿ ನಡೆಯಲು ಹೊರಗೆ ಹೊರಡುತ್ತಿದ್ದ ಶ್ರೀರಾಮನು ನಿರ್ಜನವಾದ ವನದಲ್ಲಿ ಏಕಾಂಗಿಯಾಗಿ ಹೇಗಿದ್ದಾನೆ ಅನೇಕ ದುಷ್ಟಮೃಗಗಳೂ ಹೆಬ್ಬಾವೂ ಕೃಷ್ಣ ಸರ್ಪಗಳೂ ಸಂಚರಿಸುವ ವನದಲ್ಲಿ ಸೀತಾಲಕ್ಷ್ಮಣಸಮೇತನಾಗಿ ಹೇಗಿದ್ದಾನೆ ಸುಕುಮಾರಾಂಗಿಯಾದ ಸೀತಾದೇವಿಯೂ ರಾಜಕುಮಾರರಾದ ರಾಮಲಕ್ಷ್ಮಣರೂ ಕಾಲುನಡೆಯಿಂದ ಹೇಗೆ ಸಂಚರಿಸುತ್ತಾರೆ ಎಲ್ಕೆ ಸುಮಂತ್ರನೆ, ಮಂದರ ಪರ್ವತದಲ್ಲಿ ಸಂಚರಿಸುವ ಅಶ್ವಿನೀದೇವತೆಗಳಂತೆ ವನದಲ್ಲಿ ಸಂಚರಿಸುವ ರಾಮಲಕ್ಷ್ಮಣರನ್ನು ಕಂಡು ನೀನು ಕೃತಾರ್ಥನಾದೆ. ವನವನ್ನೈದಿದ ಶ್ರೀರಾಮನು ಏನೆಂದು ಹೇಳಿದನು ಸೀತಾದೇವಿ ಏನೆಂದಳು ಅವರು ವಾಸಮಾಡುವುದು ಊಟಮಾಡುವುದು ನಿದ್ರೆಮಾಡುವುದು ಮೊದಲಾದ ವೃತ್ತಾಂಶಗಳನ್ನು ಹೇಳು. ಅವನ್ನು ಕೇಳಿಯಾದರೂ ಯಯಾತಿ ರಾಯನು ಸತ್ಪುರುಷರ ವೃತ್ತಾಂತವನ್ನು ಕೇಳಿ ಆನಂದದಿಂದ ಜೀವಿಸಿಕೊಂಡಿದ್ದಂತೆ ನಾನೂ ಜೀವಿಸಿಕೊಂಡಿರುತ್ತೇನೆ ಎಂದು ಹೇಳಿದನು.

**ಆಮೇಲೆ ಸುಮಂತ್ರನು ದಶರಥನನ್ನು ಕುರಿತು ಹೀಗೆಂದನು:** ಮಹಾರಾಜ, ಶ್ರೀರಾಮನು ನನ್ನ ಸಂಗಡ ಹೀಗೆ ಹೇಳಿದನು: ದಶರಥಮಹಾರಾಜನಿಗೆ ಧರ್ಮವನ್ನು ಪರಿಪಾಲಿಸಿಕೊಂಡಿರ ಹೇಳು. ನಾನು ಆತನಿಗೆ ಸಾಷ್ಟಾಂಗ ದಂಡಪ್ರಣಾಮವನ್ನು ಮಾಡಿದೆನೆಂದು ಹೇಳು. ಅಂತಃಪುರದಲ್ಲಿರುವವರೆಲ್ಲರಿಗೂ ಪ್ರತ್ಯೇಕವಾಗಿ ನಾನು ನಮಸ್ಕಾರಮಾಡಿದೆನೆಂದು ಹೇಳು. ನನ್ನ ತಾಯಿಯಾದ ಕೌಸಲ್ಯಾದೇವಿಗೆ ನಮಸ್ಕಾರ ಮಾಡಿದೆನೆಂದು ಹೇಳಿ ಆ ದೇವಿಯು ಧರ್ಮವನ್ನೇ ಪರಿಪಾಲಿಸಿಕೊಂಡು ಎರಡುಹೊತ್ತೂ ಮಹಾರಾಜನ ಅಗ್ನಿಹೋತ್ರಕ್ಕೆ ಸಹಾಯಮಾಡಿಕೊಂಡಿರಬೇಕೆಂದೂ ಸವತಿಯರಲ್ಲಿ ಮಾತ್ಸರ್ಯವಿಲ್ಲದಿರಬೇಕೆಂದೂ ಪೂಜ್ಯರಾದವರನ್ನು ಸನ್ಮಾನದಿಂದ ಕಾಣಬೇಕೆಂದೂ ಕೈಕೇಯ ದೇವಿಯಲ್ಲಿ ವಿನಯದಿಂದ ಇರಬೇಕೆಂದೂ ರಾಜ್ಯಾಧಿಪತ್ಯವನ್ನು ಮಾಡುವವನೇ ದೊಡ್ಡವನಾದ್ದರಿಂದ ಭರತನನ್ನು ಕಂಡರೆ ವಿನಯದಿಂದಿರಬೇಕೆಂದೂ ಆತನ ಮುಂದೆ ನನ್ನ ಗುಣಕಥನಗಳನ್ನು ಉತ್ಕೃಷ್ಟವಾಗಿ ಹೇಳಬಾರದೆಂದೂ ಹೇಳು. ಭರತನನ್ನು ಕುರಿತು ತನ್ನ ತಾಯಿಗಳೆಲ್ಲರನ್ನೂ ಸಮಾನವಾಗಿ ಕಾಣಬೇಕೆಂದೂ ಯುವರಾಜಪಟ್ಟವನ್ನು ಕಟ್ಟಿಕೊಂಡು ದಶರಥರಾಯನೇ ಅರಸವೆಂದು ರಾಜ್ಯವನ್ನು ಪರಿಪಾಲಿಸಬೇಕೆಂದೂ ದಶರಥರಾಯನು ವೃದ್ಧನೂ ಮನೋವ್ಯಥೆ ಯುಳ್ಳವನೂ ಆದ್ದರಿಂದ ಆತನನ್ನು ನೋಯಿಸಬಾರದೆಂದೂ ಹೇಳು. ಪುತ್ರಶೋಕದಿಂದ ಕಂಗೆಟ್ಟ ನನ್ನ ತಾಯಿಯಾದ ಕೌಸಲ್ಯಾದೇವಿಯನ್ನು ತನ್ನ ತಾಯಿಯಂತೆ ರಕ್ಷಣೆಮಾಡಬೇಕೆಂದೂ ಹೇಳು ಎಂದು ಎಲ್ಲರಿಗೂ ಹೇಳಿಕಳುಹಿಸಿ ಕಣ್ಣೀರು ಸುರಿಸಿದನು. ಆಮೇಲೆ ಲಕ್ಷ್ಮಣನು ನನ್ನನ್ನು ಕುರಿತು ದಶರಥರಾಯನು ಯಾವ ಅಪರಾಧವನ್ನು ಕಂಡು ಶ್ರೀರಾಮನನ್ನು ಹೊರಡಿಸಿದನು ಕೈಕೇಯಾದೇವಿಯ ಮಾತುಗಳನ್ನು ಕೇಳಿ ಆಕಾರವನ್ನು ಮಾಡಿ ನಮ್ಮನ್ನು ಹೊರಡಿಸಿದ್ದಾನೆ.

ಮುಂದುವರಿಯುವುದು...

# ಸನಾತನ ರಾಷ್ಟ್ರ ಶಂಖನಾದ ಮಹೋತ್ಸವದ ಸಿದ್ಧತೆ ಪೂರ್ಣ

• ಉದಯವಾಹಿನಿ ಫೊಂಡಾ (ಗೋವಾ)

ಯಾವ ರೀತಿ ಕುಂಭಮೇಳದಲ್ಲಿ ಲಕ್ಷಾಂತರ ಕೋಟ್ಯಂತರ ಭಕ್ತರು, ಸಂತ-ಮಹಂತರು ಒಟ್ಟಾಗಿ ಸೇರಿದ್ದರೋ, ಅದೇ ರೀತಿ ಗೋವಾದ ಪವಿತ್ರ ಭೂಮಿಯಲ್ಲಿ ಮೊದಲ ಬಾರಿಗೆ ಮೇ 17 ರಿಂದ 19 ರವರೆಗೆ ಒಂದು ದಿವ್ಯ ಆಧ್ಯಾತ್ಮಿಕ ಕುಂಭಮೇಳ ನಡೆಯಲಿದೆ - ಸನಾತನ ರಾಷ್ಟ್ರ ಶಂಖನಾದ ಮಹೋತ್ಸವ'! ಈ ಮಹೋತ್ಸವದಲ್ಲಿ 23 ದೇಶಗಳ ನಾಗರಿಕರು ಮತ್ತು ಸಂತ-ಮಹಂತರು, ಧರ್ಮಪ್ರೇಮಿ ಹಿಂದೂಗಳು, ಹಾಗೂ 25 ಸಾವಿರಕ್ಕೂ ಹೆಚ್ಚು ಭಕ್ತರು 4 ರಿಂದ 5 ದಿನಗಳ ಕಾಲ ವಾಸ್ತವ್ಯ ಮಾಡಲಿದ್ದು, ಸಂತರ ವಾಣಿಯ ಜ್ಞಾನಗಂಗೆ, ಒಂದು ಕೋಟಿ ರಾಮನಾಮ ಜಪಯಜ್ಞ, ಶಿವಾಜಿ ಕಾಲದ ಐತಿಹಾಸಿಕ ಶಸ್ತ್ರಾಸ್ತ್ರಗಳ ಪ್ರದರ್ಶನ, ವಿವಿಧ ಸಂತರ ಪವಿತ್ರ ಪಾದುಕೆಗಳು, ಒಂದು ಸಾವಿರ ವರ್ಷಗಳ ಹಿಂದಿನ ಸೌರಾಷ್ಟ್ರ ಸೋಮನಾಥ ಜ್ಯೋತಿರ್ಲಿಂಗದ ಅಪರೂಪದ ದರ್ಶನ ಮತ್ತು ಮಹಾ ಧನ್ವಂತರಿ ಯಾಗದಿಂದ ಶತಚಂಡಿ ಯಾಗದವರೆಗಿನ ಕಾರ್ಯಕ್ರಮಗಳು ಸೇರಿವೆ. ಮಹೋತ್ಸವದ ಎಲ್ಲಾ ಸಿದ್ಧತೆಗಳು ಪೂರ್ಣಗೊಳ್ಳುತ್ತಿದ್ದು, ಶೀಘ್ರದಲ್ಲೇ ಎಲ್ಲರಿಗೂ ಭಕ್ತಿ ಮತ್ತು ಶಕ್ತಿಯ ಸುಂದರ ಸಂಗಮವನ್ನು ಗೋವಾದಲ್ಲಿ ನೋಡಲು ಸಿಗಲಿದೆ ಎಂದು ಸನಾತನ ಸಂಸ್ಥೆಯ ವಕ್ತಾರರಾದ ಶ್ರೀ ಅಭಯ ವರ್ತಕ ಅವರು ತಿಳಿಸಿದರು. ಅವರು ಫರ್ಮಾಗುಡಿ, ಫೊಂಡಾ, ಗೋವಾದ ಇಂಜಿನಿಯರಿಂಗ ಮೈದಾನದಲ್ಲಿ ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿದ್ದರು.



ಉದಯವಾಹಿನಿ ಚಿತ್ರ

**ಶಂಖನಾದ ಮಹೋತ್ಸವದ ಜಾಗೃತಿ**

**ಗೋವಾದಾದ್ಯಂತ ಜಾಗೃತಿ ಮೂಡಿಸುವ ನೂರಾರು ಫ್ಲೆಕ್ಸ್ ಬ್ಯಾನರಗಳು, ವಿವಿಧ ವೃತ್ತಗಳಲ್ಲಿ ಇಡಲಾಗಿರುವ ಶಂಖನಾದ ಮಾಡುವ ಭಗವಾನ ಶ್ರೀಕೃಷ್ಣನ ಕಟ್ ಔಟ್‌ಗಳು, ವಿವಿಧ ಮಾರ್ಗಗಳಲ್ಲಿ ಸ್ವಾಗತ ಕಮಾನುಗಳು, ಸಾಧುಸಂತರ ಭಾವಚಿತ್ರಗಳ ಭವ್ಯ ಬ್ಯಾನರಗಳು, ಮಹೋತ್ಸವದ ಮುಖ್ಯ ದ್ವಾರದಲ್ಲಿ ದೇವಸ್ಥಾನದ ಆಕಾರದ ಭವ್ಯ ಕಮಾನು ಮುಂತಾದವು ಭಕ್ತಿಮಯ ವಾತಾವರಣ ನಿರ್ಮಾಣ ಮಾಡಿದೆ. ಮಹೋತ್ಸವದಲ್ಲಿ 38 ಅಡಿ ಎತ್ತರದ ಭವ್ಯ ಧರ್ಮಧ್ವಜವನ್ನು ಸ್ಥಾಪಿಸಲಾಗುವುದು.**

ಈ ಸಂದರ್ಭದಲ್ಲಿ, ಮಹೋತ್ಸವದ ಸಿದ್ಧತೆಗಳನ್ನು ಪರಿಶೀಲಿಸಿದ ನಂತರ ನಡೆದ ಪತ್ರಿಕಾಗೋಷ್ಠಿಯಲ್ಲಿ ಉದ್ಯಮಿ ಶ್ರೀ. ಜಯಂತ ಮಿರಿಂಗಕರ, ಗೋಮಂತಕ ದೇವಸ್ಥಾನ ಮಹಾಸಂಘದ ಕಾರ್ಯದರ್ಶಿ ಶ್ರೀ. ಜಯೇಶ ಥಳಿ, ಹಿಂದೂ ಜನಜಾಗೃತಿ ಸಮಿತಿಯ ಗೋವಾ ರಾಜ್ಯ ಸಂಘಟಕ ಶ್ರೀ. ಸತ್ಯವಿಜಯ ನಾಯಕ ಮತ್ತು ಶ್ರೀ. ಸುಚೇಂದ್ರ ಅಗ್ನಿ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಶ್ರೀ. ಅಭಯ ವರ್ತಕ ಅವರು ಮಾತನ್ನು ಮುಂದುವರಿಸಿ,

ಸನಾತನ ಧರ್ಮದ ವಿಶ್ವವ್ಯಾಪಿ ಕಾರ್ಯವನ್ನು ಮಾಡುವ ಸನಾತನ ಸಂಸ್ಥೆಯ ಸಂಸ್ಥಾಪಕರಾದ ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಬಾಳಾಜಿ ಆಠವಳೆ ಅವರ 83ನೇ ಜನ್ಮದಿನದ ಅಂಗವಾಗಿ ನಡೆಯುವ ಈ ಮಹೋತ್ಸವವು ರಾಮರಾಜ್ಯದ ಕಡೆಗಿನ ಒಂದು ಸಾಮೂಹಿಕ ಹೆಜ್ಜೆಯಾಗಿದೆ. ಈ ಮಹೋತ್ಸವದಿಂದ ಸಾಧಕರು ಮತ್ತು ಧರ್ಮಪ್ರೇಮಿ ಹಿಂದೂಗಳು ದೇವರು, ದೇಶ ಮತ್ತು ಧರ್ಮದ ರಕ್ಷಣೆಗಾಗಿ ಹೊಸ ಸಂಕಲ್ಪದೊಂದಿಗೆ ಕಾರ್ಯೋನ್ಮುಖರಾಗಲಿದ್ದಾರೆ.

**ಸನಾತನ ರಾಷ್ಟ್ರ ಶಂಖನಾದ ಮಹೋತ್ಸವದ ವೈಶಿಷ್ಟ್ಯಗಳು:** ಮಹೋತ್ಸವದ ವಿಸ್ತೀರ್ಣ 1 ಲಕ್ಷ 26 ಸಾವಿರ ಚದರ ಮೀಟರಗಳಷ್ಟಿದ್ದು, ಅದರಲ್ಲಿ 25 ಸಾವಿರ ಜನರಿಗೆ ಕುಳಿತುಕೊಳ್ಳಲು ಹವಾನಿಯಂತ್ರಿತ ಮಂಟಪದ ವ್ಯವಸ್ಥೆ ಮಾಡಲಾಗಿದೆ. ಒಂದೇ ಬಾರಿಗೆ 8 ಸಾವಿರ ಜನರ ಭೋಜನದ ವ್ಯವಸ್ಥೆ, ಸಾವಿರಾರು ವಾಹನಗಳಿಗೆ 17 ಪಾರ್ಕಿಂಗ್ ವಲಯಗಳು, ಭಕ್ತರಿಗಾಗಿ 350 ಶೌಚಾಲಯಗಳ ವ್ಯವಸ್ಥೆ ಮಾಡಲಾಗಿದೆ. ಅದರೊಂದಿಗೆ ಭವ್ಯ ಧಾರ್ಮಿಕ ಗ್ರಂಥ ಮಾರಾಟ ಕೇಂದ್ರ, ಗೋ-ಕಕ್ಷೆ, ಶ್ರೀ ಅನ್ನಪೂರ್ಣಾ ಕಕ್ಷೆ, ಗುರುಮಂದಿರ, 6 ಸಾವಿರ ಚದರ ಅಡಿ ವಿಸ್ತೀರ್ಣದ ಶಿವಾಜಿ ಕಾಲದ ಐತಿಹಾಸಿಕ ಶಸ್ತ್ರಾಸ್ತ್ರ ಪ್ರದರ್ಶನ, 15 ಸಂತರ ಪವಿತ್ರ ಪಾದುಕೆಗಳ ಕಕ್ಷೆ, ಒಂದು ಸಾವಿರ ವರ್ಷಗಳ ಹಿಂದಿನ ಸೌರಾಷ್ಟ್ರ ಸೋಮನಾಥ ಜ್ಯೋತಿರ್ಲಿಂಗದ ದರ್ಶನ ಕಕ್ಷೆ ಇರಲಿದೆ;

ಹಾಗೆಯೇ ಮಹೋತ್ಸವದಲ್ಲಿ ಸುರಕ್ಷತೆಗಾಗಿ ಪೊಲೀಸ್ ಗೋಪುರಗಳು, ಸಿಸಿಟಿವಿ, ಭದ್ರತಾ ಸಿಬ್ಬಂದಿ, ಅನೇಕ ಅಂಬ್ಯುಲೆನ್ಸಗಳು, ಬೈಕ್ ಅಂಬ್ಯುಲೆನ್ಸಗಳು; ಅಗ್ನಿಶಾಮಕ ದಳದ ವಾಹನಗಳು, ವೈದ್ಯಕೀಯ ಕೇಂದ್ರದಲ್ಲಿ 16 ವೈದ್ಯರು, ಸುಗಮ ನಿರ್ವಹಣೆಗಾಗಿ ಆಡಳಿತದ 25 ವಿಭಾಗಗಳಿಗೆ ಸ್ಥಳ, ಮಾಧ್ಯಮ ಪ್ರತಿನಿಧಿಗಳಿಗಾಗಿ ಕೊಠಡಿ, ಹಾಗೂ ಇತರ ಅಗತ್ಯ ಸೌಲಭ್ಯಗಳು ಇರಲಿವೆ. ಈ ಮಹೋತ್ಸವದಲ್ಲಿ ಸುರಕ್ಷತೆಯ ಕಾರಣದಿಂದಾಗಿ ಎಲ್ಲರಿಗೂ ಪ್ರವೇಶಕ್ಕಾಗಿ ಸರಕಾರದಿಂದ ಮಾನ್ಯತೆ ಪಡೆದ ಗುರುತಿನ ಚೀಟಿಯನ್ನು ತರುವುದು ಕಡ್ಡಾಯವಾಗಿದೆ. ಹಾಗೂ ಬರುವಾಗ ಬ್ಯಾಗಗಳನ್ನು ತರಬಾರದೆಂದು ವಿನಂತಿಸಲಾಗಿದೆ. ಈ ಕಾರ್ಯಕ್ರಮದ ನೇರ ಪ್ರಸಾರವನ್ನು ವೀಕ್ಷಿಸಲು ಮತ್ತು ಹೆಚ್ಚಿನ ಮಾಹಿತಿಗಾಗಿ Sanatan-RashtraShankhnad.in ಈ ಸಂಕೇತಸ್ಥಳಕ್ಕೆ ಭೇಟಿ ನೀಡಿರಿ.

● ಬಹು ನಿರೀಕ್ಷಿತ ಗದಗ– ತಳಕಲ್– ವಾಡಿ ರೈಲ್ವೆ ಯೋಜನೆಯ ಚಾಲನೆ ವಿಚಾರದಲ್ಲಿ ರಾಜಕೀಯ ಜಿದ್ದಾಜಿದ್ದಿ

# ಗದಗ- ತಳಕಲ್-ವಾಡಿ ರೈಲ್ವೆ ಉದ್ಘಾಟನೆಗೆ ಕಡೆಗೂ ಕುಷ್ಟಗಿ ಪಟ್ಟಣ ಆಯ್ಕೆ

• ಉದಯವಾಹಿನಿ ಕೊಪ್ಪಳ

ಬಹು ನಿರೀಕ್ಷಿತ ಗದಗ– ತಳಕಲ್– ವಾಡಿ ರೈಲ್ವೆ ಯೋಜನೆಯ ಚಾಲನೆ ವಿಚಾರದಲ್ಲಿ ರಾಜಕೀಯ ಜಿದ್ದಾಜಿದ್ದಿ ನಡೆದಿದೆ.

ಕುಷ್ಟಗಿವರೆಗೆ ಪೂರ್ಣಗೊಂಡಿರುವ ನೂತನ ರೈಲ್ವೆ ಮಾರ್ಗಕ್ಕೆ ಚಾಲನೆ ನೀಡಲಾಗುತ್ತಿದೆ. ಆದರೆ, ಕೇಂದ್ರ ಹಾಗೂ ರಾಜ್ಯ ಸರಕಾರದ ತಲಾ ಶೇ.50 ರ ಅನುದಾನದಲ್ಲಿ ನಿರ್ಮಿಸಲಾಗುತ್ತಿರುವ ಯೋಜನೆಯ ಕ್ರೆಡಿಟ್ ಪಡೆದುಕೊಳ್ಳಲು ಕಾಂಗ್ರೆಸ್ ಹಾಗೂ ಬಿಜೆಪಿ ತುದಿಗಾಲ ಮೇಲೆ ನಿಂತಿವೆ.

ಹೀಗಾಗಿ ರೈಲ್ವೆ ಚಾಲನೆ ವಿಚಾರ ಎರಡು ಪಕ್ಷಗಳಿಗೆ ರಾಜಕೀಯ ಪ್ರತಿಷ್ಠೆಯಾಗಿದ್ದು, ಯೋಜನೆಯ ಚಾಲನೆಗೆ ಸ್ಥಳ ಬದಲಾವಣೆಯ ಹಂತದವರೆಗೆ ಬಂದು ನಿಂತರೂ ಎರಡು ಪಕ್ಷಗಳ ನಡುವೆ ನಡೆಯುತ್ತಿರುವ ಆಂತರಿಕ ಹಾಗೂ ಬಹಿರಂಗ ತಿಕ್ಕಾಟ ಇನ್ನೂ ನಿಂತಿಲ್ಲ.

ಸಾಮಾಜಿಕ ಜಾಲತಾಣದಲ್ಲಿ ಎರಡು ಪಕ್ಷಗಳ ನಾಯಕರು, ಕಾರ್ಯಕರ್ತರು ಯೋಜನೆ ತಮ್ಮದೆ ಪಕ್ಷದ್ದೆಂದು ಬಿಂಬಿಸಿಕೊಳ್ಳುತ್ತಿದ್ದಾರೆ.

ಅಲ್ಲದೆ, ಇದು ಕಾರ್ಯಕ್ರಮದ ದಿನವಾದ ಕುಷ್ಟಗಿ ಪಟ್ಟಣದ ರೈಲ್ವೆ ನಿಲ್ದಾಣದ ವೇದಿಕೆ ಕಾರ್ಯಕ್ರಮ ರಾಜಕೀಯಗೊಳ್ಳುವ ಸನ್ನಿವೇಶಕ್ಕೆ ಸಾಕ್ಷಿಯಾಗಲಿದೆ.

**ಅಸಲಿಗೆ ಆಗಿದ್ದೇನು...?:**

ಸಿಎಂ ಆರ್ಥಿಕ ಸಲಹೆಗಾರ, ಕಾಂಗ್ರೆಸ್‌ನ ಬಸವರಾಜ ರಾಯರಡ್ಡಿ ಮೊದಲಿಗೆ ರೈಲ್ವೆ ಮಾರ್ಗದ ಚಾಲನೆಗೆ ಸಂಬಂಧಿಸಿದಂತೆ ಯಲಬುರ್ಗಾ ಪಟ್ಟಣದಲ್ಲಿ ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಕಾರ್ಯಕ್ರಮ ಉದ್ಘಾಟಿಸಲು ಕೇಂದ್ರ ರೈಲ್ವೆ ಸಚಿವರಿಗೆ ಪತ್ರ ಬರೆಸಿದ್ದರು. ಸ್ವಕ್ಷೇತ್ರದಲ್ಲಿ ಕಾರ್ಯಕ್ರಮ ಮಾಡಿಸುವ ಮೂಲಕ ಕೇಂದ್ರದ ಪಾಲಿರುವ ಯೋಜನೆಯ ಕ್ರೆಡಿಟ್ ಪಡೆದುಕೊಳ್ಳಲು ರಾಯರಡ್ಡಿ ಮುಂದಾಗುತ್ತಿದ್ದಂತೆ ಜಿಲ್ಲೆಯ ಬಿಜೆಪಿ ನಾಯಕರು ಅಲರ್ಟ್ ಆದರು.

ಪ್ರಮುಖವಾಗಿ ಸಿಎಂ, ರೈಲ್ವೆ ಸಚಿವರಿಗೆ ಪತ್ರ ಬರೆದು ಯಲಬುರ್ಗಾ ಪಟ್ಟಣದಲ್ಲಿ ರೈಲ್ವೆ ಯೋಜನೆಗೆ ಚಾಲನೆ ನೀಡಲು ಏಪ್ರಿಲ್ ತಿಂಗಳಲ್ಲಿ ದಿನಾಂಕ ನಿಗದಿ ಮಾಡುವಂತೆ ಒತ್ತಾಯಿಸಿರುವುದು ಬೆಳಕಿಗೆ ಬರುತ್ತಿದ್ದಂತೆಯೇ ಅಲರ್ಟ್ ಆದ ಕೇಂದ್ರ, ರಾಜ್ಯ ರೈಲ್ವೆ ಖಾತೆ ಸಚಿವ ಸೋಮಣ್ಣ ಅವರೊಂದಿಗೆ ನಿಕಟ ಸಂಪರ್ಕ ಹೊಂದಿರುವ ಕಳೆದ ಲೋಕಸಭಾ ಚುನಾವಣೆಯ ಪರಾಜಿತ ಅಭ್ಯರ್ಥಿ ಬಿಜೆಪಿಯ ಬಸವರಾಜ ಕ್ಯಾವಟರ್ ಅವರು ದಿಲ್ಲಿವರೆಗೆ ತೆರಳಿ ರೈಲ್ವೆ ಮಾರ್ಗದ ಕಾರ್ಯಕ್ರಮವನ್ನು ಕುಷ್ಟಗಿ ಪಟ್ಟಣಕ್ಕೆ ಶಿಫ್ಟ್ ಮಾಡಿಸುವಲ್ಲಿ ಶತ ಪ್ರಯತ್ನ ಪಟ್ಟಿದ್ದಾರೆ ಎಂಬುದು ಗುಟ್ಟಾಗಿ ಉಳಿದಿಲ್ಲ.

ಪ್ರಮುಖವಾಗಿ ಈ ಯೋಜನೆಗೆ ಚಾಲನೆ ಕೊಡಿಸುವ ಕಾರ್ಯಕ್ರಮ ತಳಕಲ್ ಗ್ರಾಮದಲ್ಲಿ ನಿಗದಿಯಾಗಿದ್ದರೇ ಬಿಜೆಪಿ ನಾಯಕರು ಅಷ್ಟೊಂದು ಪ್ರಬಲವಾಗಿ ವಿರೋಧಿಸುತ್ತಿರಲಿಲ್ಲ ಎನ್ನಲಾಗುತ್ತಿದೆ. ತಳಕಲ್‌ನಿಂದ ಕುಷ್ಟಗಿವರೆಗೆ ಪೂರ್ಣಗೊಂಡಿರುವ ರೈಲ್ವೆ ಮಾರ್ಗದ ಪೈಕಿ ಮಧ್ಯದ ಯಲಬುರ್ಗಾ ಪಟ್ಟಣದಲ್ಲಿ ರೈಲ್ವೆ ಮಾರ್ಗ ಚಾಲನೆ ನೀಡಲು ನಿಗದಿಪಡಿಸಿದ್ದಕ್ಕೆ ರಾಜಕೀಯ ತಿರುವು ಪಡೆಯಿತು.



ಉದಯವಾಹಿನಿ ಚಿತ್ರ

## ಕುಷ್ಟಗಿ ಹೊಸ ರೈಲು ಮಾರ್ಗದ ಉದ್ಘಾಟನೆ

**ನೈಋತ್ಯ ರೈಲ್ವೆ ವಿಭಾಗದ ಗದಗ (ತಳಕಲ್ಲ) ಕುಷ್ಟಗಿ ಹೊಸ ರೈಲು ಮಾರ್ಗದ ಉದ್ಘಾಟನೆ ಹಾಗೂ ರೈಲು ಸಂಖ್ಯೆ. 17323 ಕುಷ್ಟಗಿ–ಎಸ್.ಎಸ್.ಎಸ್. ಹುಬ್ಬಳ್ಳಿ ಪ್ಯಾಸೆಂಜರ್ ರೈಲಿಗೆ ಹಸಿರು ನಿಶಾನೆ ಕಾರ್ಯಕ್ರಮ ಕುಷ್ಟಗಿ ರೈಲು ನಿಲ್ದಾಣದಲ್ಲಿ ಆಯೋಜಿಸಲಾಗಿದೆ. ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಹಾಗೂ ರಾಜ್ಯ ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಸಚಿವ ಡಾ.ಎಂ.ಬಿ.ಪಾಟೀಲ್ ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡುವರು.**

## ಸಂಸದರಿದ್ದರೂ ಹಿನ್ನಡೆ

**ಜಿಲ್ಲೆಯ ಕೈ ಪಡೆಗೆ ತಮ್ಮ ಪಕ್ಷದ ಹಾಲಿ ಸಂಸದರಿದ್ದರೂ ಗದಗ- ವಾಡಿ ರೈಲ್ವೆ ಮಾರ್ಗದ ಚಾಲನೆ ಕೊಡಿಸುವ ಸ್ಥಳ ಆಯ್ಕೆ ವಿಚಾರದಲ್ಲಿ ಹಿನ್ನಡೆಯಾಗಿದೆ. ಸಂಸದ ರಾಜಶೇಖರ ಹಿಟ್ನಾಳ್ ಮುತುವರ್ಜಿ ವಹಿಸದೆ ಕೈ ಬಿಟ್ಟಿದ್ದರಿಂದ ಬಿಜೆಪಿಯ ಮುಖಂಡರ ಕೈ ಮೇಲಾಗಿದೆ ಎಂಬ ಮಾತುಗಳು ರಾಜಕೀಯ ವಲಯದಲ್ಲಿ ಕೇಳಿ ಬರುತ್ತಿವೆ. ಅಲ್ಲದೆ, ಬಸವರಾಜ ರಾಯರಡ್ಡಿ ಜಿಲ್ಲೆಯ ಬಿಜೆಪಿಯ ಜನಪ್ರತಿನಿಧಿಗಳೊಂದಿಗೆ ಸಂವಹನ ನಡೆಸಿ, ಕಾರ್ಯಕ್ರಮ ಸ್ಥಳ ನಿಗದಿಗೆ ಪ್ರಯತ್ನ ಪಟ್ಟರೇ ಇಷ್ಟೊಂದು ವಿವಾದ ರೂಪ ಪಡೆಯುತ್ತಿರಲಿಲ್ಲ. ಆದರೆ, ರಾಯರಡ್ಡಿ ಅವರು ಕೂಡ ಏಕಪಕ್ಷೀಯ ವರ್ತನೆ ಕೊನೆಗೆ ಬಿಜೆಪಿ ನಾಯಕರ ಒಣ ಪ್ರತಿಷ್ಠೆಗೆ ಕಾರಣವಾಗಿದ್ದು, ಕೇಂದ್ರದಲ್ಲಿ ತಮ್ಮದೇ ಸರಕಾರವಿರುವುದರಿಂದ ಜಿದ್ದಿಗೆ ಬಿದ್ದು ಕುಷ್ಟಗಿ ಪಟ್ಟಣದಲ್ಲಿ ಕಾರ್ಯಕ್ರಮ ನಿಗದಿಪಡಿಸುವಲ್ಲಿ ಯಶಸ್ಸು ಕಂಡಿದ್ದಾರೆ ಎಂಬ ಮಾತುಗಳು ಕೇಳಿ ಬಂದಿವೆ.**

**ಬಿಜೆಪಿ- ಕಾಂಗ್ರೆಸ್‌ಗೆ ರೈಲು ಪ್ರತಿಷ್ಠೆ**

# ಪಾಕ್‌ನಿಂದ ಕಲ್ಲುಪ್ಪು ಆಮದು ಬಂದ್ : ಭಾರತದಲ್ಲಿ ದರ 3ಪಟ್ಟು ಏರಿಕೆ

• ಉದಯವಾಹಿನಿ ಉಡುಪಿ

ಭಾರತದ ಜತೆಗಿನ ಸಂಬಂಧಕ್ಕೆ ಪಾಕಿಸ್ತಾನವೇ ಸ್ವಯಂ ಕಲ್ಲುಹಾಕಿಕೊಂಡಿದ್ದು, ಇತ್ತೀಚಿನ ಪಹಲ್ಗಾಮ್ ದಾಳಿ ಹಿನ್ನೆಲೆಯಲ್ಲಿ ವಾಣಿಜ್ಯ ವ್ಯವಹಾರ ಸ್ಥಗಿತವಾಗಿರುವುದರಿಂದ ಪಾಕ್‌ನಿಂದ ಕಲ್ಲುಪ್ಪು ಆಮದು ಬಂದ್ ಆಗಿದೆ. ಭಾರತದಲ್ಲಿ ಕಲ್ಲುಪ್ಪು ಉತ್ಪಾದನೆ ವಿರಳವಾಗಿದ್ದು, ವರ್ಷಕ್ಕೆ 10 ಸಾವಿರ ಟನ್ ಉತ್ಪಾದನೆ ಆಗುತ್ತದೆ. ಹೀಗಾಗಿ ಪಾಕಿಸ್ತಾನದಲ್ಲಿ ಅತ್ಯಂತ ಶುದ್ಧವಾಗಿರುವ, 84ಕ್ಕೂ ಹೆಚ್ಚು ಖನಿಜಗಳಿಂದ ಕೂಡಿರುವ ಕಲ್ಲುಪ್ಪು/ಸೈಂಧವ ಲವಣವನ್ನು ಆಮದು ಮಾಡಿಕೊಳ್ಳಲಾಗುತ್ತಿತ್ತು.

ಭಾರತದಲ್ಲಿ ಪ್ರತಿ ಕೆ.ಜಿ ಕಲ್ಲುಪ್ಪಿಗೆ 50ರಿಂದ 60 ರೂ. ಇತ್ತು. ಆಮದು ಬಂದ್ ಆಗಿರುವುದರಿಂದ ದರ 150 ರೂ.ಗೆ ಏರಿದೆ. 2024ರಲ್ಲಿ ಪಾಕ್‌ನಿಂದ 624 ಮೆಟ್ರಿಕ್ ಟನ್ ಕಲ್ಲುಪ್ಪು ಆಮದು ಮಾಡಿಕೊಳ್ಳಲಾಗಿತ್ತು. ಭಾರತದಲ್ಲಿ ವಾರ್ಷಿಕ 3 ಕೋಟಿ ಟನ್ ಸಮುದ್ರದ ಉಪ್ಪು ಉತ್ಪಾದನೆ ಮಾಡಲಾಗುತ್ತಿದೆ. ಇದನ್ನು ಶುದ್ಧೀಕರಿಸಿ ಕಲ್ಲುಪ್ಪಿನ ಗುಣಮಟ್ಟಕ್ಕೆ ತರುವ ಯತ್ನವೂ ನಡೆಯುತ್ತಿದೆ.



ಉದಯವಾಹಿನಿ ಚಿತ್ರ

2016ರಲ್ಲಿ ಉರಿ ದಾಳಿ (19 ಸೈನಿಕರ ಮರಣ), 2019ರಲ್ಲಿ ಪುಲ್ವಾಮಾ ದಾಳಿ (40 ಸಿಆರ್‌ಪಿಎಫ್ ಯೋಧರು ಹುತಾತ್ಮ) ಹಿನ್ನೆಲೆಯಲ್ಲಿ ಪಾಕಿಸ್ತಾನಕ್ಕೆ ನೀಡಿದ್ದ ಆಪ್ತ ರಾಷ್ಟ್ರದ ಸ್ಥಾನಮಾನವನ್ನು ಭಾರತ ಹಿಂತೆಗೆದುಕೊಂಡಿತ್ತು. ಪಾಕಿಸ್ತಾನದಿಂದ ಆಮದಾಗುವ ಕಲ್ಲುಪ್ಪು/ಸೈಂಧವ ಲವಣದ ಮೇಲೆ ಶೇ.200 ಅಬಕಾರಿ ಸುಂಕವನ್ನು ಭಾರತ ವಿಧಿಸಿತ್ತು. ಬಳಿಕ ಆಮದು ಪ್ರಮಾಣ ಕುಸಿದಿತ್ತು.

ಪಾಕಿಸ್ತಾನದ ಪಂಜಾಬ್ ಪ್ರದೇಶದಲ್ಲಿರುವ ಪ್ರಸಿದ್ಧ ಖೇವ್ರಾ ಉಪ್ಪು ಗುಹೆಗಳಿಂದ ವಿಶ್ವಪ್ರಸಿದ್ಧ ಹಿಮಾಲಯನ್ ಪಿಂಕ್ ಸಾಲ್ಟ್/ ಕಲ್ಲುಪ್ಪನ್ನು ಹೊರತೆಗೆಯಲಾಗುತ್ತಿದೆ. ಈಗ ಆಮದು ಸಂಪೂರ್ಣ ಬಂದ್ ಕಲ್ಲುಪ್ಪು/ಸೈಂಧವ ಲವಣವನ್ನು ಯುಎಇ, ಮಲೇಷ್ಯಾ, ಇರಾನ್, ಆಸ್ಟ್ರೇಲಿಯಾ, ಅಫಘಾನಿಸ್ತಾನ ಮತ್ತಿತರ ರಾಷ್ಟ್ರಗಳಿಂದ ಆಮದು ಮಾಡುವುದು ಅನಿವಾರ್ಯವಾಗಿದೆ. ದೇಶೀಯ ಉಪ್ಪು ಗಣಿಗಳ ಅಭಿವೃದ್ಧಿ, ಪರ್ಯಾಯ ಆಮದು ಮೂಲಗಳ ಹುಡುಕಾಟ, ಹೊಸ ತಂತ್ರಜ್ಞಾನಗಳ ಅಗತ್ಯ ಪಾಕ್ ಜತೆಗಿನ ಯುದ್ಧ ಸನ್ನದ್ಧ ಸ್ಥಿತಿಯ ಹಿನ್ನೆಲೆಯಲ್ಲಿ ಅನಿವಾರ್ಯವಾಗಿದೆ. ಉಪ್ಪಿಗಾಗಿ ಪಾಕ್ ರಾಷ್ಟ್ರದ ಮುಂದೆ ಕೈಚಾಚದೆ ಸ್ವಾವಲಂಬನೆಯ ಹಾದಿ ಹುಡುಕಬೇಕು ಎಂದಿದ್ದಾರೆ ಪ್ರೊ.ಕೊಕ್ಕರ್ಣೆ ಸುರೇಂದ್ರನಾಥ ಶೆಟ್ಟಿ, ಅಂತಾರಾಷ್ಟ್ರೀಯ ರಾಜಕೀಯ ವಿಶ್ಲೇಷಕ,ಉಡುಪಿ.

- **ಸಂಬಂಧಕ್ಕೆ ಕಲ್ಲು, ಗಾಯಕ್ಕೆ ಉಪ್ಪು**
- **ಭಾರತದಲ್ಲಿ ಪ್ರತಿ ಕೆ.ಜಿ ಕಲ್ಲುಪ್ಪಿಗೆ 50ರಿಂದ 60 ರೂ. ಇತ್ತು. ಆಮದು ಬಂದ್ ಆಗಿರುವುದರಿಂದ ದರ 150 ರೂ.ಗೆ ಏರಿದೆ**
- **ದೇಶೀಯ ಉಪ್ಪು ಗಣಿಗಳ ಅಭಿವೃದ್ಧಿ, ಪರ್ಯಾಯ ಆಮದು ಮೂಲಗಳ ಹುಡುಕಾಟ**

# ನರೇಗಾ ಕೆಲಸ ನೀಡಲು ನಿರಾಕರಿಸಿದರೆ ಗಮನಕ್ಕೆ ತನ್ನಿ

• ಉದಯವಾಹಿನಿ ಹುಮನಾಬಾದ್

ಗ್ರಾಮೀಣ ಪ್ರದೇಶದ ಜನರಿಗೆ ತಮ್ಮ ಊರಿನಲ್ಲಿ ಒಂದು ವರ್ಷದಲ್ಲಿ 100 ದಿನ ಕೆಲಸ ನೀಡಿ ಕುಟುಂಬ ನಿರ್ವಹಣೆಗೆ ಅನುಕೂಲ ಮಾಡಿಕೊಡುವುದು ಉದ್ಯೋಗ ಖಾತ್ರಿ ಯೋಜನೆ ಗುರಿಯಾಗಿದೆ ಎಂದು ತಾಲ್ಲೂಕು ಪಂಚಾಯತ ಕಾರ್ಯನಿರ್ವಹಕ ಅಧಿಕಾರಿ ದಿಪೀಕಾ ನಾಯಕ್ ತಿಳಿಸಿದರು.

ತಾಲ್ಲೂಕಿನ ಚಂದನಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುವ ಸೋನಕೇರಾ ಗ್ರಾಮದಲ್ಲಿ ನರೇಗಾ ಯೋಜನೆಯಡಿಯಲ್ಲಿ ನಡೆಯುತ್ತಿರುವ ಕಾಮಗಾರಿ ಸ್ಥಳದಲ್ಲಿ ದುಡಿಯೋಣ ಬಾ ಅಭಿಯಾನ, ಕಾಯಕ ಮಾಸಾಚಾರಣೆ ಮತ್ತು ಆರೋಗ್ಯ ಶಿಬಿರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು

ತಾಲ್ಲೂಕಿನ ಯಾವುದೇ ಗ್ರಾಮ ಪಂಚಾಯಿತಿಯಲ್ಲಿ ನರೇಗಾ ಯೋಜನೆಯಡಿ ಕೆಲಸ ಕೇಳಿದ 15 ದಿನದೊಳಗೆ ಕೆಲಸ ನೀಡಲು ಅಯಾ ಗ್ರಾಮ ಪಂಚಾಯಿತಿ ಅಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳಬೇಕು. ಸಂಬಂಧಪಟ್ಟ ಗ್ರಾಮ ಪಂಚಾಯತಿ ಸಿಬ್ಬಂದಿಯವರು ಈ ಬಗ್ಗೆ ನಿರಾಕರಿಸಿದ್ದರೆ ನಮ್ಮ ಗಮನಕ್ಕೆ ತನ್ನಿ ಎಂದು ಹೇಳಿದರು. ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿ ಗ್ರಾಮ ಪಂಚಾಯಿತಿಯಲ್ಲೂ ಕೂಡ ಮಹಿಳೆಯರು ಭಾಗಿಯಾಗಿ ನರೇಗಾ ಯೋಜನೆಯಡಿ ಕೆಲಸ ಮಾಡುತ್ತಿರುವುದು ಸಂತಸದ ವಿಷಯ ಹಾಗಾಗಿ ನಾವು ಆರೋಗ್ಯ ಲೆಕ್ಕಿಸದೆ ದುಡಿಯುತ್ತೇವೆ.

ಆದರೆ ಅರೋಗ್ಯ ಕೈಕೊಟ್ಟಾಗ ದುಡಿದ ಹಣ ಒಯ್ದು ಸುರಿಯುತ್ತೇವೆ. ಅಧಿಕ ರಕ್ತದೊತ್ತಡ, ಸಕ್ಕರೆ ಕಾಯಿಲೆ, ಹೃದಯಾಘಾತದಂತಹ ರೋಗಗಳು ಹೆಚ್ಚುತ್ತಿವೆ. ಆರೋಗ್ಯದತ್ತ ಪ್ರತಿಯೊಬ್ಬರೂ ಕಾಳಜಿ ವಹಿಸಬೇಕು ಎಂದರು.

ಗ್ರಾಮ ಪಂಚಾಯಿತಿ ಅಧ್ಯಕ್ಷ ಮಂಗಲಾ ಮೇತ್ರೆ, ಗ್ರಾ.ಪಂ ಸದಸ್ಯರುಗಳಾದ ವಿಶ್ವನಾಥ ಕಾಡಗೊಂಡ, ರಾಜಕುಮಾರ ಸಂಗ್ರಾಮ ಇದ್ದರು.



ಉದಯವಾಹಿನಿ ಚಿತ್ರ

# 371(ಜೆ) ಕಲಂ ಜಾರಿ ಕುರಿತು ಸಮಾಲೋಚನೆ

• ಉದಯವಾಹಿನಿ ಕಲಬುರಗಿ

ಕಲ್ಯಾಣ ಕರ್ನಾಟಕ ಹೋರಾಟ ಸಮಿತಿಯ ಪ್ರಮುಖರಾದ ಬಸವರಾಜ್ ದೇಶಮುಖ್, ಡಾ. ಲಕ್ಷ್ಮಣ್ ದಸ್ತಿ, ಆರ್.ಕೆ. ಹುಡಗಿ ಅವರೂ ಸೇರಿದಂತೆ, ಸಮಿತಿಯ ಮುಖಂಡರು ಜಿಲ್ಲಾ ಉಸ್ತುವಾರಿ ಸಚಿವ ಮತ್ತು 371ನೇ(ಜೆ) ಕಲಂ ಅನುಷ್ಠಾನ ಸಮಿತಿಯ ಅಧ್ಯಕ್ಷ ಪ್ರಿಯಾಂಕ್ ಖರ್ಗೆಯವರಿಗೆ ಭೇಟಿ ಮಾಡಿ 371ನೇ(ಜೆ) ಕಲಂ ವಿಶೇಷ ಸ್ಥಾನಮಾನ ಜಾರಿ ಕುರಿತು ಸಮಾಲೋಚನೆ ಮಾಡಿದರು.

371(ಜೆ) ಮೀಸಲಾತಿ ಸೌಲಭ್ಯ 10 ವರ್ಷ ಗತಿಸಿರುವ ಹಿನ್ನಲೆಯಲ್ಲಿ ಸಾಧನೆ, ಸಮಸ್ಯೆ, ಸವಾಲುಗಳು ಮತ್ತು ಪರಿಹಾರದ ಕುರಿತು ಕಲ್ಯಾಣ ಕರ್ನಾಟಕ ಹೋರಾಟ ಸಮಿತಿ ಪಕ್ಷಾತೀತವಾಗಿ ಶುದ್ಧ ರಾಜಕೀಯೇತರ ತಳಹದಿಯ ಮೇಲೆ 371ನೇ(ಜೆ) ಕಲಂ ದಶಮಾನೋತ್ಸವ ಆಚರಣೆಗೆ ಸಂಬಂಧಿಸಿ ಕಳೆದ ಏಪ್ರಿಲ್ 19 ರಂದು ಶಿಕ್ಷಣ ಸಂಸ್ಥೆಗಳ, ವಿಶ್ವವಿದ್ಯಾಲಯಗಳ, ಕಾಲೇಜುಗಳ ಮತ್ತು ಆಯಾ ಕ್ಷೇತ್ರದ ಗಣ್ಯರ ಸಭೆಯಲ್ಲಿ ನಿರ್ಣಯ ಕೈಗೊಂಡಿರುವಂತೆ ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳಲ್ಲಿ ಬೃಹತ್ ಪ್ರಮಾಣದಲ್ಲಿ ವಿಚಾರ ಸಂಕಿರಣಗಳು, ಕಾರ್ಯಾಗಾರವನ್ನು ನಡೆಸುವ ಬಗ್ಗೆ ವಿವರವಾಗಿ ಚರ್ಚಿಸಿ ಕಾರ್ಯಕ್ರಮಗಳಿಗೆ ಸ್ಪಂದಿಸಿ ಭಾಗವಹಿಸಲು ಹೋರಾಟ ಸಮಿತಿ ಸಚಿವರವಾಗಿ ಮನವರಿಕೆ ಮಾಡಿ ಕಾರ್ಯಕ್ರಮದ ರೂಪರೇಷೆಗಳ ಪತ್ರವನ್ನು ಅವರು ಸಲ್ಲಿಸಿದರು.



ಉದಯವಾಹಿನಿ ಚಿತ್ರ

# ಗೋಶಾಲೆ ನಿರ್ವಹಣೆಗಿಲ್ಲ ಅನುದಾನ

• ಉದಯವಾಹಿನಿ ಶಿರಸಿ

ಬಿಡಾಡಿ, ಅನಾಥ ಹಾಗೂ ವಧಾಲಯಗಳಿಗೆ ಸಾಗಿಸುವ ವೇಳೆ ರಕ್ಷಿಸಿದ ಜಾನುವಾರುಗಳ ಪಾಲನೆಗಾಗಿ ತಾಲ್ಲೂಕಿನ ಅಜ್ಜಿಬಳದಲ್ಲಿ ವರ್ಷದ ಹಿಂದೆ ಗೋಶಾಲೆ ನಿರ್ಮಿಸಲಾಗಿದ್ದು, ಇನ್ನೂ ಉದ್ಘಾಟನೆಗೊಂಡಿಲ್ಲ. ಗೋಶಾಲೆ ನಿರ್ವಹಣೆಗೆ ಅನುದಾನ ಬಿಡುಗಡೆಯಾಗದ ಕಾರಣ ನೂತನ ಕಟ್ಟಡ ವ್ಯರ್ಥವಾಗಿದೆ. ಈ ಹಿಂದಿನ ಸರ್ಕಾರವು, ಜಾನುವಾರುಗಳಿಗೆ ಆಶ್ರಯ ನೀಡಲು ಪ್ರತಿ ತಾಲ್ಲೂಕಿನಲ್ಲಿ ಗೋಶಾಲೆ ನಿರ್ಮಿಸಲು ಮುಂದಾಗಿತ್ತು. ಅದರಂತೆ, ಶಿರಸಿ ತಾಲ್ಲೂಕಿನ ಅಜ್ಜಿಬಳದಲ್ಲಿ ಸುಮಾರು 7 ಎಕರೆ ಜಾಗ ಗುರುತಿಸಿ, 50 ಲಕ್ಷ ಅನುದಾನದಲ್ಲಿ ಗೋಶಾಲೆ ಕಟ್ಟಡ ನಿರ್ಮಿಸಲಾಗಿದೆ.

ಈ ಗೋಶಾಲೆಯಲ್ಲಿ ಗರಿಷ್ಠ 100 ಗೋವುಗಳಿಗೆ ಆಶ್ರಯ ನೀಡಬಹುದಾಗಿದೆ. ಗೋವುಗಳಿಗೆ ಮೇವು ಒದಗಿಸಲು ಹುಲ್ಲುಗಾವಲು, ಬೇಲಿ ವ್ಯವಸ್ಥೆ, 50,000 ಲೀಟರ್ ಸಾಮರ್ಥ್ಯದ ಟ್ಯಾಂಕ್, ವಿದ್ಯುತ್, ಬೋರ್‌ವೆಲ್‌ಗಳ ಮೂಲಕ ನೀರಿನ ವ್ಯವಸ್ಥೆ, ಗೋಕಟ್ಟೆಗಳ ನಿರ್ಮಾಣ, ಮೇವು ಸಂಗ್ರಹಣಾ ಗೋದಾಮು, ಪಶು ವೈದ್ಯಾಧಿಕಾರಿಗಳ ವಸತಿ ಗೃಹ ಕಾಮಗಾರಿ ಮುಕ್ತಾಯಗೊಂಡು ವರ್ಷ ಕಳೆದಿದೆ. ಇಲ್ಲಿ ಜಾನುವಾರುಗಳನ್ನು ಇರಿಸಿ, ನಿರ್ವಹಣೆ ಮಾಡಲು ಸರ್ಕಾರದಿಂದ ಅನುದಾನ ಬಿಡುಗಡೆಯಾಗಿಲ್ಲ. ಈ ಕಾರಣದಿಂದಲೇ ಇಲಾಖೆ ಅಧಿಕಾರಿಗಳು ಗೋಶಾಲೆಯನ್ನು ಈವರೆಗೂ ಉದ್ಘಾಟನೆ ಮಾಡಿಲ್ಲ. 'ಅಜ್ಜಿಬಳದಲ್ಲಿ ನಿರ್ಮಿಸಿದ ಗೋಶಾಲೆಯಲ್ಲಿ ಗರಿಷ್ಠ 100 ಜಾನುವಾರುಗಳಿಗೆ ಆಶ್ರಯ ಒದಗಿಸಲು ಅವಕಾಶವಿದೆ.

ಪ್ರತಿ ತಿಂಗಳ ನಿರ್ವಹಣೆಗೆ ಕನಿಷ್ಠ 5ರಿಂದ 6 ಲಕ್ಷ ಬೇಕಾಗುತ್ತದೆ. ಅನುದಾನ ಬಿಡುಗಡೆ ಮಾಡುವಂತೆ ಇಲಾಖೆ ಹಾಗೂ ಸರ್ಕಾರಕ್ಕೆ ಎರಡು ಬಾರಿ ಪ್ರಸ್ತಾವ ಸಲ್ಲಿಸಲಾಗಿದ್ದು, ಅನುದಾನ ಲಭ್ಯವಿಲ್ಲ ಎಂಬುದಾಗಿ ತಿಳಿಸಿದ್ದಾರೆ' ಎಂದು ಪಶುಪಾಲನೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.




ಉದಯವಾಹಿನಿ ಚಿತ್ರ

## ಅನುದಾನ ಲಭ್ಯವಾಗುವ ವಿಶ್ವಾಸ

**'ಸರ್ಕಾರದ ನಿಯಮದ ಪ್ರಕಾರ ಗೋಶಾಲೆಯಲ್ಲಿ ಆಶ್ರಯ ಪಡೆಯುವ ಗೋವುಗಳು ಬಿಡಾಡಿ ಗೋವುಗಳಾಗಿರಬೇಕು. ಅಕ್ರಮವಾಗಿ ಸಾಗಿಸುವಾಗ ಪೊಲೀಸರು ವಶಪಡಿಸಿಕೊಂಡ ಗೋವುಗಳು, ಅಶಕ್ತ ಗೋವುಗಳು ಅಥವಾ ಗೋವನ್ನು ಸಾಕಲು ಸಾಧ್ಯವಿಲ್ಲವೆಂದಾಗ ನಿಯೋಜಿತ ಸಮಿತಿ ಶಿಫಾರಸು ನೀಡಿದರೆ ಅಂತಹವುಗಳನ್ನು ಇಲ್ಲಿಗೆ ಕಳುಹಿಸಬಹುದು ಪಶು ವೈದ್ಯಕೀಯ ಸೇವಾ ಇಲಾಖೆಯ ಹಿರಿಯ ಅಧಿಕಾರಿ ಹೇಳಿದರು.**

# 18ರಂದು 46 ಜೋಡಿಗಳ ಉಚಿತ ಸಾಮೂಹಿಕ ವಿವಾಹ

• ಉದಯವಾಹಿನಿ ಮುದ್ದೇಬಿಹಾಳ

ಅಹಿಲ್ಯಾದೇವಿ ಹೋಳ್ಕರ್ ಶಿಕ್ಷಣ ಸಂಸ್ಥೆಯ ನಿರ್ದೇಶಕರಾಗಿರುವ ಜೇಷ್ಠ ಪುತ್ರ ಕಿರಣ್, ಶ್ರದ್ಧಾ ಅವರ ಕಲ್ಯಾಣೋತ್ಸವ ಅಂಗವಾಗಿ ಅಭ್ಯುದಯ ಸೈನ್ಸ್ ಪಿಯು ಕಾಲೇಜು ಮೈದಾನದಲ್ಲಿ ಮೇ 18 ರಂದು ಮಧ್ಯಾಹ್ನ 12.25 ಗಂಟೆಗೆ 46 ಜೋಡಿಗಳ ಉಚಿತ ಸಾಮೂಹಿಕ ವಿವಾಹ ಏರ್ಪಡಿಸಲಾಗಿದೆ. ನಾಡಿನ ಮಠಾಧೀಶರು, ರಾಜಕೀಯ ಮುಖಂಡರು ಸೇರಿದಂತೆ 40000ಕ್ಕೂ ಹೆಚ್ಚು ಜನ ಸೇರುವ ನಿರೀಕ್ಷೆ ಇದೆ ಎಂದು ಸಂಸ್ಥೆಯ ಸಂಸ್ಥಾಪಕ ಕಾರ್ಯದರ್ಶಿ, ತಾಲ್ಲೂಕು ಕುರುಬರ ಸಂಘದ ಅಧ್ಯಕ್ಷ ಎಂ.ಎನ್.ಮದರಿ ತಿಳಿಸಿದರು.

ಕಾಲೇಜು ಆವರಣದಲ್ಲಿ ಗುರುವಾರ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು, ಸ್ವಗ್ರಾಮ ಮುದ್ದೇಬಿಹಾಳ ತಾಲ್ಲೂಕಿನ ಖಿಲಾರಹಟ್ಟಿಯಲ್ಲಿ ಕಳೆದ 15 ವರ್ಷಗಳಿಂದ ಪ್ರತಿ ವರ್ಷ ಯುಗಾದಿ ಜಾತ್ರೆಯಂದು ನಮ್ಮ ತಂದೆ ನೀಲಕಂಠಪ್ಪ, ತಾಯಿ ಮಲ್ಲಮ್ಮ ಅವರ ಸದಿಚ್ಛೆಯ ಮೇರೆಗೆ ನಮ್ಮ ಕುಟುಂಬದಿಂದ ಉಚಿತ ಸಾಮೂಹಿಕ ವಿವಾಹ ನಡೆಸಿಕೊಂಡು ಬರಲಾಗುತ್ತಿದೆ.

ಇಲ್ಲೀವರೆಗೂ ಅಂದಾಜು 700 ಜೋಡಿಗಳ ದಾಂಪತ್ಯ ಜೀವನಕ್ಕೆ ಅನುವು ಮಾಡಿಕೊಡಲಾಗಿದೆ. ಈ ವರ್ಷ ಮಗನ ಮದುವೆ ಇದ್ದ ಕಾರಣ ಯುಗಾದಿ ಜಾತ್ರೆಯಲ್ಲಿ ಸಾಮೂಹಿಕ ವಿವಾಹ ಹಮ್ಮಿಕೊಳ್ಳಲಿಲ್ಲ. ಅದರ ಬದಲು ಈಗ ಹಮ್ಮಿಕೊಳ್ಳಲಾಗುತ್ತಿದೆ. ವಧು ವರರಿಗೆ ಎರಡು ಜೊತೆ ಬಟ್ಟೆ, ತಾಳಿ, ಕಾಲುಂಗುರ ಸೇರಿ ಮದುವೆಗೆ ಅಗತ್ಯವಾದ ಎಲ್ಲಾ ಸಾಮಗ್ರಿಗಳನ್ನು ಉಚಿತವಾಗಿ ನೀಡುತ್ತೇವೆ. ಈ ಮದುವೆಗೆ ಹಿಂದುಳಿದ ವರ್ಗದವರೇ ಹೆಚ್ಚಿನ ಸಂಖ್ಯೆಯಲ್ಲಿ ಹೆಸರು ನೋಂದಾಯಿಸಿದ್ದಾರೆ ಎಂದರು.

ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠದ ಜಗದ್ಗುರು ನಿರಂಜನಾನಂದಪುರಿ ಮಹಾಸ್ವಾಮೀಜಿ, ಸಿದ್ದರಮಾನಂದಪುರಿ ಮಹಾ ಸ್ವಾಮೀಜಿ, ಕೂಡಲಸಂಗಮದ ಜಗದ್ಗುರು ಬಸವಜಯ ಮೃತ್ಯುಂಜಯ ಸ್ವಾಮೀಜಿ, ತಾಳಿಕೋಟೆಯ ಖಾಸ್ಗತೇಶ್ವರ ಮಠದ ಸಿದ್ಧಲಿಂಗ ದೇವರು, ಅಡವಿಲಿಂಗ ಮಹಾರಾಜರು, ಗೊಳಸಾರ ಸ್ವಾಮೀಜಿ ಸೇರಿ ವಿವಿಧ ಮಠಾಧೀಶರು ನವದಂಪತಿಗಳನ್ನು ಆಶೀರ್ವದಿಸಲು ಆಗಮಿಸಲಿದ್ದಾರೆ ಎಂದರು. ಸಾಮೂಹಿಕ ವಿವಾಹದ ವೇದಿಕೆಯಲ್ಲಿ ಯಾವುದೆ ಸಭೆ, ರಾಜಕೀಯ ಭಾಷಣ ಇರುವುದಿಲ್ಲ. ಕಿರಣ್, ಶ್ರದ್ಧಾ ಅವರೊಂದಿಗೆ ಸಮಾನಾಂತರ ಉತ್ತರಮುಖಿ ವೇದಿಕೆಯಲ್ಲಿ ಎಲ್ಲಾ ನವದಂಪತಿಗಳನ್ನು ಒಂದೆಡೆ ಕೂಡಿಸಲಾಗುತ್ತದೆ. ಕಿರಣ್, ಶ್ರದ್ಧಾ ಅವರನ್ನು ಹರಸಿ ಆಶೀರ್ವದಿಸುವ ಎಲ್ಲಾ ಪೂಜ್ಯರು, ಗಣ್ಯರು, ಬಂಧುಗಳು ಇತರೆ ನವದಂಪತಿಗಳನ್ನೂ ಹರಸಿ, ಆಶೀರ್ವದಿಸಲು ಅವಕಾಶ ಮಾಡಿಕೊಡಲಾಗಿದೆ. ಮೇಲು, ಕೀಳು ಎನ್ನದೆ ಎಲ್ಲಾ ನವದಂಪತಿಗಳನ್ನು ಒಂದೇ ದೃಷ್ಟಿಯಲ್ಲಿ ನೋಡಲಾಗುತ್ತದೆ. ನಲವತ್ತು ಸಾವಿರಕ್ಕೂ ಅಧಿಕ ಜನರು ಆಗಮಿಸುವ ನಿರೀಕ್ಷೆ ಇದೆ ಎಂದರು.

ಕಾಲೇಜಿನ ಹಾಸ್ಟೇಲ್ ಎದುರು ವಿಶಾಲವಾದ ಜಾಗದಲ್ಲಿ ಗದ್ದಲವಾಗದಂತಿರಲು ಸಾರ್ವಜನಿಕರಿಗೆ ಹೆಚ್ಚಿನ ಕೌಂಟರ್‌ಗಳ ಮೂಲಕ ಊಟದ ವ್ಯವಸ್ಥೆ ಕಲ್ಪಿಸಲಾಗಿದೆ. ಊಟದಲ್ಲಿ ತಿರುಪತಿ ಲಾಡು ವಿಶೇಷ ಸಿಹಿತಿಂಡಿ ಸಹಿತಿ ಭೂರಿ ಭೋಜನಕ್ಕೆ, ಪಾರ್ಕಿಂಗ್‌ಗೆ ಪ್ರತ್ಯೇಕ ಜಾಗದ ವ್ಯವಸ್ಥೆ ಮಾಡಲಾಗಿದೆ.

ತಿರುಪತಿಯ ಶ್ರೀ ಬಾಲಾಜಿ ಮಂಟಪದ ಮಾದರಿಯಲ್ಲಿ ಮದುವೆ ಮಂಟಪ ಸಿದ್ದಗೊಳ್ಳಲಿದೆ ಎಂದರು. ಪಿಎಲ್‌ಡಿ ಪಿಕಾರ್ಡ ಬ್ಯಾಂಕ್ ಅಧ್ಯಕ್ಷ ಬಿ.ಕೆ.ಬಿರಾದಾರ, ಸಂಸ್ಥೆಯ ಲೆಕ್ಕಾಧಿಕಾರಿ ಬಸವರಾಜ ಬಿಜ್ಜೂರ, ಕಾಲೇಜಿನ ಆಡಳಿತಾಧಿಕಾರಿ ಬಿ.ಜಿ.ಬಿರಾದಾರ, ಗುತ್ತಿಗೆದಾರ ಬಾಗಣ್ಣ ಕಡ್ಲಿ ಇತರರು ಇದ್ದರು.

> **ಸಾಮೂಹಿಕ ವಿವಾಹದ ಪ್ರಯೋಜನವನ್ನು ಅನೇಕ ಬಡವರು, ಹಿಂದುಳಿದವರು ಪಡೆದುಕೊಂಡಿದ್ದಾರೆ. ನಮ್ಮ ಹಿರಿಯರ, ನಮ್ಮ ಆತ್ಮಸಂತೋಷಕ್ಕಾಗಿ ಇದನ್ನು ಮಾಡುತ್ತಿದ್ದೇವೆ. ಮೇ 18ರಂದು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಎಲ್ಲರನ್ನೂ ಹರಸಬೇಕು ಎಂದು ಅವರು ಮನವಿ ಮಾಡುತ್ತೇನೆ. -ಎಂ.ಎನ್.ಮದರಿ,**
> **ಸಮಾಜ ಸೇವಕರು, ಮುದ್ದೇಬಿಹಾಳ.**




ಉದಯವಾಹಿನಿ ಚಿತ್ರ

ಭಾರತ ಮತ್ತು ಪಾಕಿಸ್ತಾನ ನಡುವಿನ ಸಂಘರ್ಷ ಹಾಗೂ ಅಮೆರಿಕದ ಸುಂಕ ಸಮರ ಅಡಕೆ ಧಾರಣೆ ಕುಸಿಯಲು ಕಾರಣ

# ಗಗನಕ್ಕೇರಿದ್ದ ಅಡಿಕೆ ಬೆಲೆ ದಿಢೀರ್ ಕುಸಿತ: ಲಕ್ಷ ರೂ. ದಾಟುವ ಹೊತ್ತಲ್ಲೇ ಬೆಲೆ ಇಳಿಕೆ

• ಉದಯವಾಹಿನಿ ಶೃಂಗೇರಿ

ಅಡಕೆಗೆ ಧಾರಣೆ ಕ್ವಿಂಟಲ್‌ಗೆ ಲಕ್ಷ ರೂ. ದಾಟಿ ದಾಖಲೆ ಬರೆಯಲಿದೆ ಎನ್ನುತ್ತಿರುವಾಗಲೇ ದಿಢೀರನೇ ಕುಸಿತ ಕಂಡು ಬೆಳೆಗಾರರಲ್ಲಿ ಆತಂಕ ಸೃಷ್ಟಿಸಿದೆ.

ಚಿನ್ನದ ಮಾದರಿಯಲ್ಲಿ ಅಡಿಕೆ ಧಾರಣೆ ಕಳೆದ ತಿಂಗಳು ನಿರಂತರವಾಗಿ ಏರುಗತಿಯಲ್ಲಿ ಸಾಗಿದ್ದು ಲಕ್ಷ ರೂ. ದಾಟಿ ದಾಖಲೆ ಬರೆಯುವ ಹಂತದಲ್ಲಿತ್ತು. ಈಗ ಅಡಕೆ ವೆರೈಟಿಗಳಾದ ಸರಕು, ರಾಶಿ ಇಡಿ, ಬೆಟ್ಟೆ, ಗೊರಬಲುಗೆ ದಿಢೀರ್ 5ರಿಂದ 6 ಸಾವಿರ ರೂ. ಧಾರಣೆ ಕಡಿಮೆಯಾಗಿದೆ. ಮುಂದಿನ ದಿನಗಳಲ್ಲಿ ದರ ಇನ್ನೂ ಕುಸಿಯಲಿದೆ ಎಂಬ ಮಾತುಗಳು ವರ್ತಕ ವಲಯದಲ್ಲಿ ಕೇಳಿ ಬರುತ್ತಿವೆ.

10 ವರ್ಷಗಳ ಹಿಂದೆ ಸರಕು ಅಡಕೆ ಕ್ವಿಂಟಲ್‌ಗೆ 95,000 ರೂ., ರಾಶಿ ಇಡಿ ಅಡಕೆಗೆ 80,000 ರೂ. ದಾಟಿತ್ತು. ಇದೀಗ ಭಾರತ ಮತ್ತು ಪಾಕಿಸ್ತಾನ ನಡುವಿನ ಸಂಘರ್ಷ ಹಾಗೂ ಅಮೆರಿಕದ ಸುಂಕ ಸಮರ ಅಡಕೆ ಧಾರಣೆ ಕುಸಿಯಲು ಕಾರಣ ಎನ್ನಲಾಗಿದೆ. ಕಳೆದ ಜನವರಿ ಕೊನೆಯಲ್ಲಿ ರಾಶಿ ಇಡಿ ಅಡಕೆಗೆ 57,000 ಸಾವಿರ ರೂ. ವರೆಗಿದ್ದ ದರ ಫೆಬ್ರವರಿಯಲ್ಲಿ53,000 ತಲುಪಿತ್ತು. ಆದರೆ, ಮಾರ್ಚ್ ಮೊದಲ ವಾರ ದರ ಇಳಿಕೆ ಕಂಡಿದ್ದು ತಿಂಗಳ ಕೊನೆಯಲ್ಲಿ ಏರಿಕೆಯಾಗಿತ್ತು. ಕಳೆದ ತಿಂಗಳು ಸರಕು ಅಡಕೆಗೆ 67,000ದಿಂದ 96,000 ರೂ. ವರೆಗೆ, ಬೆಟ್ಟೆ 53,000ರಿಂದ 63,000, ರಾಶಿ ಇಡಿ 55,000– 60,000 ರೂ. ಆಸುಪಾಸಿನಲ್ಲಿ ಧಾರಣೆ ನಡೆಯುತ್ತಿತ್ತು. ಪ್ರಸ್ತುತ ಸರಕು 60,129ರಿಂದ 98,896, ರಾಶಿ ಇಡಿ 49,000ದಿಂದ 57,000, ಬೆಟ್ಟೆ 51,554ರಿಂದ 58,700 ರೂ. ವರೆಗೆ ಮಾರಾಟವಾಗುತ್ತಿದೆ.

2023ರ ಜೂನ್, ಜುಲೈ ತಿಂಗಳಲ್ಲಿ ಅಡಕೆ ಧಾರಣೆ 55,000–57,000 ವರೆಗೆ ತಲುಪಿತ್ತು. 2024ರ ಮೇ ತಿಂಗಳಿನಲ್ಲಿ 55,000 ರೂ.ಗಳಿತ್ತು. ಆದರೆ, ಈ ವರ್ಷ ಏಪ್ರಿಲ್ ಮೊದಲ ವಾರದಲ್ಲಿಯೇ ಏರಿಕೆ ಕಂಡು ಮೇ ತಿಂಗಳಿನಲ್ಲಿ ಕುಸಿತ ಕಾಣುತ್ತಿದೆ.

ಈ ವರ್ಷವೂ ಅತಿವೃಷ್ಟಿಯಾದರೆ ಕೊಳೆ ರೋಗದ ಹತೋಟಿ ಮಾಡುವುದು ತುಂಬಾ ಕಷ್ಟ. ಅಡಕೆ ಕೊನೆ ಇಳಿಸುವ ವೇಳೆಗೆ ಕಾಯಿ ಇಲ್ಲದೇ ಕೊನೆ ಮಟ್ಟೆಯೊಂದೇ ಉಳಿಯಲಿದೆ. ಅಡಕೆ ಇಳುವರಿ ಕುಸಿತವಾಗದೆ ಧಾರಣೆಯಲ್ಲಿಯೂ ವ್ಯತ್ಯಾಸವಾಗದಿದ್ದರೆ ಸ್ವಲ್ಪ ಮಟ್ಟಿಗೆ ಬೆಳೆಗಾರರು ಚೇತರಿಸಿಕೊಳ್ಳಬಹುದು ಎಂದಿದ್ದಾರೆ ಹಂಚಲಿ ಕೃಷ್ಣಮೂರ್ತಿರಾವ್, ಕೃಷಿಕ ಸಮಾಜದ ನಿರ್ದೇಶಕ.

## ಇಳುವರಿ ಕುಸಿತ

**ಕಳೆದ 2 ವರ್ಷದಿಂದ ಅಡಕೆ ಇಳುವರಿ ಕಡಿಮೆ ಆಗುತ್ತಿದೆ. ಅತಿಯಾದ ಮಳೆ ಹಾಗೂ ಎಲೆಚುಕ್ಕಿ, ಹಳದೆ ಎಲೆ ರೋಗದಿಂದ ಅರ್ಧದಷ್ಟು ಅಡಕೆ ಇಳುವರಿ ಕಡಿಮೆಯಾಗುತ್ತಿದೆ. ಆದರೆ, ರೈತರು ವರ್ಷದ ಬೆಳೆ ಹೋದರೂ ಪರವಾಗಿಲ್ಲ, ತೋಟ ಉಳಿದರೆ ಸಾಕು ಎನ್ನುವ ಸ್ಥಿತಿಯಲ್ಲಿದ್ದಾರೆ. ಈ ಬಾರಿಯ ಬೇಸಿಗೆಯಲ್ಲಿಅಡಕೆ ಮರಗಳಲ್ಲಿ ಹಿಂಗಾರ ನಳನಳಿಸುತ್ತಿದ್ದು, ಹರಳು ಉಳಿದರೆ ಉತ್ತಮ ಫಸಲು ಕೈಗೆ ಸಿಗುವ ಆಶಾಭಾವ ಮೂಡಿದೆ.**



ಉದಯವಾಹಿನಿ ಚಿತ್ರ

## ಹಸ ವೆರೈಟಿಗೆ ಭರ್ಜರಿ ಬೇಡಿಕೆ

**ಮಲೆನಾಡು ಭಾಗದಲ್ಲಿಈಗ ಹಸ ಹಾಗೂ ಬೆಟ್ಟೆ ಅಡಕೆಯನ್ನು ತಯಾರಿಸುವವರು ಕಡಿಮೆಯಾಗುತ್ತಿದ್ದು ರಾಶಿ ಇಡಿ ಅಡಕೆ ಮಾಡುವವರ ಸಂಖ್ಯೆಯೇ ಜಾಸ್ತಿಯಾಗಿದೆ. ಕಾರ್ಮಿಕರ ಕೊರತೆ ಕಾರಣಕ್ಕೆ ಅಡಕೆಯನ್ನು ಹೋಳು ಮಾಡದೆ ಯಂತ್ರದ ಸಹಾಯದಿಂದ ಸಿಪ್ಪೆಯನ್ನು ಬೇರೆ ಮಾಡಿ ಇಡಿ ಅಡಕೆಯನ್ನು ಮಾತ್ರ ಬೇಯಿಸಲಾಗುತ್ತದೆ. ಹಸ ಅಡಕೆಗೆ ಧಾರಣೆ 90,000 ರೂ. ಆಸುಪಾಸಿನಲ್ಲಿದ್ದರೂ ಬೆಳೆಗಾರರು ಹಸ ವೆರೈಟಿ ಮಾಡದೆ ಒಳ್ಳೆಯ ಧಾರಣೆಯಿಂದ ವಂಚಿತರಾಗುತ್ತಿದ್ದಾರೆ.**

- **ದಿಢೀರ್ 5ರಿಂದ 6 ಸಾವಿರ ರೂ. ಧಾರಣೆ ಕಡಿಮೆಯಾಗಿದೆ.**
- **ಇದೀಗ ಭಾರತ ಮತ್ತು ಪಾಕಿಸ್ತಾನ ನಡುವಿನ ಸಂಘರ್ಷ ಹಾಗೂ ಅಮೆರಿಕದ ಸುಂಕ ಸಮರ ಅಡಕೆ ಧಾರಣೆ ಕುಸಿಯಲು ಕಾರಣ ಎನ್ನಲಾಗಿದೆ.**
- **ಮಲೆನಾಡು ಭಾಗದಲ್ಲಿಈಗ ಹಸ ಹಾಗೂ ಬೆಟ್ಟೆ ಅಡಕೆಯನ್ನು ತಯಾರಿಸುವವರು ಕಡಿಮೆಯಾಗುತ್ತಿದ್ದಾರೆ.**

## ಮಿನಿ ನ್ಯೂಸ್

### ಸಮೃದ್ಧ ಬದುಕಿಗೆ ಬುದ್ಧನ ಅಷ್ಟಾಂಗ ಮಾರ್ಗ ಅನುಸರಿಸಿ : ಡೊಂಗ್ರೆ

• ಉದಯವಾಹಿನಿ ಕಮಲನಗರ

ಬುದ್ಧ ಬೋಧಿಸಿದ ಅಷ್ಟಾಂಗ ಮಾರ್ಗ ಎಂದಿಗೂ ಪ್ರಸ್ತುತ. ಹಾಗಾಗಿ ಸಮೃದ್ಧ ಬದುಕಿಗಾಗಿ ಅಷ್ಟಾಂಗ ಮಾರ್ಗವನ್ನು ಅನುಸರಿಸಬೇಕು ಎಂದು ಸುಖದೇವ ಡೊಂಗ್ರೆ ಹೇಳಿದರು.

ತಾಲ್ಲೂಕಿನ ಬೆಳಕೋಣಿ(ಬಿ) ಗ್ರಾಮದಲ್ಲಿ ನಡೆದ 2588ನೇ ಬುದ್ಧ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಗೌತಮ ಬುದ್ಧರು ಸ್ವಂತ ಪ್ರಯತ್ನವೇ ಸಾಧನೆಗೆ ಕಾರಣ ಎಂಬ ಸತ್ಯವನ್ನು ತಿಳಿಸಿಕೊಟ್ಟರೆ. ಜಾತಿ ಧರ್ಮ ರಹಿತವಾಗಿ ಬದುಕಲು ಬಯಸುವವರು ಬುದ್ಧನ ಅಷ್ಟಾಂಗ ಮಾರ್ಗಗಳಾದ ಒಳ್ಳೆಯ ನಡತೆ, ಒಳ್ಳೆಯ ಯೊಚನೆ, ಒಳ್ಳೆಯ ಮಾತು ಒಳ್ಳೆಯ ಕೆಲಸ ಕಾಯಕಗಳನ್ನು ಅನುಸರಿಸಿ ಸಮೃದ್ಧವಾಗಿ ಬದುಕಬೇಕಾಗಿದೆ ಎಂದರು.

ಈ ವೇಳೆ ಬುದ್ಧ ಜಯಂತಿ ಪ್ರಯುಕ್ತ ಗ್ರಾಮದ ಬುದ್ಧ ವಿಹಾರದಿಂದ ಅಂಬೇಡ್ಕರ್ ವೃತ್ತದವರೆಗೆ ಮೊಂಬತ್ತಿ ಮೆರವಣಿಗೆ ನಡೆಯಿತು.

### ಆತ್ಮವಿಶ್ವಾಸವೇ ಯಶಸ್ಸಿನ ಗುಟ್ಟು ತಹಶೀಲ್ದಾರ ಶ್ರೇಯಾಂಕ ಧನಶ್ರೀ

• ಉದಯವಾಹಿನಿ ಸೇಡಂ



ಸ್ಪರ್ಧಾತ್ಮಕ ಪರೀಕ್ಷೆಯ ಆಕಾಂಕ್ಷಿಗಳಾದ ಪದವೀಧರರು ವಿದ್ಯಾರ್ಥಿ ಹಂತದಿಂದಲೇ ಆತ್ಮವಿಶ್ವಾಸ ಬೆಳೆಸಿಕೊಂಡಾಗ ಮಾತ್ರ ಎಲ್ಲಾ ಕ್ಷೇತ್ರಗಳಲ್ಲಿ ಯಶಸ್ಸು ಸಾಧಿಸಬಹುದೆಂದು ಎಂದು ತಾಲ್ಲೂಕಿನ ತಹಶೀಲ್ದಾರ ಶ್ರೀಮತಿ ಶ್ರೇಯಾಂಕ ಧನಶ್ರೀ ಹೇಳಿದರು. ಇಲ್ಲಿನ ಮಾತೃಛಾಯ ಕಾಲೇಜಿನ ಆವರಣದಲ್ಲಿ ಶ್ರೀ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿ ಆಯೋಜಿತ ಸ್ಪರ್ಧಾ ಪರೀಕ್ಷೆಯ ಉಚಿತ ತರಬೇತಿ ಕಾರ್ಯಾಗಾರದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಪದವೀಧರ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಅವರು ಮಾತನಾಡಿ ಧೈರ್ಯಗೆಡದೆ ನಿರಂತರವಾಗಿ ಪ್ರಯತ್ನ ಪಟ್ಟಾಗ ಮಾತ್ರ ಸ್ಪರ್ಧಾ ಪರೀಕ್ಷೆಗಳಲ್ಲಿ ಯಶಸ್ಸು ಸಾಧಿಸಬಹುದು ಎಂದ ಅವರು ಈ ಭಾಗದಲ್ಲಿ ಶ್ರೀ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿಯು ಸ್ಪರ್ಧಾ ಪರೀಕ್ಷೆಗಳ ಉಚಿತ ತರಬೇತಿ ಕಾರ್ಯಾಗಾರವನ್ನು ಆಯೋಜಿಸಿರುವದು ಅಭಿನಂದನೀಯ ಎಂದರು.

### ಕಾರವಾರಕ್ಕೆ ಸರಕು ಹಡಗಿನಲ್ಲಿ ಆಗಮಿಸಿದ್ದ ಪಾಕಿಸ್ತಾನಿ ಪ್ರಜೆ ಶಿಪ್ ಸಮೇತ ವಾಪಸ್

• ಉದಯವಾಹಿನಿ ಕಾರವಾರ

ಸರಕು ಹಡಗಿನಲ್ಲಿ ಕಾರವಾರಕ್ಕೆ ಆಗಮಿಸಿದ್ದ ಪಾಕ್ ಪ್ರಜೆಯನ್ನು ನಿಬಂಧನೆ ಮೂಲಕ ಶಿಪ್ ಸಮೇತ ವಾಪಸ್ ಕಳುಹಿಸಲಾಗಿದೆ.

ಭಾರತ–ಪಾಕಿಸ್ತಾನದ ಉದ್ವಿಗ್ನತೆಯ ನಡುವೆಯೇ ನಿರ್ಬಂಧವಿದ್ದರೂ ಪಾಕ್ ಪ್ರಜೆಗಳು ಭಾರತಕ್ಕೆ ಬರುತ್ತಿದ್ದಾರೆ. ಇರಾಕ್ ಮೂಲದ ಹಡಗಿನ ಮೂಲಕ ಬಂದ ಪಾಕಿಸ್ತಾನದ ಪ್ರಜೆಯನ್ನು ಉತ್ತರ ಕನ್ನಡ ಜಿಲ್ಲೆಯ ಕಾರವಾರದ ಬಂದರಿನಲ್ಲಿ ಬಂಧಿಸಲಾಗಿತ್ತು. ಇದೀಗ ತನಿಖೆ ಬಳಿಕ ಶಿಪ್ ಸಮೇತ ಭಾರತದ ಗಡಿ ದಾಟಿಸಲಾಗಿದೆ. ಇರಾಕ್‌ನ ಅಲ್ ಜುಬೇರ್‌ನಿಂದ ಕಾರವಾರ ಬಂದರಿಗೆ ಬಂದಿದ್ದ ಸರಕು ಸಾಗಾಣಿಕೆ ಹಡಗಿನಲ್ಲಿ ಪಾಕ್‌ನ ಓರ್ವ, ಭಾರತ ಮೂಲದ 15, ಸಿರಿಯಾ – 2 ಪ್ರಜೆಗಳು ಶಿಪ್‌ನಲ್ಲಿ ಇದ್ದರು. ಈ ಶಿಪ್ ಕಾರವಾರ ಬಂದರಿಗೆ ಆಗಮಿಸಿತ್ತು. ಈ ವಿಚಾರ ತಿಳಿದ ಬಂದರು ಇಲಾಖೆ, ಕರಾವಳಿ ಕಾವಲು ಪಡೆಗೆ ಮಾಹಿತಿ ನೀಡಿದ್ದು ಶಿಪ್‌ನಲ್ಲಿ ಇದ್ದ ಪಾಕಿಸ್ತಾನಿ ಪ್ರಜೆಯಿಂದ ಮೊಬೈಲ್ ಇತರೆ ಉಪಕರಣಗಳನ್ನು ವಶಕ್ಕೆ ಪಡೆಯಲಾಗಿತ್ತು.

### ಸೀಟು ವಿವಾದ: ರೈಲಿನ ಸರಪಳಿ ಎಳೆದ ಪ್ರಯಾಣಿಕನಿಗೆ ದಂಡ

• ಉದಯವಾಹಿನಿ ಮಂಗಳೂರು

ಸೀಟಿಗಾಗಿ ನಡೆದ ಜಗಳದಲ್ಲಿ ರೈಲಿನ ತುರ್ತು ಸರಪಳಿಯನ್ನು ಎಳೆದ ಪ್ರಯಾಣಿಕನಿಗೆ ರೈಲ್ವೆ ರಕ್ಷಣಾ ಪಡೆ (ಆರ್‌ಪಿಎಫ್) 1,500 ರೂ. ದಂಡ ವಿಧಿಸಿದೆ. ಮಂಗಳವಾರ ಸುಬ್ರಹ್ಮಣ್ಯದಿಂದ ಹೊರಟ ಪ್ಯಾಸೆಂಜರ್ ರೈಲಿನಲ್ಲಿ ಈ ಘಟನೆ ನಡೆದಿದೆ. ರೈಲಿನಲ್ಲಿ ಜನದಟ್ಟಣೆ ಇದ್ದಾಗ, ಬಂಟ್ವಾಳ ಬಳಿ ಸೀಟಿಗಾಗಿ ಇಬ್ಬರು ಪ್ರಯಾಣಿಕರ ನಡುವೆ ಜಗಳ ನಡೆದಿದೆ. ಕೋಪದ ಭರದಲ್ಲಿ, ಪ್ರಯಾಣಿಕರಲ್ಲಿ ಒಬ್ಬರು ತುರ್ತು ಸರಪಳಿಯನ್ನು ಎಳೆದು ರೈಲನ್ನು ನಿಲ್ಲಿಸಿದರು.

ರೈಲ್ವೆ ಅಧಿಕಾರಿಗಳು ತಕ್ಷಣ ಮಧ್ಯಪ್ರವೇಶಿಸಿ ಘಟನೆಯ ಬಗ್ಗೆ ಮಾಹಿತಿ ಪಡೆದರು. ಮಂಗಳೂರು ಜಂಕ್ಷನ್ ತಲುಪಿದ ನಂತರ, ಆರ್‌ಪಿಎಫ್ ಅಧಿಕಾರಿಗಳು ಸರಪಳಿ ಎಳೆದ ವ್ಯಕ್ತಿಯನ್ನು ಗುರುತಿಸಿ, ವಿಚಾರಣೆ ನಡೆಸಿ, 1,500 ರೂ. ದಂಡ ವಿಧಿಸಿ, ಇಂತಹ ಕೃತ್ಯಗಳನ್ನು ಪುನರಾವರ್ತಿಸದಂತೆ ಎಚ್ಚರಿಕೆ ನೀಡಿದರು.

### ದೇವಾಲಯ ಸ್ವಚ್ಛವಾಗಿರಲಿ

• ಉದಯವಾಹಿನಿ ಹಿರೀಸಾವೆ

ದೇವಸ್ಥಾನವನ್ನು ನಿರ್ಮಾಣ ಮಾಡಿದ ನಂತರ ಸ್ವಚ್ಛವಾಗಿ, ಸುಂದರವಾಗಿ ಇಟ್ಟುಕೊಳ್ಳುವುದು ಬಹಳ ಮುಖ್ಯ' ಎಂದು ಶಾಸಕ ಸಿ.ಎನ್. ಬಾಲಕೃಷ್ಣ ಹೋಬಳಿಯ ಬಿಳಿಕೆರೆ ಗ್ರಾಮದಲ್ಲಿ ಹೇಳಿದರು.

ಗ್ರಾಮದಲ್ಲಿ ಜೀರ್ಣೋದ್ಧಾರಗೊಂಡಿರುವ ಮಾರಮ್ಮ ದೇವಾಲಯದ ಲೋಕಾರ್ಪಣೆಯಲ್ಲಿ ಭಾಗವಹಿಸಿ ಮಾತನಾಡಿದರು. ದೇವರ ಅನುಗ್ರಹವಿಲ್ಲದೆ ಈ ಭೂಮಂಡಲದಲ್ಲಿ ಏನೂ ನಡೆಯುವುದಿಲ್ಲ, ಮನಸ್ಸಿಗೆ ಶಾಂತಿ ಹಾಗೂ ನೆಮ್ಮದಿ ದೇವರ ಸನ್ನಿಧಿಯಲ್ಲಿ ಸಿಗುತ್ತದೆ. ನಾನು ಎನ್ನುವುದಕ್ಕಿಂತ ನಾವು ಎನ್ನುವ ಮೂಲಕ ಗ್ರಾಮದ ಅಭಿವೃದ್ಧಿ ಮಾಡಬೇಕು' ಎಂದರು.

ಈ ಗ್ರಾಮದಿಂದ ಕಬ್ಬಳಿ ಗ್ರಾಮದವರಗೆ 2 ಕಿಲೋಮೀಟರ್ ರಸ್ತೆಯನ್ನು 1 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಗೊಳಿಸಲಾಗುವುದು. ತೋಟಿ ಕೆರೆ ಏತನೀರಾವರಿ ಯೋಜನೆಯು ಪ್ರಗತಿಯಲ್ಲಿದ್ದು, ಮುಂದಿನ ಹಂಗಾಮಿನಿಂದ ಕೆರೆಗಳಿಗೆ ನೀರು ಹರಿಸಲಾಗುವುದು. ದಿಡಗ–ಕಬ್ಬಳಿ ಏತನೀರಾವರಿ ಯೋಜನೆಯೂ ಪ್ರಸ್ತಾವನೆಯ ಹಂತದಲ್ಲಿದೆ' ಎಂದರು. ಕಬ್ಬಳಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಮಂಗಳಮ್ಮ, ಉಪಾಧ್ಯಕ್ಷೆ ರತ್ನ ಕುಮಾರಸ್ವಾಮಿ, ಮುಖಂಡರಾದ ಎಂ.ಆರ್. ವಾಸು, ಶಿವನಂಜೇಗೌಡ, ಬಿಳಿಕೆರೆ ರಂಗೇಗೌಡ, ರಾಜೇಗೌಡ, ಪೃಥ್ವಿ ಕುಮಾರ್, ಪಿಡಿಒ ಕಿರಣ್, ಹನುಮೇಗೌಡ ಇದ್ದರು.



ಉದಯವಾಹಿನಿ ಚಿತ್ರ

ಉದಯ ವಾಹಿನಿ
www.udayavahini.in
epaper.udayavahini.in
Udaya vahini news
Udaya vahini news
Udayavahini news yo
udayavahininews@g


# ಒಳಉಡುಪು ಧರಿಸದೇ ಪೋಸ್ ಕೊಟ್ಟ ಖುಷಿ



ಅದೆಷ್ಟು ಬಾರಿ ಎದೆಗೆ ಬೆಂಕಿ ಹಚ್ಚೇರಿ ಅಂದ್ರು ಫ್ಯಾನ್ಸ್ ಸೋಷಿಯಲ್ ಮೀಡಿಯಾದಲ್ಲಿ ಸದಾ ಆಕ್ಟೀವ್ ಆಗಿರುವ ಬಹುಭಾಷಾ ನಟಿ ಖುಷಿ ಮುಖರ್ಜಿ ಒಳ ಉಡುಪು ಧರಿಸದೇ ಪಡ್ಡೆ ಹುಡುಗರ ಮೈ ಬಿಸಿ ಹೆಚ್ಚಿಸುವಂತೆ ಫೋಟೋಗೆ ಪೋಸ್ ಕೊಟ್ಟಿದ್ದಾರೆ. ಮುಂಬೈನಲ್ಲಿ ಕಾರ್ಯಕ್ರಮವೊಂದಕ್ಕೆ ಒಳಉಡುಪು ಧರಿಸದೇ ಇರೋದು ಕಾಣಿಸುವಂತಹ ಟ್ರಾನ್ಸ್ ಪರೆಂಟ್ ಡ್ರೆಸ್ ತೊಟ್ಟು ಫೋಟೋಗೆ ಪೋಸ್ ಕೊಟ್ಟಿದ್ದಾರೆ. ಈ ವಿಡಿಯೋವನ್ನು ಇನ್‌ಸ್ಟಾಗ್ರಾಮ್‌ನಲ್ಲಿ ಹಂಚಿಕೊಂಡಿದ್ದು, ಅಭಿಮಾನಿಗಳ ಹುಬ್ಬೇರಿಸುವಂತೆ ಮಾಡಿದೆ. ಕೆಲ ನೆಟ್ಟಿಗರು ನಟಿಯ ಬೋಲ್ಡ್ ಅವತಾರಕ್ಕೆ ವಾವ್ ಎಷ್ಟು ಸೆಕ್ಸಿ ಅಂತಾ ಕಾಮೆಂಟ್ ಮಾಡಿದ್ರೆ, ಇನ್ನೂ ಕೆಲವರು ಇನ್ನೂ ಸ್ವಲ್ಪ ಚೋಟುದ್ದ ಡ್ರೆಸ್ ತೊಟ್ಟಿದ್ರೆ, ಮಜಾ ಇರ್ತಿತ್ತು, ನಾನೇ ಒಳಉಡುಪು ಕೊಡಿಸಲೇ? ಅಂತೆಲ್ಲಾ ಕಾಮೆಂಟ್ ಮಾಡಿದ್ದಾರೆ. ಇನ್ನೂ ಕೆಲವರು ನಟಿಯನ್ನ ಟ್ರೋಲಿಗೆಳೆದಿದ್ದಾರೆ. ಸಹಜವಾಗಿ ಚಿತ್ರ ನಟಿಯರು ಫಂಕ್ಷನ್‌ಗಳಿಗೆ ಹೋಗುವಾಗ.. ರೆಡ್ ಕಾರ್ಪೆಟ್ ಮೇಲೆ ನಡೆಯುವಾಗ ಅವರ ಡ್ರೆಸ್‌ಹಿಡಿದುಕೊಳ್ಳಲು ಇನ್ನೊಬ್ಬ ಸಹಾಯಕರು ಇರ್ತಾರೆ. ಇಡೀ ರಸ್ತೆ ಗುಡಿಸುವಂತೆ ಒಬ್ಬರು ಡ್ರೆಸ್‌ಹಾಕಿಕೊಂಡರೆ, ಹಲವಾರು ಸುತ್ತುಗಳ ವಿಚಿತ್ರ ಡ್ರೆಸ್‌ಇನ್ನೊಬ್ಬರು ಧರಿಸುತ್ತಾರೆ. ತಮ್ಮ ದೇಹಸಿರಿಯನ್ನು ತೋರಿಸುವ ಡ್ರೆಸ್ ಹಾಕಿಕೊಂಡು ಆಗಾಗ್ಗೆ ಮೇಲೆ ಮೇಲೆ ಎಳೆದುಕೊಳ್ಳುವುದನ್ನೂ ನಾವು ನೋಡಬಹುದು. ಇನ್ನೂ ಕೆಲ ನಟಿಯರಿಗೆ ಮೈಮೇಲೆ ಬಟ್ಟೆಯೇ ನಿಲ್ಲುವುದಿಲ್ಲ ಎನ್ನುವಂತಹ ಡ್ರೆಸ್ ತೊಟ್ಟು ಟ್ರೋಲಿಗೆ ಒಳಗಾಗ್ತಾರೆ. ಈಗ ಖುಷಿ ಮುಖರ್ಜಿಯ ಸ್ಥಿತಿಯೂ ಅದೇ ಆಗಿದೆ. ಹೌದು. ಒಳ ಉಡುಪು ಧರಿಸದೇ ಅರ್ಧಂಬರ್ಧ ಮೈ ಕಾಣುವಂತೆ ಡ್ರೆಸ್ ತೊಟ್ಟು ನಗುತ್ತಲೇ ಫೋಟೋಗೆ ಪೋಸ್ ಕೊಟ್ಟಿದ್ದಾರೆ. ಈ ವೇಳೆ ಅವರು ನಡೆಯುವುದಕ್ಕೂ ಕಷ್ಟಪಡುತ್ತಿರುವುದು ಕಾಣಬಹುದಾಗಿದೆ.

**ಮೈಮೇಲೆ ಬಟ್ಟೆಯೇ ನಿಲ್ಲುವುದಿಲ್ಲ**

ಇದರಿಂದ ನಟಿಯನ್ನ ಕೆಲವರು ಟ್ರೋಲಿಗೆಳೆದಿದ್ದಾರೆ. ನಟಿಯ ಕುರಿತು ಹೇಳುವುದಾದ್ರೆ, ಖುಷಿ ಮುಖರ್ಜಿ ಬಹುಭಾಷಾ ನಟಿಯಾಗಿದ್ದು, ತೆಲುಗು, ತಮಿಳು ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ತಮಿಳಿನಲ್ಲಿ 'ಅಂಜಲಾ ತುರಾಯ್', ತೆಲುಗಿನ ಪೂರಿ ಜಗನ್ನಾಥ್ ನಿರ್ದೇಶನದ 'ಹಾರ್ಟ್ ಎಟಾಕ್', ತೆಲುಗಿನಲ್ಲೇ 'ದೊಂಗ ಪ್ರೇಮ' ಚಿತ್ರ ಸೇರಿದಂತೆ ಕೆಲವು ಸಿನಿಮಾಗಳಲ್ಲಿ ನಟಿಸಿದ್ದಾರೆ.





ಸಿನಿ ವಾಹಿನಿ

## ದೇವರಕೊಂಡ ಸಹೋದರನ ಸಿನಿಮಾಗೆ ಶುಭ ಕೋರಿದ ರಶ್ಮಿಕಾ



ಆನಂದ್ ದೇವರಕೊಂಡ ಮತ್ತು ವೈಷ್ಣವಿ ಚೈತನ್ಯ ಮತ್ತೆ ಹೊಸ ಸಿನಿಮಾಗಾಗಿ ಒಂದಾಗಿದ್ದಾರೆ. 'ಬೇಬಿ' ಜೋಡಿಯ ಹೊಸ ಚಿತ್ರಕ್ಕೆ ನಟಿ ರಶ್ಮಿಕಾ ಮಂದಣ್ಣ ಕ್ಲ್ಯಾಪ್ ಮಾಡುವ ಮೂಲಕ ತಂಡಕ್ಕೆ ಶುಭಕೋರಿದ್ದಾರೆ.

ವಿಜಯ್ ದೇವರಕೊಂಡ ಸಹೋದರ ಆನಂದ್ ಸಿನಿಮಾಗೆ ರಶ್ಮಿಕಾ ಸಾಥ್ ನೀಡಿದ್ದಾರೆ. ಆನಂದ್ ಮತ್ತು ವೈಷ್ಣವಿ ನಟನೆಯ ಹೊಸ ಸಿನಿಮಾದ ಮುಹೂರ್ತ ಇಂದು (ಮೇ 15) ಹೈದರಾಬಾದ್‌ನಲ್ಲಿ ಅದ್ಧೂರಿಯಾಗಿ ನೆರವೇರಿದೆ. ಈ ಸಿನಿಮಾಗೆ ರಶ್ಮಿಕಾ ಕ್ಲ್ಯಾಪ್ ಮಾಡಿ ಟೀಮ್‌ಗೆ ವಿಶ್ ಮಾಡಿದ್ದಾರೆ. 2023ರಲ್ಲಿ ತೆರೆಕಂಡ 'ಬೇಬಿ' ಸಿನಿಮಾ ಸೂಪರ್ ಸಕ್ಸಸ್ ಕಂಡಿತ್ತು. ಮತ್ತೆ ಅದೇ ಜೋಡಿ ಜೊತೆಯಾಗಿರೋದು ಫ್ಯಾನ್ಸ್‌ಗೆ ಖುಷಿ ಕೊಟ್ಟಿದೆ. ಈ ಸಿನಿಮಾವನ್ನು ಆದಿತ್ಯ ಹಾಸನ್ ನಿರ್ದೇಶನ ಮಾಡಿದ್ದಾರೆ. ಸಿತಾರಾ ಸಂಸ್ಥೆ ಈ ಸಿನಿಮಾವನ್ನು ನಿರ್ಮಾಣ ಮಾಡುತ್ತಿದೆ. 'ಬೇಬಿ' ಚಿತ್ರದ ಮೂಲಕ ತ್ರಿಕೋನ ಪ್ರೇಮಕಥೆ ತೋರಿಸಿದ್ದರು. ಆನಂದ್ ದೇವರಕೊಂಡ ಮತ್ತು ವೈಷ್ಣವಿ ಹೊಸ ಸಿನಿಮಾ ಯಾವ ಜಾನರ್ ಕಥೆ ಹೇಳಲು ಹೊರಟಿದ್ದಾರೆ ಎಂಬುದನ್ನು ನೋಡಲು ಫ್ಯಾನ್ಸ್ ಕ್ಯೂರಿಯಸ್ ಆಗಿದ್ದಾರೆ.


**ನಟಿಯ ಯಶಸ್ಸಿನ ಛಾಯೆ**

## ಮತ್ತೆ ಪ್ರೀತಿಯಲ್ಲಿ ಬಿದ್ರಾ ನಟಿ

ಸೌತ್ ನಟಿ ಸಮಂತಾ ಎರಡನೇ ಮದುವೆಗೆ ಸಿದ್ಧವಾದ್ರಾ ಎಂಬ ಅನುಮಾನ ಅಭಿಮಾನಿಗಳಲ್ಲಿ ಮೂಡಿದೆ. ನಿರ್ಮಾಪಕ ರಾಜ್ ನಿಡಿಮೋರು ಜೊತೆಗಿನ ಸಮಂತಾ ಡೇಟಿಂಗ್ ಸುದ್ದಿಗೆ ಪುಷ್ಟಿ ನೀಡುವಂತಹ ಮತ್ತೊಂದು ಫೋಟೋ ಭಾರೀ ಸದ್ದು ಮಾಡ್ತಿದೆ. ನಿರ್ಮಾಪಕನ ತೋಳಲ್ಲಿ ನಟಿ ತಲೆಯಿಟ್ಟು ಮಲಗಿದ್ದಾರೆ. ಸಮಂತಾ ನಟನೆಯೊಂದಿಗೆ ನಿರ್ಮಾಪಕಿಯಾಗಿ ಹೊಸ ಹೆಜ್ಜೆ ಇಟ್ಟಿದ್ದಾರೆ. 'ಶುಭಂ' ಮೂಲಕ ನಟಿ ಗೆಲುವು ಸಾಧಿಸಿದ್ದಾರೆ. ನಟಿಯ ಪ್ರತಿ ಕೆಲಸದಲ್ಲೂ ನಿರ್ಮಾಪಕ ರಾಜ್ ಜೊತೆಯಾಗಿರೋದನ್ನು ನೋಡಿ ಅಭಿಮಾನಿಗಳು ಗುಡ್ ನ್ಯೂಸ್‌ಗಾಗಿ ಕಾಯ್ತಿದ್ದಾರೆ. ಹೀಗಿರುವಾಗ ನಟಿ ಸೋಷಿಯಲ್ ಮೀಡಿಯಾದಲ್ಲಿ ರಾಜ್ ಜೊತೆಗಿನ ಹೊಸ ಫೋಟೋವನ್ನು ಹಂಚಿಕೊಂಡಿದ್ದಾರೆ. ನಿರ್ಮಾಪಕನ ತೋಳಲ್ಲಿ ಸಮಂತಾ ತಲೆಯಿಟ್ಟು ಮಲಗಿದ ಫೋಟೋವನ್ನು ಹಂಚಿಕೊಂಡಿದ್ದಾರೆ. ಈ ಪೋಸ್ಟ್ ನೋಡಿರೋ ಫ್ಯಾನ್ಸ್ ಮತ್ತೆ ಇಬ್ಬರ ಡೇಟಿಂಗ್ ಬಗ್ಗೆ ಗುಸು ಗುಸು ಶುರು ಮಾಡಿದ್ದಾರೆ. ಇತ್ತೀಚೆಗೆ 'ಶುಭಂ' ಚಿತ್ರತಂಡದ ಜೊತೆಗಿನ ಪೋಸ್ಟ್‌ನಲ್ಲಿ ರಾಜ್ ಜೊತೆಗಿನ ಫೋಟೋ ಕೂಡ ನಟಿ ಹಂಚಿಕೊಂಡಿದ್ದರು.

## ರೆಡ್ಡಿ ಮಗನ ಸಿನಿಮಾದಲ್ಲಿ ಶ್ರೀಲೀಲಾ

ಕನ್ನಡದ ನಟಿ ಶ್ರೀಲೀಲಾ ತೆಲುಗು, ಬಾಲಿವುಡ್ ಸಿನಿಮಾಗಳಲ್ಲಿ ಬ್ಯುಸಿಯಾಗಿದ್ದಾರೆ. ಹೀಗಿರುವಾಗ 3 ವರ್ಷಗಳ ಬಳಿಕ ಮತ್ತೆ ಕನ್ನಡ ಸಿನಿಮಾದಲ್ಲಿ ಮಿಂಚಲು ರೆಡಿಯಾಗಿದ್ದಾರೆ. ಜನಾರ್ದನ ರೆಡ್ಡಿ ಪುತ್ರ ಕಿರೀಟಿಗೆ ನಾಯಕಿಯಾಗಿ ಮತ್ತೆ ಸ್ಯಾಂಡಲ್‌ವುಡ್‌ನಲ್ಲಿ ದರ್ಶನ ಕೊಡಲು ಸಜ್ಜಾಗಿದ್ದಾರೆ. ಶ್ರೀಲೀಲಾ ಮತ್ತು ಕಿರೀಟಿ ನಟನೆಯ 'ಜೂನಿಯರ್' ಪ್ಯಾನ್ ಇಂಡಿಯಾ ಲೆವೆಲ್‌ನಲ್ಲಿ ಬಿಡುಗಡೆಯಾಗಲಿದೆ. ಕನ್ನಡ, ತೆಲುಗು, ತಮಿಳು, ಮಲಯಾಳಂ ಹಾಗೂ ಹಿಂದಿ ಭಾಷೆಯಲ್ಲಿ 'ಜೂನಿಯರ್' ಸಿನಿಮಾ ಜುಲೈ 18ಕ್ಕೆ ರಿಲೀಸ್ ಆಗಲಿದೆ. ಅದಷ್ಟೇ ಅಲ್ಲ, ಇದೇ ತಿಂಗಳ 19ಕ್ಕೆ ಜೂನಿಯರ್ ಸಿನಿಮಾ ಮೊದಲ ಸಾಂಗ್ ಬಿಡುಗಡೆಯಾಗಲಿದೆ. ಈ ಸಿನಿಮಾ ಕಿಸ್ಸಿಕ್ ಬೆಡಗಿ ಶ್ರೀಲೀಲಾ ಕನ್ನಡಕ್ಕೆ ಬರುತ್ತಿದ್ದಾರೆ. ಇದು ಫ್ಯಾನ್ಸ್‌ಗೆ ಖುಷಿ ಕೊಟ್ಟಿದೆ. 'ಮಾಯಾಬಜಾರ್' ಸಿನಿಮಾ ಖ್ಯಾತಿಯ ರಾಧಾಕೃಷ್ಣ ರೆಡ್ಡಿ ನಿರ್ದೇಶನದಲ್ಲಿ 'ಜೂನಿಯರ್' ಸಿನಿಮಾ ತಯಾರಾಗಿದೆ. ದಕ್ಷಿಣ ಭಾರತದ ಖ್ಯಾತ ನಿರ್ಮಾಣ ಸಂಸ್ಥೆ ವಾರಾಹಿ ಫಿಲ್ಮಂ ಪ್ರೊಡಕ್ಷನ್ ಕಿರೀಟಿ ಮೊದಲ ಚಿತ್ರಕ್ಕೆ ಬಂಡವಾಳ ಹೂಡಿದ್ದು, ಬಿಗ್ ಬಜೆಟ್‌ನಲ್ಲಿ ಸಿನಿಮಾ ನಿರ್ಮಾಣ ಚಿತ್ರ ಮೂಡಿ ಬಂದಿದೆ.



## 'ಡಾನ್ 3' ಸಿನಿಮಾ ಶುರುವಾಗೋದು?

ಬಾಲಿವುಡ್ ನಟ ರಣವೀರ್ ಸಿಂಗ್ ಮಗಳ ಆರೈಕೆಗಾಗಿ ಪತ್ನಿ ದೀಪಿಕಾಗೆ ಸಾಥ್ ನೀಡುತ್ತಿದ್ದಾರೆ. ಇದರೊಂದಿಗೆ ಹೊಸ ಸಿನಿಮಾಗಾಗಿ ತಯಾರಿ ಕೂಡ ಮಾಡಿಕೊಳ್ತಿದ್ದಾರೆ. ಇದರ ನಡುವೆ 'ಡಾನ್ 3' ಸಿನಿಮಾಗೆ ಶೂಟಿಂಗ್ ಮುಹೂರ್ತ ಫಿಕ್ಸ್ ಆಗಿದೆ. ರಣವೀರ್ ನಟನೆಯ ಬಹುನಿರೀಕ್ಷಿತ 'ಡಾನ್ 3' ಚಿತ್ರ ಕಾರಣಾಂತರಗಳಿಂದ ತಡವಾಗ್ತಿದೆ. ಕಿಯಾರಾ ಪ್ರೆಗ್ನೆಂಟ್ ಆಗಿರೋ ಹಿನ್ನೆಲೆ ಡಾನ್ 3 ಚಿತ್ರದಿಂದ ನಿರ್ಗಮಿಸಿದ್ದರು. ಈ ಬೆನ್ನಲ್ಲೇ ಕೃತಿ ಸನೋನ್ ನಾಯಕಿಯಾಗಿ ಆಯ್ಕೆ ಮಾಡಿಕೊಂಡರು. ಈಗ ಸೆಪ್ಟೆಂಬರ್‌ನಲ್ಲಿ ಸಿನಿಮಾ ಶೂಟಿಂಗ್ ಶುರು ಮಾಡಲು ಚಿತ್ರತಂಡ ನಿರ್ಧರಿಸಿದೆ. ಅದಕ್ಕಾಗಿ ತೆರೆಮರೆಯಲ್ಲಿ ಭರ್ಜರಿ ತಯಾರಿ ನಡೆಯುತ್ತಿದೆ. 'ಡಾನ್ 3' ಚಿತ್ರದಲ್ಲಿ ರಣವೀರ್ ಸಿಂಗ್ ಮುಂದೆ ವಿಕ್ರಾಂತ್ ಮಾಸ್ಸಿ ಅಬ್ಬರಿಸಲಿದ್ದಾರೆ. ಈ ಇಬ್ಬರೂ ಸ್ಟಾರ್ ನಟರಿಗೆ ಫರ್ಹಾನ್ ಅಖ್ತರ್ ನಿರ್ದೇಶನ ಮಾಡಲಿದ್ದಾರೆ. ಸದ್ಯದಲ್ಲೇ ಚಿತ್ರದ ಬಗ್ಗೆ ಮತ್ತಷ್ಟು ಮಾಹಿತಿ ಹೊರಬೀಳಲಿದೆ.



# ಇಂಗ್ಲೆಂಡ್ ಪ್ರವಾಸಕ್ಕೆ ಟೀಂ ಇಂಡಿಯಾ ಪ್ರಕಟ

ಭಾರತದ ಮಹಿಳಾ ಮತ್ತು ಪುರುಷರ ಕ್ರಿಕೆಟ್ ತಂಡಗಳು ಮುಂದಿನ ತಿಂಗಳು ಇಂಗ್ಲೆಂಡ್ ಪ್ರವಾಸ ಕೈಗೊಳ್ಳಲಿವೆ. ಪುರುಷರ ತಂಡದ ಘೋಷಣೆಯಲ್ಲಿ ವಿಳಂಬವಾಗಿದ್ದರೆ, ಮಹಿಳಾ ತಂಡವನ್ನು ಬಿಸಿಸಿಐ ಘೋಷಿಸಿದೆ. ಹರ್ಮನ್‌ಪ್ರೀತ್ ಕೌರ್ ನೇತೃತ್ವದ ಮಹಿಳಾ ತಂಡವು ಐದು ಟಿ20 ಮತ್ತು ಮೂರು ಏಕದಿನ ಪಂದ್ಯಗಳನ್ನು ಆಡಲಿದೆ.

ಭಾರತದ ಮಹಿಳಾ ಮತ್ತು ಪುರುಷರ ತಂಡಗಳು ಮುಂದಿನ ತಿಂಗಳು ಇಂಗ್ಲೆಂಡ್ ಪ್ರವಾಸ ಕೈಗೊಳ್ಳಲಿವೆ. ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಟೆಸ್ಟ್ ಕ್ರಿಕೆಟ್‌ನಿಂದ ನಿವೃತ್ತರಾಗಿರುವುದರಿಂದ, ನಾಯಕತ್ವಕ್ಕೆ ಹೊಸ ಹೆಸರನ್ನು ಪರಿಗಣಿಸಲಾಗುತ್ತಿದೆ . ಆದ್ದರಿಂದ, ತಂಡವನ್ನು ಘೋಷಿಸುವಲ್ಲಿ ವಿಳಂಬವಾಗಿದೆ. ಮೇ 23 ರಂದು ಭಾರತ ತಂಡ ಘೋಷಣೆಯಾಗುವ ಸಾಧ್ಯತೆ ಇದೆ. ಮತ್ತೊಂದೆಡೆ, ಇಂಗ್ಲೆಂಡ್ ಪ್ರವಾಸಕ್ಕೆ ಭಾರತ ಮಹಿಳಾ ತಂಡವನ್ನು ಘೋಷಿಸಲಾಗಿದೆ. ಭಾರತ ಮಹಿಳಾ ತಂಡ ಇಂಗ್ಲೆಂಡ್‌ನಲ್ಲಿ ಏಕದಿನ ಮತ್ತು ಟಿ20 ಸರಣಿಗಳನ್ನು ಆಡಲಿದೆ. ಐದು ಪಂದ್ಯಗಳ ಟಿ20 ಸರಣಿ ಮತ್ತು ಮೂರು ಪಂದ್ಯಗಳ ಏಕದಿನ ಸರಣಿ ನಡೆಯಲಿದೆ. ಭಾರತೀಯ ಮಹಿಳಾ ತಂಡ ಜೂನ್ 28 ರಿಂದ ಜುಲೈ 22 ರವರೆಗೆ ಇಂಗ್ಲೆಂಡ್ ವಿರುದ್ಧ ಐದು ಟಿ20 ಮತ್ತು ಮೂರು ಏಕದಿನ ಪಂದ್ಯಗಳನ್ನು ಆಡಲಿದೆ. ಟಿ20 ಸರಣಿ ಜೂನ್ 28 ರಿಂದ ಪ್ರಾರಂಭವಾದರೆ, ಏಕದಿನ ಸರಣಿ ಜುಲೈ 16 ರಿಂದ ಜುಲೈ 22 ರವರೆಗೆ ನಡೆಯಲಿದೆ. ಈ ಎರಡೂ ತಂಡಗಳನ್ನು ಹರ್ಮನ್ಪ್ರೀತ್ ಕೌರ್ ಮುನ್ನಡೆಸಲಿದ್ದಾರೆ.

**ತಂಡದಲ್ಲಿ ಯಾರಿಗೆಲ್ಲ ಅವಕಾಶ?**



**ಭಾರತ ಇಂಗ್ಲೆಂಡ್ ಪಂದ್ಯದ ವೇಳಾಪಟ್ಟಿ**

| | | |
|---|---|---|
| ಮೊದಲ ಟಿ20 | ಜೂನ್ 28 | (ಸಂಜೆ 7 ಗಂಟೆಗೆ) |
| ಎರಡನೇ ಟಿ20 | ಜುಲೈ 1 | (ರಾತ್ರಿ 11) |
| 3ನೇ ಟಿ20 | ಜುಲೈ 4 | (ರಾತ್ರಿ 11.05) |
| 4ನೇ ಟಿ20 | ಜುಲೈ 9 | (ರಾತ್ರಿ 11) |
| 5ನೇ ಟಿ20 | ಜುಲೈ 12 | (ರಾತ್ರಿ 11.05) |

**ಏಕದಿನ ಸರಣಿ**


| | | |
|---|---|---|
| 1ನೇ ಏಕದಿನ ಪಂದ್ಯ | ಜುಲೈ 16 | (ಸಂಜೆ 5.30) |
| 2ನೇ ಏಕದಿನ ಪಂದ್ಯ | ಜುಲೈ 19 | (ಮಧ್ಯಾಹ್ನ 3.30) |
| 3ನೇ ಏಕದಿನ ಪಂದ್ಯ | ಜುಲೈ 22 | (ಸಂಜೆ 5.30) |

**ಇಂಗ್ಲೆಂಡ್ ಪ್ರವಾಸಕ್ಕೆ ಭಾರತ ಮಹಿಳಾ ತಂಡ ಪ್ರಕಟ**

**ಭಾರತ ಮಹಿಳಾ ಏಕದಿನ ತಂಡ:** ಹರ್ಮನ್‌ಪ್ರೀತ್ ಕೌರ್ (ನಾಯಕಿ), ಸ್ಮೃತಿ ಮಂಧಾನ (ಉಪನಾಯಕಿ), ಪ್ರತೀಕಾ ರಾವಲ್, ಹರ್ಲೀನ್ ಡಿಯೋಲ್, ಜೆಮಿಮಾ ರಾಡ್ರಿಗಸ್, ರಿಚಾ ಘೋಷ್ (ವಿಕೆಟ್ ಕೀಪರ್), ಯಾಸ್ತಿಕಾ ಭಾಟಿಯಾ, ತೇಜಲ್ ಹಸ್ಬಾನಿಸ್, ದೀಪ್ತಿ ಶರ್ಮಾ, ಸ್ನೇಹಿ ರಾಣಾ, ಶ್ರೀ ಚರಣಿ, ಶುಚಿ ಉಪಾಧ್ಯಾಯ, ಅಮಂಜೋತ್ ಕೌರ್, ಅರುಂಧತಿ ರೆಡ್ಡಿ, ಕ್ರಾಂತಿ ಗೌಡ್, ಸಯಾಲಿ ಸತ್ಘರೆ.

**ಟಿ20 ಸರಣಿಗೆ ಭಾರತ ಮಹಿಳಾ ತಂಡ:** ಹರ್ಮನ್‌ಪ್ರೀತ್ ಕೌರ್ (ನಾಯಕಿ), ಸ್ಮೃತಿ ಮಂಧಾನ (ಉಪನಾಯಕಿ), ಶಫಾಲಿ ವರ್ಮಾ, ಜೆಮಿಮಾ ರಾಡ್ರಿಗಸ್, ರಿಚಾ ಘೋಷ್ (ವಿಕೆಟ್‌ಕೀಪರ್), ಯಾಸ್ತಿಕಾ ಭಾಟಿಯಾ (ವಿಕೆಟ್‌ಕೀಪರ್), ಹರ್ಲೀನ್ ಡಿಯೋಲ್, ದೀಪ್ತಿ ಶರ್ಮಾ, ಸ್ನೇಹ ರಾಣಾ, ಶ್ರೀ ಚರಣಿ, ಶುಚಿ ಉಪಾಧ್ಯಾಯ, ಅಮಂಜೋತ್ ಕೌರ್, ಅರುಂಧತಿ ರೆಡ್ಡಿ, ಕ್ರಾಂತಿ ಗೌಡ್, ಸಯಾಲಿ ಸತ್ಘರೆ.

## ಜೋಶ್ ಹೇಝಲ್‌ವುಡ್ ರಿಟರ್ನ್ ಆದರೆ



**ಕೆಕೆಆರ್ ವಿರುದ್ಧದ ಪಂದ್ಯಕ್ಕೆ ಅಲಭ್ಯ**

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವೇಗಿ ಜೋಶ್ ಹೇಝಲ್‌ವುಡ್ ಶೀಘ್ರದಲ್ಲೇ ಭಾರತಕ್ಕೆ ಮರಳಲಿದ್ದಾರೆ ಎಂದು ಹಿಂದೂಸ್ತಾನ್ ಟೈಮ್ಸ್ ವರದಿ ಮಾಡಿದೆ. ಮೇ 8 ರಂದು ಐಪಿಎಲ್ ಸ್ಥಗಿತಗೊಂಡಿದ್ದರಿಂದ ಅವರು ತವರಿಗೆ ತೆರಳಿದ್ದರು. ಇದೀಗ ಹೇಝಲ್‌ವುಡ್ ಅವರ ಆಪ್ತ ಮೂಲಗಳು ಅವರು ಐಪಿಎಲ್‌ನ ಉಳಿದ ಪಂದ್ಯಗಳಿಗಾಗಿ ಆಗಮಿಸಲಿದ್ದಾರೆ ಎಂದು ದೃಢಪಡಿಸಿದೆ. ಇದಾಗ್ಯೂ ಅವರು ಯಾವಾಗ ಬರಲಿದ್ದಾರೆ ಎಂಬುದರ ಬಗ್ಗೆ ಯಾವುದೇ ಖಚಿತತೆ ಇಲ್ಲ.

ಏಕೆಂದರೆ ಭುಜದ ನೋವಿನ ಕಾರಣ ಈ ಹಿಂದೆ ಜೋಶ್ ಹೇಝಲ್‌ವುಡ್ ಐಪಿಎಲ್‌ನ ಉಳಿದ ಪಂದ್ಯಗಳಿಗೆ ಅಲಭ್ಯರಾಗಲಿದ್ದಾರೆ ಎಂದು ವರದಿಯಾಗಿತ್ತು. ಇದೀಗ ಅವರು ಆರ್‌ಸಿಬಿ ತಂಡವನ್ನು ಕೂಡಿಕೊಳ್ಳಲಿದ್ದಾರೆ ಎಂದು ಹೇಳಲಾಗಿದೆ. ಆದರೆ ಅವರ ಫಿಟ್‌ನೆಸ್ ಬಗ್ಗೆ ಯಾವುದೇ ಮಾಹಿತಿ ಹೊರಬಿದ್ದಿಲ್ಲ.

ಅಂದರೆ ಜೋಶ್ ಹೇಝಲ್‌ವುಡ್ ಸಂಪೂರ್ಣ ಗುಣಮುಖರಾಗಿದ್ದರೆ ಮಾತ್ರ ಐಪಿಎಲ್‌ನ ಉಳಿದ ಪಂದ್ಯಗಳಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಒಂದು ವೇಳೆ ಭುಜದ ನೋವಿನ ಸಮಸ್ಯೆಯಿದ್ದರೆ, ಅವರು ಪ್ಲೇಆಫ್ ಪಂದ್ಯದ ವೇಳೆ ಕಣಕ್ಕಿಳಿಯಬಹುದು. ಹೀಗಾಗಿ ಹೇಝಲ್‌ವುಡ್ ಆಗಮಿಸಿದರೂ ಲೀಗ್ ಹಂತದ ಪಂದ್ಯಗಳಲ್ಲಿ ಕಣಕ್ಕಿಳಿಯಲಿದ್ದಾರೆ ಎಂದು ಹೇಳಲಾಗುವುದಿಲ್ಲ.

ಇನ್ನು ಶನಿವಾರ ನಡೆಯಲಿರುವ ಲೀಗ್ ಹಂತದ 58ನೇ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಕೊಲ್ಕತ್ತಾ ನೈಟ್ ರೈಡರ್ಸ್ ತಂಡಗಳು ಮುಖಾಮುಖಿಯಾಗಲಿದೆ. ಈ ಪಂದ್ಯದಲ್ಲಿ ಜೋಶ್ ಹೇಝಲ್‌ವುಡ್ ಕಣಕ್ಕಿಳಿಯಬೇಕಿದ್ದರೆ ಅವರು ಶುಕ್ರವಾರ ತಂಡವನ್ನು ಕೂಡಿಕೊಳ್ಳಬೇಕು.

ಆದರೆ ಶನಿವಾರದೊಳಗೆ ಹೇಝಲ್‌ವುಡ್ ಆಗಮಿಸುವ ಬಗ್ಗೆ ಯಾವುದೇ ಖಚಿತ ಮಾಹಿತಿ ಹೊರಬಿದ್ದಿಲ್ಲ. ಹೀಗಾಗಿ ಕೆಕೆಆರ್ ವಿರುದ್ಧದ ಪಂದ್ಯಕ್ಕೆ ಅವರು ಅಲಭ್ಯರಾಗುವ ಸಾಧ್ಯತೆಯಿದೆ. ಅಲ್ಲದೆ ಪ್ಲೇಆಫ್ ಹಂತದ ಪಂದ್ಯಕ್ಕೂ ಮುನ್ನ ಆರ್‌ಸಿಬಿ ತಂಡವನ್ನು ಕೂಡಿಕೊಳ್ಳಬಹುದು.

## ಭಾರತಕ್ಕೂ ಸಿಗಲಿದೆ 10 ಕೋಟಿಗೂ ಅಧಿಕ ಹಣ



2025 ರ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್‌ನ ಫೈನಲ್ ಪಂದ್ಯದಲ್ಲಿ ಆಸ್ಟ್ರೇಲಿಯಾ ಮತ್ತು ದಕ್ಷಿಣ ಆಫ್ರಿಕಾ ಮುಖಾಮುಖಿಯಾಗುತ್ತಿವೆ. ಕ್ರಿಕೆಟ್ ಜಗತ್ತಿಗೆ ಹೊಸ ಟೆಸ್ಟ್ ಚಾಂಪಿಯನ್ ಸಿಗುತ್ತದೆಯೇ ಅಥವಾ ಆಸ್ಟ್ರೇಲಿಯಾ ಸತತ ಎರಡನೇ ಬಾರಿಗೆ ಪ್ರಶಸ್ತಿಯನ್ನು ಗೆಲ್ಲುತ್ತದೆಯೇ ಎಂಬುದು ಜೂನ್ 16 ರಂದು ಗೊತ್ತಾಗಲಿದೆ. ಆದರೆ ಅದಕ್ಕೂ ಮುನ್ನ ಐಸಿಸಿ ಈ ಸ್ಪರ್ಧೆಯ ಬಹುಮಾನದ ಮೊತ್ತವನ್ನು ಘೋಷಿಸಿದೆ. ಆ ಪ್ರಕಾರ ವಿಜೇತ ತಂಡಕ್ಕೆ ಸುಮಾರು 30 ಕೋಟಿ ರೂ. ಬಹುಮಾನ ಸಿಕ್ಕರೆ, ರನ್ನರ್ ಅಪ್ ತಂಡಕ್ಕೆ 18 ಕೋಟಿ ರೂ. ಸಿಗಲಿದೆ. ಫೈನಲಿಸ್ಟ್ ತಂಡಗಳಿಗೆ ಹೊರತಾಗಿ ಇತರ ತಂಡಗಳಿಗೂ ಐಸಿಸಿಯಿಂದ ಬಹುಮಾನ ದೊರಕಲಿದೆ. ಅಂದರೆ ಈ ಸೀಸನ್‌ನ ಫೈನಲ್‌ಗೇರುವಲ್ಲಿ ವಿಫಲವಾದ ಟೀಂ ಇಂಡಿಯಾಕ್ಕೂ 10 ಕೋಟಿ ಗೂ ಅಧಿಕ ಮೊತ್ತ ಬಹುಮಾನವಾಗಿ ಸಿಗಲಿದೆ.

ವಾಸ್ತವವಾಗಿ ಸತತ ಮೂರನೇ ಬಾರಿಗೆ ಫೈನಲ್‌ಗೇರುವ ಅವಕಾಶ ಟೀಂ ಇಂಡಿಯಾಕ್ಕಿತ್ತು. ಆದರೆ ಸತತ ಎರಡು ಸರಣಿಗಳನ್ನು ಸೋತ ಭಾರತದ ಡಬ್ಲ್ಯುಟಿಸಿ ಫೈನಲ್ ಕನಸು ಭಗ್ನವಾಗಿತ್ತು. ನ್ಯೂಜಿ ಲೆಂಡ್ ವಿರುದ್ಧದ ತವರು ಸರಣಿಯನ್ನು 3-0 ಅಂತರದಿಂದ ಸೋತಿದ್ದ ಭಾರತ ಆ ಬಳಿಕ ಬಾರ್ಡರ್-ಗವಾಸ್ಕರ್ ಟೆಸ್ಟ್ ಸರಣಿಯನ್ನು 3-1 ಅಂತರದಿಂದ ಸೋತಿತ್ತು. ಹೀಗಾಗಿ 50 ರಷ್ಟು ಗೆಲುವಿನ ಶೇಕಡಾವಾರುವಿನೊಂದಿಗೆ ಟೀಂ ಇಂಡಿಯಾ ಪಾಯಿಂಟ್ ಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿದೆ. ಆದಾಗ್ಯೂ ಟೀಂ ಇಂಡಿಯಾ ಐಸಿಸಿಯಿಂದ ಬಹುಮಾನದ ಹಣವನ್ನು ಪಡೆಯಲಿದೆ. ಭಾರತ ಮಾತ್ರವಲ್ಲದೆ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್‌ನಲ್ಲಿ ಭಾಗವಹಿಸಿದ ಪ್ರತಿಯೊಂದು ತಂಡಕ್ಕೂ ಐಸಿಸಿ ಬಹುಮಾನದ ಹಣವನ್ನು ಘೋಷಿಸಿದೆ.

**ಭಾರತಕ್ಕೆ 12 ಕೋಟಿ ರೂ. ಬಹುಮಾನ;** ಆ ಪ್ರಕಾರ ಪಾಯಿಂಟ್ ಪಟ್ಟಿಯಲ್ಲಿ ಮೂರನೇ ಸ್ಥಾನ ಪಡೆದಿರುವುದು ಭಾರತಕ್ಕೆ 1.4 ಮಿಲಿಯನ್ ಅಮೆರಿಕನ್ ಡಾಲರ್‌ಗಳು, ಅಂದರೆ 12 ಕೋಟಿ 85 ಲಕ್ಷ ರೂಪಾಯಿ ಬಹುಮಾನ ಸಿಗಲಿದೆ. ಹಾಗೆಯೇ ಪಾಯಿಂಟ್ಸ್ ಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿರುವ ನ್ಯೂಜಿಲೆಂಡ್ ತಂಡವು 1.2 ಮಿಲಿಯನ್ ಅಮೆರಿಕನ್ ಡಾಲರ್ ಅಂದರೆ 10 ಕೋಟಿ 26 ಲಕ್ಷ ರೂ.ಗಳನ್ನು ಪಡೆಯಲಿದೆ.

## ಟೈಟನ್ಸ್ ತಂಡಕ್ಕೆ ಶಾಕ್ ಕೊಟ್ಟ ಬಟ್ಲರ್



ಈ ಬಾರಿಯ ಐಪಿಎಲ್‌ನಲ್ಲಿ ಚಾಂಪಿಯನ್ ಪಟ್ಟಕ್ಕೇರುವ ಪ್ರಮುಖ ಸ್ಪರ್ಧಿಗಳಲ್ಲಿ ಗುಜರಾತ್ ಟೈಟನ್ಸ್ ಕೂಡ ಒಂದಾಗಿದೆ. ಪ್ರಸ್ತುತ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿರುವ ಗುಜರಾತ್‌ಗೆ ಇದೀಗ ದೊಡ್ಡ ಆಘಾತ ಎದುರಾಗಿದೆ. ತಂಡದ ಸ್ಟಾರ್ ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ಜೋಸ್ ಬಟ್ಲರ್ ಈ ಸೀಸನ್‌ನಲ್ಲಿ ಇನ್ನು ಮುಂದೆ ಆಡಲು ಸಾಧ್ಯವಾಗುವುದಿಲ್ಲ ಎಂದು ಫ್ರಾಂಚೈಸಿಗೆ ತಿಳಿಸಿದ್ದಾರೆ. ರಾಷ್ಟ್ರೀಯ ಕರ್ತವ್ಯದ ಕಾರಣದಿಂದಾಗಿ ಬಟ್ಲರ್ ಈ ನಿರ್ಧಾರವನ್ನು ತೆಗೆದುಕೊಂಡಿದ್ದಾರೆ. ಹೀಗಾಗಿ ಬಟ್ಲರ್ ಅವರ ಸ್ಥಾನದಲ್ಲಿ ಗುಜರಾತ್ ಟೈಟನ್ಸ್, ಶ್ರೀಲಂಕಾದ ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ಕುಸಲ್ ಮೆಂಡಿಸ್ ಅವರನ್ನು ತಮ್ಮ ತಂಡಕ್ಕೆ ಸೇರಿಸಿಕೊಳ್ಳಲಿದೆ ಎಂದು ವರದಿಯಾಗಿದೆ.

**ಉಳಿದ ಪಂದ್ಯಗಳನ್ನು ಬಟ್ಲರ್ ಆಡುವುದಿಲ್ಲ:** ಗುಜರಾತ್ ಟೈಟನ್ಸ್ ತಂಡದ ವಿಕೆಟ್ ಕೀಪರ್-ಬ್ಯಾಟ್ಸ್‌ಮನ್ ಜೋಸ್ ಬಟ್ಲರ್ ಮೇ 17 ರಿಂದ ಪ್ರಾರಂಭವಾಗುವ ಐಪಿಎಲ್ 2025 ರ ಉಳಿದ ಪಂದ್ಯಗಳನ್ನು ಆಡಲು ಸಾಧ್ಯವಾಗುವುದಿಲ್ಲ. ವೆಸ್ಟ್ ಇಂಡೀಸ್ ವಿರುದ್ಧದ ಟಿ20 ಮತ್ತು ಏಕದಿನ ಸರಣಿಗೆ ಇಂಗ್ಲೆಂಡ್ ತಂಡದಲ್ಲಿ ಬಟ್ಲರ್ ಅವರನ್ನು ಆಯ್ಕೆ ಮಾಡಲಾಗಿದೆ. ಇದರಿಂದಾಗಿ ಅವರು ಇನ್ನು ಮುಂದೆ ಗುಜರಾತ್ ಪರ ಪಂದ್ಯಗಳನ್ನು ಆಡಲು ಸಾಧ್ಯವಾಗುವುದಿಲ್ಲ ಎಂದು ತಮ್ಮ ಫ್ರಾಂಚೈಸಿಗೆ ತಿಳಿಸಿದ್ದಾರೆ.

ವರದಿಯ ಪ್ರಕಾರ, ಈ ಇಂಗ್ಲೆಂಡ್ ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ರಾಷ್ಟ್ರೀಯ ಕರ್ತವ್ಯದ ಕಾರಣದಿಂದಾಗಿ ಐಪಿಎಲ್ 2025 ರ ಉಳಿದ ಪಂದ್ಯಗಳಲ್ಲಿ ಇನ್ನು ಮುಂದೆ ಕಾಣಿಸಿಕೊಳ್ಳುವುದಿಲ್ಲ. ಅವರು ಈ ಮಾಹಿತಿಯನ್ನು ಗುಜರಾತ್ ಟೈಟನ್ಸ್‌ನ ಆಡಳಿತ ಮಂಡಳಿಗೆ ನೀಡಿದ್ದಾರೆ. ಹೀಗಾಗಿ ಪ್ರಸ್ತುತ ಪಾಕಿಸ್ತಾನ ಸೂಪರ್ ಲೀಗ್‌ನಲ್ಲಿ ಕ್ವೆಟ್ಟಾ ಗ್ಲಾಡಿಯೇಟರ್ಸ್ ಪರ ಆಡುತ್ತಿರುವ ಕುಸಲ್ ಮೆಂಡಿಸ್ ಅವರನ್ನು ಸೇರಿಸಿಕೊಳ್ಳಲು ಜಿಟಿ ಸಿದ್ಧತೆ ನಡೆಸುತ್ತಿದೆ.

**ಉತ್ತಮ ಫಾರ್ಮ್‌ನಲ್ಲಿದ್ದ ಬಟ್ಲರ್:** ಗುಜರಾತ್ ಟೈಟನ್ಸ್ ತಂಡದ ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ಜೋಸ್ ಬಟ್ಲರ್ ಈ ಸೀಸನ್‌ನಲ್ಲಿ ಉತ್ತಮ ಫಾರ್ಮ್‌ನಲ್ಲಿದ್ದರು. ಅವರು ಆಡಿದ 11 ಪಂದ್ಯಗಳ 11 ಇನ್ನಿಂಗ್ಸ್‌ಗಳಲ್ಲಿ 71.42 ಸರಾಸರಿಯಲ್ಲಿ 5 ಅರ್ಧಶತಕಗಳನ್ನು ಒಳಗೊಂಡಂತೆ 500 ರನ್ ಗಳಿಸಿದ್ದಾರೆ. ಈಗ ಅವರು ತಂಡದಿಂದ ಹೊರಗುಳಿದಿರುವುದು ಪ್ಲೇಆಫ್ ಪಂದ್ಯಗಳಲ್ಲಿ ಗುಜರಾತ್ ಟೈಟನ್ಸ್‌ನ ಸಮಸ್ಯೆಗಳನ್ನು ಹೆಚ್ಚಿಸಬಹುದು. ಇನ್ನು ಪಿಎಸ್‌ಎಲ್ 2025 ರಲ್ಲಿ ಕುಸಾಲ್ ಮೆಂಡಿಸ್ ಅವರ ಪ್ರದರ್ಶನದ ಬಗ್ಗೆ ಮಾತನಾಡಿದರೆ, ಅವರು ಕ್ವೆಟ್ಟಾ ಗ್ಲಾಡಿಯೇಟರ್ಸ್ ಪರ 8 ಪಂದ್ಯಗಳನ್ನು ಆಡಿದ್ದು, ಇದರಲ್ಲಿ ಅವರು 5 ಇನ್ನಿಂಗ್ಸ್‌ಗಳಲ್ಲಿ 35.75 ಸರಾಸರಿಯಲ್ಲಿ 143 ರನ್ ಗಳಿಸಿದ್ದಾರೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966